12 May 2026 Tuesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಕೆಟ್ಟ ಘಟನೆ ಒಂದೇ ಬಾರಿ ಘಟಿಸಿರುತ್ತದೆ,
ಆದರೆ ಮನಸ್ಸು ಮಾತ್ರ ಪದೇಪದೇ
ನೆನಪಿಸಿಕೊಂಡು ಅತಿ ಸಂಕಟ ಪಡುತ್ತದೆ!
-ಸ್ನೇಹಾ ಆನಂದ್

info.varthaman@gmail.com



ಬೆಂವಿವಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಗಂಗಾಧರ್ ವಿರುದ್ಧ ಆಕ್ರೋಶ — ಪುಟ ಸಂ. 2


ಸೇವೆಗೆ ಸಿಗದ ಕೆ.ಬೆಳತ್ತೂರು ಗ್ರಾಪಂ ಅಧಿಕಾರಿಗಳು — ಪುಟ ಸಂ. 3


ಮಹದೇಶ್ವರ ಬೆಟ್ಟದಲ್ಲಿ ಚಿರತೆ ದಾಳಿಗೆ ಬಾಲಕ ಬಲಿ — ಪುಟ ಸಂ. 4


9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 168 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಜು.1ರಿಂದ ವಿಬಿ ಜಿರಾಮ್‌ಜಿ ಜಾರಿ

**ನವದೆಹಲಿ:** ಕೇಂದ್ರ ಸರ್ಕಾರ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಬದಲಿಗೆ ರೂಪಿಸಿರುವ ವಿಕಸಿತ ಭಾರತ ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (ವಿಬಿ ಜಿರಾಮ್‌ಜಿ) ಕಾಯ್ದೆ ಜುಲೈ 1ರಿಂದ ಅನುಷ್ಠಾನಗೊಳ್ಳಲಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.




ಗ್ರಾಮೀಣಾಭಿವೃದ್ಧಿ ಸಚಿವಾಲಯ ಈ ಬಗ್ಗೆ ಅಧಿಸೂಚನೆ ಹೊರಡಿಸಿದೆ. ಜುಲೈ 1ರಿಂದ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ಕಾಯ್ದೆ ಜಾರಿಯಾಗಲಿದೆ. ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಗ್ಯಾರಂಟಿ ಕಾಯ್ದೆ 2005 (ನರೇಗಾ) ರದ್ದಾಗಲಿದೆ.

ಜೂನ್ 30ರಿಂದ ನರೇಗಾ ಅಡಿಯಲ್ಲಿ ನಡೆಯುತ್ತಿರುವ ಕೆಲಸಗಳನ್ನು ಬಾಕಿ ಉಳಿಸಿ ಹೊಸ ಚೌಕಟ್ಟಿಗೆ ವರ್ಗಾಯಿಸಲಾಗುತ್ತದೆ. ಅಸ್ತಿತ್ವದಲ್ಲಿರುವ ಇ-ಕೆವೈಸಿಯಾದ ನರೇಗಾ ಉದ್ಯೋಗ ಕಾರ್ಡ್‌ಗಳು ಹೊಸ ಗ್ರಾಮೀಣ ರೋಜ್‌ಗಾರ್ ಗ್ಯಾರಂಟಿ ಕಾರ್ಡ್‌ಗಳನ್ನು ನೀಡುವವರೆಗೆ ಮಾನ್ಯವಾಗಿರುತ್ತವೆ. ಜಾಬ್ ಕಾರ್ಡ್ ಇಲ್ಲದವರ ನೋಂದಣಿ ಮುಂದುವರಿಯುತ್ತದೆ ಎಂದು ತಿಳಿಸಿದೆ.

## ನೌಕರರ ತುಟ್ಟಿಭತ್ಯೆ ಹೆಚ್ಚಳ

**ಬೆಂಗಳೂರು:** ರಾಜ್ಯ ಸರ್ಕಾರಿ ನೌಕರರು ಹಾಗೂ ನಿವೃತ್ತ ವೇತನದಾರರಿಗೆ ರಾಜ್ಯ ಸರ್ಕಾರ ಸಿಹಿ ಸುದ್ದಿ ನೀಡಿದೆ. ತುಟ್ಟಿಭತ್ಯೆಯನ್ನು ಪ್ರಸ್ತುತ ಮೂಲ ವೇತನದ ಶೇ 14.25ರಿಂದ ಶೇ.15.75ಕ್ಕೆ ಹೆಚ್ಚಿಸಿ ಆದೇಶಿಸಿದೆ.



2024ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನವನ್ನು ಪಡೆಯುತ್ತಿರುವ ರಾಜ್ಯ ಸರ್ಕಾರಿ ನೌಕರರಿಗೆ 1ನೇ ಜನವರಿ 2026ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆ ದರಗಳನ್ನು ಪರಿಷ್ಕರಿಸಿದೆ. ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು, ಕುಟುಂಬ ನಿವೃತ್ತಿ ವೇತನ ದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿವ ಅನುದಾನಿತ ಶಿಕ್ಷಣ ಪುಟ 2ಕ್ಕೆ

## ಪ್ರಧಾನಿ 'ಚಿನ್ನದ ಮಾತಿಗೆ' ಷೇರು ಮಾರುಕಟ್ಟೆ ಕುಸಿತ!

**ಮುಂಬೈ:** ಪ್ರಧಾನಿ ಮೋದಿ ಭಾಷಣದ ಮರು ದಿನವೇ ಷೇರು ಮಾರುಕಟ್ಟೆ ದಿಢೀರ್ ಭಾರಿ ಪ್ರಮಾಣದ ಕುಸಿತ ಕಂಡಿದೆ. ಮಾರುಕಟ್ಟೆ ಕುಸಿತಕ್ಕೆ ಪ್ರಧಾನಿ ಮೋದಿ ಅವರ ಮಾತು ಕಾರಣ ಎನ್ನಲಾಗಿದೆ.



ಭಾರತೀಯ ಷೇರು ಮಾರುಕಟ್ಟೆಯ ಪ್ರಮುಖ ಸೂಚ್ಯಂಕಗಳು ಸೋಮವಾರ ರೆಡ್‌ನಲ್ಲಿ ಆರಂಭವಾಗಿವೆ. ಸೆನ್ಸೆಕ್ಸ್ ಮತ್ತು ನಿಫ್ಟಿ ದಿನದ ಆರಂಭಿಕ ವಹಿವಾಟನಲ್ಲೇ ಭಾರಿ ಅಂಶಗಳನ್ನು ಪುಟ 2ಕ್ಕೆ

## ಚಿರತೆ ದಾಳಿ ಆತಂಕ: ನಾಗಮಲೆಗೆ ನಿರ್ಬಂಧ

**ಚಾಮರಾಜನಗರ:** ಮಲೆ ಮಹದೇಶ್ವರ ಬೆಟ್ಟದ ನಾಗಮಲೆಯಲ್ಲಿ ಚಿರತೆ ದಾಳಿಯಿಂದ ಮೃತಪಟ್ಟ ಬಾಲಕನ ಕುಟುಂಬಕ್ಕೆ ಸರ್ಕಾರ 20 ಲಕ್ಷ ರೂ. ಪರಿಹಾರ ಘೋಷಿಸಿದೆ. ಮಹದೇಶ್ವರ ಬೆಟ್ಟದಿಂದ ನಾಗಮಲೆಗೆ ಹೋಗುವ ವೇಳೆ ಚಿರತೆ ದಾಳಿ ನಡೆಸಿತ್ತು. ಅರಣ್ಯ ಇಲಾಖೆ ಬಾಲಕನ ಕುಟುಂಬಸ್ಥರಿಗೆ 20 ಲಕ್ಷ ರೂ. ಪರಿಹಾರ ಘೋಷಿಸಿದೆ. ಈಗಾಗಲೇ 5 ಲಕ್ಷ ರೂ. ಚೆಕ್ ನೀಡಿದ್ದಾರೆ. ಇನ್ನುಳಿದ ಹಣವನ್ನು ಅಕೌಂಟ್ ಮಾಹಿತಿ ಪಡೆದು ಕಳುಹಿಸಲು ಸೂಚಿಸಲಾಗಿದೆ.



ಬಾಲಕನ ಕೊಂದ ಚಿರತೆಯ ಚಲನವಲನ ಥರ್ಮಲ್ ಡ್ರೋನ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹೀಗಾಗಿ ಅರಣ್ಯ ಇಲಾಖೆ ಚಿರತೆ ಸೆರೆಗೆ ಮುಂದಾಗಿದೆ. ನಾಲ್ಕು ಬೋನ್ ಅಳವಡಿಕೆ ಮಾಡಿದ್ದಾರೆ. ಅಲ್ಲದೇ ಸ್ಥಳದಲ್ಲಿ 30ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ ಬೀಡುಬಿಟ್ಟಿದ್ದಾರೆ. ಥರ್ಮಲ್ ಡ್ರೋನ್ ಟೀಂ ಕೂಡ ರಾತ್ರಿಯಿಡಿ ಚಿರತೆಯ ಮೇಲೆ ನಿಗಾ ವಹಿಸಿದ್ದಾರೆ. ಸದ್ಯಕ್ಕೆ ತಾತ್ಕಾಲಿಕವಾಗಿ ನಾಗಮಲೆಗೆ ಹೋಗಲೂ ಭಕ್ತರಿಗೆ ನಿರ್ಬಂಧ ಹೇರಲಾಗಿದೆ.

# ರಾಜೇಗೌಡ ಮತ್ತೆ ಶಾಸಕ

## ಶೃಂಗೇರಿ ಅಂಚೆ ಮತ ಎಣಿಕೆ | ಕೈ ಶಾಸಕನಿಗೆ ಸುಪ್ರೀಂ ರಿಲೀಫ್

**ಚಿತ್ರದುರ್ಗ:** ಶೃಂಗೇರಿ ಅಂಚೆ ಮತ ಮರು ಎಣಿಕೆಗೆ ಸುಪ್ರೀಂ ಕೋರ್ಟ್ ಬಿಗ್ ಟ್ವಿಸ್ಟ್ ನೀಡಿದೆ. ರಾಜೇಗೌಡ ಮತ್ತೇ ಶೃಂಗೇರಿ ಕ್ಷೇತ್ರದ ಶಾಸಕರಾಗಿದ್ದಾರೆ. ಈ ಮೂಲಕ ಜೀವರಾಜ್‌ಗೆ ನಿರಾಸೆ ಆಗಿದೆ.

ಬಿಜೆಪಿಯ ಜೀವರಾಜ್ ಶಾಸಕರಾಗಿ ಆಯ್ಕೆಯಾಗುವ ನಿಟ್ಟಿನಲ್ಲಿ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ತಡೆ ನೀಡಿದೆ. ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಆದೇಶಿಸಿದೆ. ಸುಪ್ರೀಂ ಆದೇಶದಿಂದ ರಾಜೇಗೌಡಗೆ ಬಿಗ್ ರಿಲೀಫ್ ಸಿಕ್ಕಿದೆ.



ರಾಜೇಗೌಡ ಅವರ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂಜಯ್ ಕುಮಾರ್ ನೇತೃತ್ವದ ದ್ವಿಸದಸ್ಯ ಪೀಠ, ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿದೆ. ಹೈಕೋರ್ಟ್‌ನ ಆದೇಶದಂತೆ ಶೃಂಗೇರಿ ಅಂಚೆ ಮತ ಮರು ಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿ ಜೀವರಾಜ್ ಮುನ್ನಡೆ ಸಾಧಿಸಿ ಗೆದ್ದಿದ್ದರು. ಮೊನ್ನೆ ಶಾಸಕರಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಹೈಕೋರ್ಟ್ ಆದೇಶ ಪ್ರಶ್ನಿಸಿ ಕಾಂಗ್ರೆಸ್ ಅಭ್ಯರ್ಥಿ ರಾಜೇಗೌಡ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಶೃಂಗೇರಿ ಕ್ಷೇತ್ರದ ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿದೆ. ಮತ ಮರು ಎಣಿಕೆ ಸಂಬಂಧ ದಾಖಲೆ ಸಲ್ಲಿಸಲು ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ಸದ್ಯಕ್ಕೆ ರಾಜೇಗೌಡ ಅವರ ಶಾಸಕತ್ವ ಊರ್ಜಿತವಾಗಿದೆ. ಅವರು ಶಾಸಕರಾಗಿ ಮುಂದುವರಿಯಲಿದ್ದಾರೆ.

ರಾಜೇಗೌಡ ಪರವಾಗಿ ಹಿರಿಯ ನ್ಯಾಯವಾದಿ ಕಪಿಲ್ ಸಿಬಲ್ ಪ್ರಬಲವಾದ ಮಂಡಿಸಿದರು. ಚುನಾವಣಾ ಆಯೋಗದ ನಡವಳಿಕೆಯ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಅವರು, ಮರುಎಣಿಕೆಯ ಸಂದರ್ಭದಲ್ಲಿ ಪಾರದರ್ಶಕತೆ ಇರಲಿಲ್ಲ ಎಂದು ವಾದಿಸಿದರು.

ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆಯಲ್ಲಿ 52 ಮತಗಳ ಅಂತರದಲ್ಲಿ ಜಯ ಸಾಧಿಸಿದ್ದರು. 2023ರ ಮತ ಎಣಿಕೆ ವೇಳೆ ಚಲಾವಣೆಯಾಗಿದ್ದ 1,822 ಅಂಚೆ ಮತಗಳ ಪೈಕಿ ಜೀವರಾಜ್ ಅವರಿಗೆ 692 ಮತಗಳು ಮತ್ತು ಕಾಂಗ್ರೆಸ್ ಅಭ್ಯರ್ಥಿ ರಾಜೇಗೌಡ ಅವರಿಗೆ 569 ಮತಗಳು ಲಭಿಸಿದ್ದವು. ಆದರೆ, ಮರು ಮತ ಎಣಿಕೆಯಲ್ಲಿ ಜೀವರಾಜ್ ಅವರ ಮತಗಳು 690 ಆದರೆ, ರಾಜೇಗೌಡರ ಮತಗಳು 314ಕ್ಕೆ ಇಳಿಯಿತು. ಹೀಗಾಗಿ, ರಾಜೇಗೌಡರಿಗೆ 255 ಮತಗಳು ಕಡಿಮೆಯಾಗಿದ್ದವು. ಎಣಿಕೆ ಪ್ರಕ್ರಿಯೆ ಮುಗಿದ ಬಳಿಕ ಈ ಬಗ್ಗೆ ಚುನಾವಣಾಧಿಕಾರಿ ಗೌರವಶೆಟ್ಟಿ ಮಾಹಿತಿ ನೀಡಿದ್ದರು. ಜೀವರಾಜ್ ಗೆಲುವು ಸಾಧಿಸಿದ್ದಾರೆ ಎಂದು ಘೋಷಿಸಿದ್ದರು.

## ನೂತನ ಸಿಎಂ ವಿಜಯ್‌ಗೆ ಸಿದ್ದರಾಮಯ್ಯ ಅಭಿನಂದನೆ



**ಬೆಂಗಳೂರು:** ತಮಿಳುನಾಡು ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ದೂರವಾಣಿ ಮೂಲಕ ಅಭಿನಂದನೆ ತಿಳಿಸಿದ್ದಾರೆ. 'ನೀವು ಇತಿಹಾಸ ನಿರ್ಮಿಸಿದ್ದೀರಿ' ಎಂದು ಶ್ಲಾಘಿಸಿದರು. ಬೆಂಗಳೂರಿಗೆ ಯಾವಾಗ ಬರುತ್ತೀರಿ? ಎಂದು ಆತ್ಮೀಯವಾಗಿ ಪ್ರಶ್ನಿಸಿ ಆಹ್ವಾನ ನೀಡಿದ್ದಾರೆ. ಚಿತ್ರರಂಗದಿಂದ ರಾಜಕೀಯಕ್ಕೆ ಬಂದ ವಿಜಯ್, ತಮಿಳುನಾಡಿನ ರಾಜಕೀಯದಲ್ಲಿ ಹೊಸ ಅಧ್ಯಾಯ ಆರಂಭಿಸಿದ್ದಾರೆ.

## ಎಂ.ಕೆ.ಸ್ಟಾಲಿನ್ ಭೇಟಿ ಮಾಡಿದ ಸಿಎಂ ವಿಜಯ್



**ಚೆನ್ನೈ:** ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ ಜೋಸೆಫ್ ವಿಜಯ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡ ಮರುದಿನ ಸೋಮವಾರ ಮಾಜಿ ಸಿಎಂ ಎಂ.ಕೆ.ಸ್ಟಾಲಿನ್ ಅವರನ್ನು ಭೇಟಿಯಾಗಿದ್ದಾರೆ. ಚೆನ್ನೈನಲ್ಲಿರುವ ಸ್ಟಾಲಿನ್ ನಿವಾಸಕ್ಕೆ ವಿಜಯ್ ಭೇಟಿ ನೀಡಿದ್ದಾರೆ. ಉಭಯ ನಾಯಕರು ಕೆಲಕಾಲ ಮಾತುಕತೆ ನಡೆಸಿದ್ದಾರೆ. ಹಿರಿಯ ನಾಯಕ ಕೆ.ಎ. ಸೆಂಗೊಟ್ಟೈಯನ್ ಮತ್ತು ಸಚಿವರಾದ ಡಾ.ಟಿ.ಕೆ.ಪ್ರಭು ಹಾಗೂ ಎಸ್.ಕೀರ್ತನಾ ಇದ್ದರು.

## ಕೆರೆಯಲ್ಲಿ ಈಜಲು ಹೋದ ಇಬ್ಬರು ಯುವಕರು ಸಾವು



**ಮಂಡ್ಯ:** ಕೆರೆಯಲ್ಲಿ ಈಜಲು ಹೋದ ಇಬ್ಬರು ಯುವಕರು ಮುಳುಗಿ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಯರಗನಹಳ್ಳಿ ಬಳಿ ಸೋಮವಾರ ನಡೆದಿದೆ. ಮೃತರನ್ನು ಪ್ರಕಾಶ್ ಗೌಡ (24) ಮತ್ತು ಯಶಸ್ (23) ಎಂದು ಗುರುತಿಸಲಾಗಿದೆ.

ಇವರಿಬ್ಬರೂ ತಮ್ಮ ಸ್ನೇಹಿತರೊಂದಿಗೆ ಯರಗನಹಳ್ಳಿ ಕೆರೆಯಲ್ಲಿ ಈಜಲು ಹೋದಾಗ ಈ ದುರ್ಘಟನೆ ನಡೆದಿದೆ. ಇಬ್ಬರೂ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಅವರ ಮೃತದೇಹಗಳನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಯ ನಂತರ ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ. ನೀರಿನಲ್ಲಿ ಮುಳುಗಲು ನಿಖರವಾದ ಕಾರಣ ಇನ್ನೂ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಯುವಕರು ಆಳ ನೀರಿಗೆ ಇಳಿ ದಿರಬಹುದು ಎಂದು ತಿಳಿದುಬಂದಿದೆ. ಮುಂದೆ ಇಂತಹ ಘಟನೆಗಳು ಸಂಭವಿಸದಂತೆ ಕೆರೆಯ ಸುತ್ತಲೂ ಎಚ್ಚರಿಕೆ ಫಲಕಗಳು ಮತ್ತು ಸುರಕ್ಷತಾ ಕ್ರಮಗಳನ್ನು ಅಳವಡಿಸಬೇಕೆಂದು ಸ್ಥಳೀಯರು ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸ್ಥಳಕ್ಕೆ ಭೇಟಿ ನೀಡಿ ಕುಟುಂಬಗಳಿಗೆ ಸಾಂತ್ವನ ಹೇಳಿದರು. ಈ ಸಂಬಂಧ ಬಿಂಡಿಗನವಿಲೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.





## ಕ್ಯಾನ್ ಗಳಿಗೆ ಇಂಧನ ಪೂರೈಕೆ ನಿಷೇಧ



**ಬೆಂಗಳೂರು:** ರಾಜ್ಯದಲ್ಲಿ ಇಂಧನ ಕೊರತೆಯಾಗದಂತೆ ಮುನ್ನೆಚ್ಚರಿಕೆ ವಹಿಸಲು ನಾಗರಿಕ ಹಾಗೂ ಆಹಾರ ಸರಬರಾಜು ಇಲಾಖೆಯು ಪೆಟ್ರೋಲ್ ಮತ್ತು ಡೀಸೆಲ್ ವಿತರಣೆಗೆ ಸಂಬಂಧಿಸಿದಂತೆ ಹೊಸ ಕಟ್ಟುನಿಟ್ಟಿನ ಮಾರ್ಗಸೂಚಿ ಹೊರಡಿಸಿದೆ. ಗ್ರಾಹಕರಿಗೆ ಕ್ಯಾನ್ ಅಥವಾ ಡಬ್ಬಗಳಲ್ಲಿ ಇಂಧನ ಮಾರಾಟ ಮಾಡುವಂತಿಲ್ಲ ಎಂದು ಆದೇಶಿಸಿದೆ. ಗ್ರಾಹಕರ ಸುರಕ್ಷತೆಯ ಕಾರಣಗಳಿಗಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಇಂಧನ ಪುಟ 2ಕ್ಕೆ

## ದೇಶದಲ್ಲಿ ಇಂಧನ ಕೊರತೆ ಇಲ್ಲ

### 60 ದಿನಗಳಿಗೆ ಸಾಕಾಗುವಷ್ಟು ತೈಲ ಸಂಗ್ರಹ: ಕೇಂದ್ರ ಸರ್ಕಾರ

**ನವದೆಹಲಿ:** ದೇಶದಲ್ಲಿ 60 ದಿನಗಳಿಗೆ ಬೇಕಾಗಷ್ಟು ಕಚ್ಚಾ ತೈಲ, 60 ದಿನಗಳಿಗೆ ಬೇಕಾಗುವಷ್ಟು ನೈಸರ್ಗಿಕ ಅನಿಲ ಮತ್ತು 45 ದಿನಗಳಿಗೆ ಬೇಕಾಗುವಷ್ಟು ಎಲ್‌ಪಿಜಿ ರೋಲಿಂಗ್ ಸ್ಟಾಕ್ ಅನ್ನು ಹೊಂದಿದೆ. ಯಾವುದೇ ಇಂಧನ ಕೊರತೆ ಇಲ್ಲ ಎಂದು ತಿಳಿಸಿದೆ.



ಪ್ರಧಾನಿ ನರೇಂದ್ರ ಮೋದಿ ಅವರು, ದೇಶದ ಜನರು ಕಡಿಮೆ ಇಂಧನ ಬಳಕೆ ಮಾಡಬೇಕು ಎಂದು ಹೇಳಿರುವುದು ಆತಂಕಕ್ಕೆ ಕಾರಣವಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ಈ ಹೇಳಿಕೆ ನೀಡಿದೆ. ದೇಶದ ವಿದೇಶಿ ವಿನಿಮಯ ಸಂಗ್ರಹ ಆರಾಮದಾಯಕವಾಗಿ 703 ಬಿಲಿಯನ್ ಅಮೆರಿಕನ್ ಡಾಲರ್ ಇದೆ. ಇದು ಆರ್ಥಿಕ ಸ್ಥಿರತೆಗೆ ಬಲ ನೀಡುತ್ತದೆ ಎಂದು ತಿಳಿಸಿದೆ.

ಅಂತರರಾಷ್ಟ್ರೀಯ ಕಚ್ಚಾ ತೈಲ ಬೆಲೆಗಳು ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಮುಂದುವರಿದಿರುವುದರಿಂದ ದೇಶವು ಭಾರಿ ವೆಚ್ಚವನ್ನು ಭರಿಸುತ್ತಿದೆ. ಪಶ್ಚಿಮ ಏಷ್ಯಾ ಸಂಘರ್ಷದ ನಂತರ ಭಾರತದ ತೈಲ ಮಾರುಕಟ್ಟೆ ಕಂಪನಿಗಳು ದಿನಕ್ಕೆ ಸುಮಾರು 1,000 ಕೋಟಿ ರೂ. ನಷ್ಟ ಅನುಭವಿಸುತ್ತಿವೆ. 2026ರ ಮೊದಲ ತ್ರೈಮಾಸಿಕದಲ್ಲಿ ಒಟ್ಟು ಕಡಿಮೆ ಚೇತರಿಕೆ ಸುಮಾರು 2 ಲಕ್ಷ ಕೋಟಿ ರೂ. ಮಟ್ಟ ತಲುಪಿದೆ. ಈ ನಷ್ಟವನ್ನು ಸರ್ಕಾರ ಮತ್ತು ಕಂಪನಿಗಳು ಹೊತ್ತುಕೊಳ್ಳುವ ಮೂಲಕ ಗ್ರಾಹಕರ ಮೇಲೆ ಬೆಲೆ ಏರಿಕೆಯ ಭಾರ ಕಡಿಮೆ ಮಾಡುವ ಪ್ರಯತ್ನ ನಡೆಯುತ್ತಿದೆ. ಸಂಘರ್ಷ ಆರಂಭವಾಗಿ ಸುಮಾರು 70 ದಿನಗಳು ಕಳೆದರೂ, ಅನೇಕ ದೇಶಗಳಲ್ಲಿ ಇಂಧನ ಬೆಲೆಗಳು ಶೇಕಡಾ 30ರಿಂದ 70ರವರೆಗೆ ಏರಿಕೆಯಾದರೆ, ಭಾರತದಲ್ಲಿ ಬೆಲೆಗಳನ್ನು ಬಹುಮಟ್ಟಿಗೆ ಸ್ಥಿರವಾಗಿರಿಸಲು ಸಾಧ್ಯವಾಗಿದೆ ಎಂದಿದೆ.

ಭಾರತವು ವಿಶ್ವದ ಮೂರನೇ ಅತಿದೊಡ್ಡ ತೈಲ ಸಂಸ್ಕರಣಾ ಸಾಮರ್ಥ್ಯ ಹೊಂದಿರುವ ದೇಶವಾಗಿದೆ. ನಾಲ್ಕನೇ ಅತಿದೊಡ್ಡ ಪೆಟ್ರೋಲಿಯಂ ಉತ್ಪನ್ನ ರಫ್ತು ಪುಟ 2ಕ್ಕೆ

## ಮೋದಿ ವೈಫಲ್ಯಗಳ ಪುರಾವೆ

### ದೇಶ ನಡೆಸುವ ಸಾಮರ್ಥ್ಯ ಕಳೆದುಕೊಂಡ ಪ್ರಧಾನಿ: ರಾಹುಲ್ ವಾಗ್ದಾಳಿ

**ನವದೆಹಲಿ:** ಮಧ್ಯಪ್ರಾಚ್ಯ ಸಂಘರ್ಷದ ಪರಿಣಾಮ ಎದುರಿಸಲು ಜನರು ಇಂಧನ ಬಳಕೆ ಕಡಿಮೆ ಮಾಡಬೇಕು. ಚಿನ್ನ ಖರೀದಿ ಹಾಗೂ ವಿದೇಶ ಪ್ರವಾಸವನ್ನು ಮುಂದೂಡಬೇಕು ಎಂದು ಕರೆ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತೀವ್ರ ವಾಗ್ದಾಳಿ ನಡೆಸಿದ್ದಾರೆ.



ಮೋದಿ ಅವರು ರಾಜಿ ಮಾಡಿಕೊಂಡ ಪ್ರಧಾನಮಂತ್ರಿಯಾಗಿದ್ದಾರೆ. ದೇಶ ನಡೆಸುವ ಸಾಮರ್ಥ್ಯವನ್ನು ಕಳೆದುಕೊಂಡಿದ್ದಾರೆಂದು ಕಿಡಿಕಾರಿದ್ದಾರೆ. 12 ವರ್ಷಗಳಲ್ಲಿ ದೇಶವನ್ನು ಇಂತಹ ಸ್ಥಿತಿಗೆ ತಳ್ಳಲಾಗಿದೆ. ಈಗ ಜನರಿಗೆ ಏನು ಖರೀದಿಸಬೇಕು. ಎಲ್ಲಿ ಹೋಗಬೇಕು ಎಂಬುದನ್ನೂ ಸರ್ಕಾರ ಹೇಳುವ ಪರಿಸ್ಥಿತಿ ಬಂದಿದೆ. ತಮ್ಮ ವೈಫಲ್ಯದಿಂದ ತಪ್ಪಿಸಿಕೊಳ್ಳಲು ಸರ್ಕಾರ ಹೊಣೆಗಾರಿಕೆಯನ್ನು ಜನರ ಮೇಲೆ ಹಾಕುತ್ತಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಮೋದಿ ಜೀ ಜನರಿಗೆ ತ್ಯಾಗ ಮಾಡಲು ಕರೆ ನೀಡಿದ್ದಾರೆ. ಚಿನ್ನ ಖರೀದಿಸಬೇಡಿ, ವಿದೇಶಕ್ಕೆ ಹೋಗಬೇಡಿ, ಪೆಟ್ರೋಲ್ ಕಡಿಮೆ ಬಳಸಿ, ರಸಗೊಬ್ಬರ ಹಾಗೂ ಅಡುಗೆ ಎಣ್ಣೆ ಬಳಕೆಯನ್ನು ಇಳಿಸಿ, ಮೆಟ್ರೋ ಬಳಸಿರಿ, ವರ್ಕ್ ಫ್ರಮ್ ಹೋಮ್ ಮಾಡಿ ಎಂದಿದ್ದಾರೆ. ಇವು ಸಲಹೆಗಳ ಮಾತಲ್ಲ, ಸರ್ಕಾರದ ವೈಫಲ್ಯದ ಸಾಕ್ಷಿ ಎಂದು ಟೀಕಿಸಿ ಟ್ವೀಟ್ ಮಾಡಿದ್ದಾರೆ.

ಅಮೆರಿಕಾ– ಇರಾನ್ ಯುದ್ಧ ಮೂರು ತಿಂಗಳು ಕಳೆದರೂ ದೇಶದ ಇಂಧನ ಭದ್ರತೆ ಕುರಿತು ಸರ್ಕಾರದ ಬಳಿ ಸ್ಪಷ್ಟ ಯೋಜನೆ ಇಲ್ಲ ಎಂದು ಕಾಂಗ್ರೆಸ್ ಆರೋಪಿಸಿದೆ.

## ಪ್ರಧಾನಿ ನರೇಂದ್ರ ಮೋದಿ 'ನುಡಿದಂತೆ ನಡೆಯಲಿ'

### ಮೊದಲು ನೀವು, ನಿಮ್ಮ ಸಚಿವರು, ಅಧಿಕಾರಿಗಳು ಅನುಸರಿಸಿ: ಡಿ.ಕೆ.ಶಿವಕುಮಾರ್ ತಿರುಗೇಟು

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರು ಸರಳವಾಗಿ ಬದುಕುವ ಬಗ್ಗೆ ಭಾಷಣ ಮಾಡುವ ಬದಲಿಗೆ ನೀವು ಮತ್ತು ನಿಮ್ಮ ಸಂಪುಟದ ಸಚಿವರು, ನಿಮ್ಮ ಪಕ್ಷ, ಕೇಂದ್ರ ಸರ್ಕಾರದ ಅಧಿಕಾರಗಳು ನಿಮ್ಮ ಮಾತನ್ನು ಮೊದಲು ಅನುಸರಿಸಲಿ. ನಂತರ ಜನರಿಗೆ ಬೋಧನೆ ಮಾಡಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತೀವ್ರ ವಾಗ್ದಾಳಿ ನಡೆಸಿದರು.

ದೇಶದ ಜನರಿಗೆ ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದ ವಿಚಾರವಾಗಿ ಮಾತನಾಡಿದ ಅವರು, ಮೋದಿ ಚಿನ್ನದ ಬೆಲೆ ಯಾಕೆ ಜಾಸ್ತಿ ಆಯ್ತು ಅಂತ ಹೇಳ್ತಿಲ್ಲ. ಪೆಟ್ರೋಲ್ ಬಳಕೆ ಕಡಿಮೆ ಮಾಡಿ ಅಂತ ಹೇಳ್ತಿದ್ದಾರೆ. ಆದರೆ ಬೆಲೆ ಯಾಕಾಯ್ತು ಅಂತ ಹೇಳ್ತಿಲ್ಲ. ಜನರಿಗೆ ಯಾರಿಂದ ತೊಂದರೆ ಆಯ್ತು ಅಂತ ಮೋದಿ ಅವರೇ ವಿವರ ನೀಡಬೇಕು. ಮದುವೆ, ಮುಂಜಿ ಮಾಡೋರು ಯಾರು ಚಿನ್ನ ತೆಗೆದುಕೊಳ್ಳಬೇಡಿ ಅಂತ ಹೇಳೋಕೆ ಆಗುತ್ತಾ? ನೀವು ಜನರಿಗೆ ಸಲಹೆ ಏನು ಬೇಕಿದ್ದರೂ ಕೊಡ್ತೀರಾ. ಆದರೆ ಕೊರೋನಾ ಸಮಯದಲ್ಲಿ ದೀಪ ಹಚ್ಚಿ ಅಂದ್ರಿ, ದೀಪ ಹಚ್ಚಿದ್ವಿ, ಚಪ್ಪಾಳೆ ತಟ್ಟಿ ಅಂದ್ರಿ, ಚಪ್ಪಾಳೆ ತಟ್ಟಿದ್ವಿ. ಏನಾದ್ರೂ ನಿಂತುಕೊಳ್ತಾ, ಏನೂ ನಿಲ್ಲಲಿಲ್ಲ. ನೀವು ಮೊದಲಿಗೆ ಕ್ಲಿಕಲ್ ಆಗಿ ಇರಬೇಕು ಎಂದು ಟೀಕಿಸಿದರು.



ಬದುಕಿನಲ್ಲಿ ಕಷ್ಟನೋ, ಸುಖನೋ, ಸಾಲ, ಸೋಲನೋ ಮಾಡಿ ಅವರು ಜೀವನ ಮಾಡ್ತಾರೆ. ಓಡಾಟ ನಡೆಸೋರಿಗೆಲ್ಲ ಸರ್ಕಾರಿ ಬಸ್‌ನಲ್ಲಿ ಓಡಾಡಿ ಅಂದರೆ ಆಗುತ್ತಾ? ಮೊದಲು ನಿಮ್ಮ ಆಫೀಸರ್‌ಗಳಿಗೆ ಹೇಳಿ. ಕೇಂದ್ರ ಸರ್ಕಾರದ ಆಫೀಸರ್‌ಗಳು ನಿಮ್ಮ ಗಾಡಿಗಳಲ್ಲಿ ಓಡಾಡಬೇಡಿ ಮೆಟ್ರೋ ಅಥವಾ ಸರ್ಕಾರಿ ಬಸ್‌ನಲ್ಲಿ ಹೋಗಿ ಅಂತ ಹೇಳಿ. ಮೊದಲು ಅಧಿಕಾರಿಗಳಿಗೆ, ನಿಮ್ಮ ಸೆಂಟ್ರಲ್ ಮಿನಿಸ್ಟರ್‌ಗಳಿಗೆ ತಾಕೀತು ಮಾಡಿ ಎಂದು ತಿರುಗೇಟು ನೀಡಿದರು.

ನಿಮ್ಮ ಸರ್ಕಾರದ ಎಲ್ಲ ಮಂತ್ರಿಗಳಿಗೆ ತಾಕೀತು ಮಾಡಿ. ನೀವು ಯಾರೂ ಇನ್ನು ಮುಂದೆ ಪೆಟ್ರೋಲ್ ಗಾಡಿಯಲ್ಲಿ ಹೋಗಬೇಡಿ. ಸರ್ಕಾರಿ ಬಸ್‌ನಲ್ಲಿ ಹೋಗಿ, ಮೆಟ್ರೋ ಮತ್ತು ಟ್ರೈನ್‌ನಲ್ಲಿ ಹೋಗಿ ಅಂತ ಅವರಿಗೆಲ್ಲ ಹೇಳಲಿ. ಮೊದಲು ನೀವು ನುಡಿದಂತೆ ನಡೆದುಕೊಳ್ಳಬೇಕು. ಆಮೇಲೆ ಸಾಮಾನ್ಯ ಜನರಿಗೆ ಹೇಳಬೇಕು. ನಾನು ಐಷಾರಾಮಿ ಕಾರು ಇಟ್ಟುಕೊಂಡು ನಾನು ಮಾತ್ರ ಐಷಾರಾಮಿ ಕಾರಲ್ಲಿ ಓಡಾಡೋದು, ಸಾಮಾನ್ಯ ಜನ ನಾರ್ಮಲ್ ಆಗಿ ಓಡಾಡಬೇಕು ಎಂದರೆ, ಇದೆಲ್ಲ ಆಗದೇ ಇರುವ ಕಥೆ ಎಂದು ಪುಟ 2ಕ್ಕೆ

## ಬೆಂಗಳೂರು ಜನರಿಗೆ 13ಕ್ಕೆ ಬಿಗ್ ಗಿಫ್ಟ್!

**ಬೆಂಗಳೂರು:** ಬೆಂಗಳೂರು ಜನರಿಗೆ ಮೇ 13ಕ್ಕೆ ಬಿಗ್ ಗಿಫ್ಟ್ ನೀಡಲಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ಮಾಧ್ಯಮದವರೊಂದಿಗೆ ಸೋಮವಾರ ಮಾತನಾಡಿದ ಅವರು, ಸುರ್ಜೇವಾಲ ಜೊತೆ ರಾಜಕೀಯವಾಗಿ ಸಭೆ ಮಾಡಿದ್ದೇವೆ. ಈಗ ಅಧಿಕಾರಿಗಳನ್ನು ಕರೆದು ಸೂಚನೆ ಕೊಟ್ಟಿದ್ದೇನೆ. ಮೇ 13ರಂದು ಬೆಂಗಳೂರು ಜನರಿಗೆ ಒಂದು ದೊಡ್ಡ ಗ್ಯಾರಂಟಿ, ಬಿಗ್ ಗಿಫ್ಟ್ ಕೊಡಲಿದ್ದೇವೆ. ಅದನ್ನು ಮೇ 13ರಂದೇ ತಿಳಿಸುತ್ತೇನೆ ಎಂದು ಹೇಳಿದ್ದಾರೆ.

## ಪಂಚಭೂತಗಳಲ್ಲಿ ಡಿ.ಸುಧಾಕರ್ ಲೀನ

**ಚಿತ್ರದುರ್ಗ:** ಹಿರಿಯೂರು ಶಾಸಕ ಹಾಗೂ ಸಚಿವ ಡಿ.ಸುಧಾಕರ್ ಪಂಚಭೂತಗಳಲ್ಲಿ ಲೀನವಾದರು. ಪಾವಗಡ ರಸ್ತೆಯ ಜೈನ ಮುಕ್ತಿಧಾಮದಲ್ಲಿ ಸೋಮವಾರ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯ ಸಂಸ್ಕಾರ ನಡೆಯಿತು. ಪುತ್ರ ಸುಹಾಸ್ ಅಂತಿಮ ಕ್ರಿಯೆಗಳನ್ನು ನಡೆಸಿದರು. ಜೈನ ಸಂಪ್ರದಾಯದಂತೆ ಅಂತಿಮ ಸಂಸ್ಕಾರ ನಡೆಸಲಾಯಿತು. ಸುಧಾಕರ್ ಅವರ ಪಾರ್ಥಿವ ಶರೀರಕ್ಕೆ ಪುತ್ರ ಸುಹಾಸ್ ಅಗ್ನಿ ಸ್ಪರ್ಶ ಮಾಡಿದರು. ತೀವ್ರ ಅನಾರೋಗ್ಯ ಸಚಿವ ಡಿ.ಸುಧಾಕರ್ ಭಾನುವಾರ ನಿಧನರಾಗಿದ್ದರು. ಅಂತ್ಯ ಸಂಸ್ಕಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪೀಕರ್ ಯುಟಿ ಖಾದರ್, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಶಾಸಕರು ಭಾಗಿಯಾಗಿದ್ದರು.





# ಮತದಾನದ ಹಕ್ಕಿನಿಂದಲೇ ಅಸ್ಪೃಶ್ಯತೆ ನಿವಾರಣೆ



ಮೈಸೂರು: ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ನೀಡಿದ ಮತದಾನದ ಹಕ್ಕಿನ ಮಹತ್ವವನ್ನು ಅರಿಯದಿದ್ದರೆ ಸಮಾಜದಲ್ಲಿನ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂದು ಬಿಎಸ್ಪಿ ಮುಖಂಡ ಡಾ. ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

ನಗರದ ಲಾಲ್ಬಹದ್ದೂರ್ ಶಾಸ್ತ್ರಿ ನಗರ, ಗೋಪಾಲಗೌಡ ಶಾಂತವೇರಿ ನಗರ ಹಾಗೂ ಸಹೃದಯ ನಗರದ ಸಂಯುಕ್ತ ಆಶ್ರಯದಲ್ಲಿನ ಡಾ. ಬಿ.ಆರ್. ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಅವರು ಮಾತನಾಡಿದರು.

"ಇಂದು ನಾವು ಉತ್ತಮ ಮನೆ, ಬಟ್ಟೆ ಹಾಗೂ ಗೌರವಯುತ ಜೀವನ ಹೊಂದಿದ್ದರೆ ಅದಕ್ಕೆ ಅಂಬೇಡ್ಕರ್ ಅವರ ಹೋರಾಟವೇ ಕಾರಣವೇ ಹೊರತು, ಯಾವುದೇ ದೇವರ ವರವಲ್ಲ. ಬಾಬಾಸಾಹೇಬರು ಮುನ್ನಡೆಸಿದ ವಿಮೋಚನಾ ರಥವು ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ ಎಂಬ ನಾಲ್ಕು ಚಕ್ರಗಳನ್ನು ಹೊಂದಿದೆ. ಸಮಾಜದಲ್ಲಿ ಎಲ್ಲರಂತೆ ಸ್ವಾಭಿಮಾನದಿಂದ ಬದುಕುವುದು ಸಾಮಾಜಿಕ ಹಕ್ಕು ಹಾಗೂ ದೇಶದ ಸಂಪತ್ತಿನಲ್ಲಿ ಸಮಪಾಲು ಪಡೆಯುವುದು ಆರ್ಥಿಕ ಹಕ್ಕಾಗಿದೆ," ಎಂದು ವಿವರಿಸಿದರು.

"ರಾಜರು ರಾಣಿಯ ಗರ್ಭದಿಂದ ಹುಟ್ಟುವ ಬದಲು ಬ್ಯಾಲೆಟ್ ಬಾಕ್ಸ್ನಿಂದ (ಮತಪೆಟ್ಟಿಗೆ) ಹುಟ್ಟುತ್ತಾರೆ ಎಂಬ ಅಂಬೇಡ್ಕರ್ ಅವರ ಮಾತನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ಮತವನ್ನು ಮಾರಿಕೊಳ್ಳದೆ ರಾಜಕೀಯ ಹಕ್ಕನ್ನು ಚಲಾಯಿಸಬೇಕು. ಹಾಗೆಯೇ, ಅಸಮಾನತೆಯ ಧರ್ಮವನ್ನು ತಿರಸ್ಕರಿಸಿ ಬೌದ್ಧ ಧರ್ಮವನ್ನು ಅನುಸರಿಸಿದಾಗ ಮಾತ್ರ ಅಸ್ಪೃಶ್ಯತೆ ನಿವಾರಣೆ ಸಾಧ್ಯ," ಎಂದು ಕಿವಿಮಾತು ಹೇಳಿದರು. ಮುಖ್ಯ ಅತಿಥಿಯಾಗಿದ್ದ ಪ್ರೊ. ಸೌಭಾಗ್ಯವತಿ ಮಾತನಾಡಿ, "ಮಹಿಳೆಯರ ಸ್ವಾಭಿಮಾನದ ಬದುಕಿಗೆ ಶ್ರಮಿಸಿದ ಮಹಾನ್ ನಾಯಕ ಅಂಬೇಡ್ಕರ್. ಸಮಾಜಕ್ಕೆ ಅವರು ನೀಡಿದ ಕೊಡುಗೆ ಅಪಾರ," ಎಂದರು. ಸಂಘದ ಉಪಾಧ್ಯಕ್ಷ ಗಂಗಾಧರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಬಿ.ಸಿ. ಮಹದೇವಯ್ಯ, ಎಲೆಕ್ಟ್ರಿಕಲ್ ಗುತ್ತಿಗೆದಾರ ಮಹದೇವಸ್ವಾಮಿ, ಸಹಾಯಕ ಪ್ರಾಧ್ಯಾಪಕ ಬಿ.ಪಿ. ನಾಗರಾಜು ಉಪಸ್ಥಿತರಿದ್ದರು.

### ಕೇವಲ ಆಚರಣೆಯಾಗದಿರಲಿ

**ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಹಿಂದ ಜವರಪ್ಪ, "ನಾವು ಕೇವಲ ಜಯಂತಿ ಆಚರಣೆಗಳಿಗೆ ಸೀಮಿತವಾಗದೆ, ಬಾಬಾಸಾಹೇಬರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸ್ವಾತಂತ್ರ್ಯ ಬಂದು ದಶಕಗಳೇ ಕಳೆದರೂ ಇಂದಿಗೂ ಹಲವೆಡೆ ಅಸ್ಪೃಶ್ಯತೆ ಜೀವಂತವಾಗಿರುವುದು ನೋವಿನ ಸಂಗತಿ. ಸರ್ಕಾರಗಳು ನಮಗೆ ಸಿಗಬೇಕಾದ ಅವಕಾಶಗಳನ್ನು ಯಾವುದೋ ಕಾರಣ ನೀಡಿ ವಂಚಿಸುತ್ತಲೇ ಬಂದಿವೆ," ಎಂದು ಬೇಸರ ವ್ಯಕ್ತಪಡಿಸಿದರು.**

# ಮೇ24 ದೆಹಲಿ ಚಲೋ



ಮೈಸೂರು: ಮೇ 24 ರಂದು ನವ ದೆಹಲಿಯಲ್ಲಿ ನಡೆಯುವ ಜನಜಾತಿ ಸಾಂಸ್ಕೃತಿಕ ಸಮಾಗಮ ದೆಹಲಿ ಚಲೋದಲ್ಲಿ ದೇಶದಾದ್ಯಂತದಿಂದ ಒಂದೂವರೆ ಲಕ್ಷ ಬುಡಕಟ್ಟು ಜಾತಿಯವರು ಪಾಲ್ಗೊಳ್ಳಲಿದ್ದಾರೆ. ಮೈಸೂರು ಜಿಲ್ಲೆಯಿಂದಲೂ ಸುಮಾರು 1200 ಮಂದಿ ಭಾಗವಹಿಸಲಿದ್ದಾರೆ ಎಂದು ಗಿರಿಜನ ಸುರಕ್ಷಾ ವೇದಿಕೆ ಅಧ್ಯಕ್ಷ ಡಾ. ಗಣೇಶ್ ಎಚ್.ಡಿ. ಕೋಟೆ ಮಾಹಿತಿ ನೀಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಂದು ಮಹಾನ್ ಜನ ನಾಯಕ ಭಗವಾನ್ ಬಿರ್ಸಾ ಮುಂಡಾ ಅವರ 150 ನೇ ಜಯಂತಿ ಅಂಗವಾಗಿ ಈ ಕಾರ್ಯಕ್ರಮ ನಡೆಯಲಿದೆ. ದೇಶದ ವಿವಿಧ ಭಾಗಗಳಿಂದ ಸುಮಾರು 500 ಜನಜಾತಿಗಳ ಎಸ್‌ಟಿ ಸಮುದಾಯದ ಸುಮಾರು ಒಂದೂವರೆ ಲಕ್ಷಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆಂದರು.

ಸಂಯೋಜಕ ಗಂಗಾಧರ ನಾಯಕ್ ತಿಂಥಣಿ ಮಾತನಾಡಿ, ಅಂದು ಮಧ್ಯಾಹ್ನ 3 ರ ವೇಳೆಗೆ ದೆಹಲಿಯ ಐದು ಭಾಗಗಳಿಂದ ಭವ್ಯ ಶೋಭಾಯಾತ್ರೆ ಹೊರಡಲಿದೆ. ಇದರಲ್ಲಿ ಗಿರಿಜನರು ತಮ್ಮದೇ ಆದ ಉಡುಗೆ, ತೊಡುಗೆ, ವಾದ್ಯಗಳೊಂದಿಗೆ ಪಾಲ್ಗೊಳ್ಳಲಿದ್ದಾರೆ. ನಂತರ ಕೆಂಪು ಕೋಟೆ ಆವರಣದಲ್ಲಿ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಇದರಲ್ಲಿ ಭಾಗಿಯಾಗಲಿದ್ದಾರೆ. ಮೇ 20 ರಂದು ರಾತ್ರಿ ನಗರದ ರೈಲ್ವೆ ನಿಲ್ದಾಣದಿಂದ ವಿಶೇಷ ರೈಲಿನಲ್ಲಿ ಎಚ್.ಡಿ. ಕೋಟೆ, ಪಿರಿಯಾಪಟ್ಟಣ, ಹುಣಸೂರು ಮೊದಲಾದ ಕಡೆಗಳಿಂದ ಸುಮಾರು 1200 ಮಂದಿ ದೆಹಲಿಗೆ ಪ್ರಯಾಣಿಸಲಿದ್ದಾರೆ. ಇವರೆಲ್ಲ ತಮ್ಮದೇ ಹಣ ಹಾಕಿಕೊಂಡು ಪ್ರಯಾಣಿಸುತ್ತಿರುವುದು ವಿಶೇಷ ಎಂದರು. ಸಮಾವೇಶದಲ್ಲಿ ಗಿರಿಜನರ ವಿಶಿಷ್ಟ ಪ್ರತಿನಿಧಿಗಳು, ಸಾಧಕರು, ಮುಖಂಡರು ವಿಷಯ ಮಂಡಿಸಲಿದ್ದಾರೆಂದು ಮಾಹಿತಿ ನೀಡಿದರು. ರಾಜು, ಕಾಮರಾಜ್, ದೇವವಾಜ್ ಟಿ. ಕಾಟೂರು ಇನ್ನಿತರರು ಇದ್ದರು.

**ಮೊದಲ ಪುಟದಿಂದ**

### ನೌಕರರ ತುಟ್ಟಿಭತ್ಯೆ ಹೆಚ್ಚಳ

ಸಂಸ್ಥೆಗಳ ನಿವೃತ್ತಿ ವೇತನದಾರರು, ಕುಟುಂಬ ನಿವೃತ್ತಿ ವೇತನದಾರರಿಗೂ ಸಹ 1ನೇ ಜನವರಿ 2026ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆಯ ದರಗಳನ್ನು ಶೇಕಡ 14.25ರಿಂದ ಶೇಕಡ 15.75ಕ್ಕೆ ಹೆಚ್ಚಿಸಲಾಗಿದೆ. ಪೂರ್ವಾನ್ವಯ ಆಗುವಂತೆ ಶೇ 1.50ರಷ್ಟು ತುಟ್ಟಿಭತ್ಯೆ ಹೆಚ್ಚಿಸಲಾಗಿದೆ.

### ಪ್ರಧಾನಿ 'ಚಿನ್ನದ ಮಾತಿಗೆ' ಷೇರು ಮಾರುಕಟ್ಟೆ ಕುಸಿತ!

ಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ ದೇಶದ ವಿದೇಶಿ ವಿನಿಮಯ ಉಳಿಸಲು ಚಿನ್ನ ಕೊಳ್ಳ ದಂತೆ ನಾಗರಿಕರಿಗೆ ಮನವಿ ಮಾಡಿದ ಬಳಿಕ ಆಭ ರಣ ವಲಯದ ಷೇರುಗಳು ತೀವ್ರ ಮಾರಾಟದ ಒತ್ತಡಕ್ಕೆ ಒಳಗಾಗಿ ಕುಸಿತ ಕಂಡಿವೆ.

ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ್ದ ಪ್ರಧಾನಿ ಮೋದಿ, ವಿದೇಶಿ ವಿನಿಮಯ ಹೊರಹರಿವಿನ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಒಂದು ವರ್ಷದವರೆಗೆ ಅನಗತ್ಯ ಚಿನ್ನದ ಖರೀದಿಯನ್ನು ತಪ್ಪಿಸುವಂತೆ ಜನರನ್ನು ಅವರು ವಿನಂತಿಸಿದ್ದರು.

### ಕ್ಯಾನ್‌ಗಳಿಗೆ ಇಂಧನ ನಿಷೇಧ

ವಿತರಣಾ ಕೇಂದ್ರಗಳಿಗೆ ಪ್ರಮುಖ ಸೂಚನೆಗಳನ್ನು ನೀಡಲಾಗಿದೆ. ಇಲಾಖೆಯ ಈ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದೆ. ನಿಯಮ ಉಲ್ಲಂಘಿಸುವ ಪೆಟ್ರೋಲ್ ಬಂಕ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

### ದೇಶದಲ್ಲಿ ಇಂಧನ ಕೊರತೆ ಇಲ್ಲ

ರಾಷ್ಟ್ರವಾಗಿದೆ. 150ಕ್ಕೂ ಹೆಚ್ಚು ದೇಶಗಳಿಗೆ ಇಂಧನ ರಫ್ತು ಮಾಡುತ್ತಿರುವ ಭಾರತ, ತನ್ನ ದೇಶೀಯ ಬೇಡಿಕೆಯನ್ನು ಸಂಪೂರ್ಣವಾಗಿ ಪೂರೈಸುತ್ತಿದೆ ಎಂದು ಹೇಳಿದೆ.

### ಪ್ರಧಾನಿ ನರೇಂದ್ರ ಮೋದಿ 'ನುಡಿದಂತೆ ನಡೆಯಲಿ'

ವ್ಯಂಗ್ಯವಾಡಿದರು. ತ್ಯಾಗಕ್ಕೂ ಸಿದ್ಧರಾಗಿರಬೇಕು ಅನ್ನೋ ಮೋದಿ ಹೇಳಿಕೆ ವಿಚಾರವಾಗಿ ಮಾತನಾಡಿ, ಮೊದಲು ನಮ್ಮಿಂದ ಶುರು ಮಾಡಿಸಲಿ. ಬಿಜೆಪಿ ಸರ್ಕಾರ ಇರುವ ಎಲ್ಲ ರಾಜ್ಯ ಸರ್ಕಾರದಿಂದ ಶುರು ಮಾಡಲಿ. ಅವರ ಶಾಸಕರು, ಕಾರ್ಯಕರ್ತರು, ಮುಖಂಡರಿಂದ ತ್ಯಾಗ ಶುರು ಮಾಡಲಿ. ಆ ಮೇಲೆ ಬೇರೆಯವರು ತ್ಯಾಗ ಮಾಡಲಿ ಎಂದು ವಾಗ್ದಾಳಿ ನಡೆಸಿದರು.

# ಅಮಾನತ್ತಿಗೆ ಆಗ್ರಹಿಸಿ ಪ್ರತಿಭಟನೆ

## ಬೆಂಗಳೂರು ವಿವಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಗಂಗಾಧರ್ ವಿರುದ್ಧ ಆಕ್ರೋಶ




ರಾಮನಗರ: ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಂದು ವಿಶೇಷ ಉಪನ್ಯಾಸ, ವಿಚಾರ ಸಂಕಿರ್ಣಗಳನ್ನು ಏರ್ಪಡಿಸುತ್ತಿಲ್ಲ, ಬೆಂಗಳೂರು ವಿವಿಯ ಸ್ನಾತಕೋತ್ತರ ಪದವಿ ಕೇಂದ್ರದಲ್ಲಿ ಮೂಲ ಸೌಕರ್ಯಗಳ ಕೊರತೆಯೂ ಇದೆ. ಆದರೆ ಇದ್ಯಾವುದರ ಬಗ್ಗೆಯೂ ಕೇಂದ್ರ ನಿರ್ದೇಶಕ ಗಂಗಾಧರ್ ಸ್ಪಂದಿಸುತ್ತಿಲ್ಲ ಹೀಗಾಗಿ ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಬೇಕು ಎಂದು ಒತ್ತಾಯಿಸಿ ಸಮತಾ ಸೈನಿಕ ದಳದ ಯುವ ಘಟಕದ ನೇತೃತ್ವದಲ್ಲಿ ವಿದ್ಯಾರ್ಥಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಸೋಮವಾರ ತರಗತಿಗಳಿಗೆ ಹಾಜರಾಗದ ವಿದ್ಯಾರ್ಥಿಗಳು ಸ್ನಾತಕೋತ್ತರ ಕೇಂದ್ರದ ಎದುರು ಜಮಾಯಿಸಿ ಕೇಂದ್ರದ ನಿರ್ದೇಶಕರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಇದರೊಟ್ಟಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು ಎಂದು ಆಗ್ರಹಿಸಿದರು. ನಿರ್ದೇಶಕ ಗಂಗಾಧರ್ ಶೈಕ್ಷಣಿಕ ಸವಲತ್ತುಗಳನ್ನು ಒದಗಿಸದೆ ವಂಚಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ಸ್ನಾತಕೋತ್ತರ ಕೇಂದ್ರದಲ್ಲಿ ಅರ್ಥಶಾಸ್ತ್ರ, ಇತಿಹಾಸ , ಕನ್ನಡ ಹಾಗೂ ಗಣಿತ ವಿಭಾಗಗಳಲ್ಲಿ ಪೂರ್ಣ ಪ್ರಮಾಣದ ಉಪನ್ಯಾಸಕರ ಕೊರತೆ ಇದೆ. ಪ್ರತಿಯೊಂದು ವಿಭಾಗಕ್ಕೂ ಕನಿಷ್ಠ ಒಬ್ಬ ಹೆಚ್ಚುವರಿ ಉಪನ್ಯಾಸಕರ ಅಗತ್ಯವಿದೆ. ಉಪನ್ಯಾಸಕರ ಕೊರತೆಯಿಂದ ತರಗತಿಗಳು ನಿಯಮಿತವಾಗಿ ನಡೆಯುತ್ತಿಲ್ಲ. ಪಠ್ಯಕ್ರಮವನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಪರೀಕ್ಷೆಗಳಿಗೆ ಸಮರ್ಪಕವಾಗಿ ಸಿದ್ಧರಾಗಲು ಕಷ್ಟವಾಗಿದೆ ಎಂದು ದೂರಿದರು.

ಕೇಂದ್ರದಲ್ಲಿ ಪ್ರತಿವರ್ಷ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಂದು ವಿಶೇಷ ಉಪನ್ಯಾಸ ಹಾಗೂ ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತಿತ್ತು. ಸಾಂಸ್ಕೃತಿಕ ಮತ್ತು ಕ್ರೀಡಾ ದಿನಾಚರಣೆ ಹಮ್ಮಿಕೊಳ್ಳಲಾಗುತ್ತಿತ್ತು. ಕೇಂದ್ರದ ನಿರ್ದೇಶಕರಾಗಿ ಗಂಗಾಧರ್ ನೇಮಕಗೊಂಡ ಬಳಿಕ ಕಳೆದ ಎರಡು ವರ್ಷಗಳಿಂದ ಇದ್ಯಾವ ಕಾರ್ಯಕ್ರಮಗಳು ನಡೆಯುತ್ತಿಲ್ಲ ಎಂದು ಆರೋಪಿಸಿದರು.

ಈ ಬಗ್ಗೆ ನಿರ್ದೇಶಕ ಗಂಗಾಧರ್ ಅವರನ್ನು ಕೇಳಿದರೆ ಸಮರ್ಪಕವಾದ ಉತ್ತರ ನೀಡುತ್ತಿಲ್ಲ. ಹಲವು ವಿದ್ಯಾರ್ಥಿಗಳಿಗೆ ಪರೀಕ್ಷಾ ನೋಂದಣಿ ಪತ್ರ ನೀಡದೆ ಧಮ್ಕಿ ಹಾಕುತ್ತಿದ್ದಾರೆ ಎಂದು ವಿದ್ಯಾರ್ಥಿಗಳು ದೂರಿದರು.

ಪ್ರತಿಭಟನೆಯಲ್ಲಿ ಅಂಬೇಡ್ಕರ್ ಸೇನೆ ಜಿಲ್ಲಾಧ್ಯಕ್ಷ ಕಿರಣ್ ಸಾಗರ್, ಭೀಮ್ ಆರ್ಮಿ ಸಂಘಟನೆ ಮುಖಂಡ ಪರಮೇಶ್, ಮುಖಂಡರಾದ ವಿನೋದ್ ರಾಜ್, ಮಧುಕುಮಾರ್, ನಂಜುಂಡ, ಬಿಡದಿ ಶಂಕರ್, ಪುನೀತ್, ಶಿವು, ರಾಜಶೇಖರ್, ಪೂರ್ಣಿಮಾ ಮತ್ತಿತರರು ಭಾಗವಹಿಸಿದ್ದರು.

### ಉಪನ್ಯಾಸಕರ ಕೊರತೆ ಇದೆ – ಎನ್.ಸುರೇಶ್

**ಪ್ರತಿಭಟನೆಯಲ್ಲಿ ಮಾತನಾಡಿದ ಸಮತಾ ಸೈನಿಕ ದಳ ಯುವ ಘಟಕ ಜಿಲ್ಲಾಧ್ಯಕ್ಷ ಎನ್.ಸುರೇಶ್ , ಪೋಷಕರು ಕಷ್ಟಪಟ್ಟು ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಬೇಕೆಂದು ಕಾಲೇಜುಗಳಿಗೆ ಸೇರಿಸುತ್ತಾರೆ. ಆದರೆ, ಸ್ನಾತಕೋತ್ತರ ಕೇಂದ್ರದಲ್ಲಿ ಉಪನ್ಯಾಸಕರ ಕೊರತೆಯಿದ್ದು, ವಿದ್ಯಾರ್ಥಿಗಳು ಪರೀಕ್ಷೆ ಎದುರಿಸುವುದು ಕಷ್ಟವಾಗಿದೆ. ಇದಕ್ಕೆ ಕಾರಣವಾಗಿರುವ ನಿರ್ದೇಶಕ ಗಂಗಾಧರ್ ಅವರನ್ನು ಕೂಡಲೇ ಅಮಾನತ್ತು ಮಾಡಬೇಕೆಂದು ಒತ್ತಾಯಿಸಿದರು. ಅರ್ಥಶಾಸ್ತ್ರ, ಇತಿಹಾಸ, ಕನ್ನಡ ಹಾಗೂ ಗಣಿತ ವಿಭಾಗಗಳಿಗೆ ಅಗತ್ಯವಿರುವ ಹೆಚ್ಚುವರಿ ಉಪನ್ಯಾಸಕರನ್ನು ತಕ್ಷಣ ನೇಮಕ ಮಾಡಬೇಕು. ಎಲ್ಲ ವಿಭಾಗಗಳಲ್ಲಿ ನಿಯಮಿತವಾಗಿ ತರಗತಿಗಳು ನಡೆಯುವಂತೆ ಕ್ರಮ ಕೈಗೊಳ್ಳಬೇಕು. ಅಂಬೇಡ್ಕರ್ ಜಯಂತಿ, ಸಾಂಸ್ಕೃತಿಕ, ಕ್ರೀಡಾ ದಿನಾಚರಣೆ ಹಾಗೂ ವಿದ್ಯಾರ್ಥಿ ಚಟುವಟಿಕೆಗಳನ್ನು ನಿಯಮಿತವಾಗಿ ಆಯೋಜಿಸಬೇಕು ಎಂದು ಆಗ್ರಹಿಸಿದರು. ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಶುಲ್ಕವನ್ನು ವಿದ್ಯಾರ್ಥಿ ಅಭಿವೃದ್ಧಿ ಚಟುವಟಿಕೆಗಳಿಗೆ ಸಮರ್ಪಕವಾಗಿ ಬಳಸುವಂತೆ ಮೇಲ್ವಿಚಾರಣೆ ಮಾಡಬೇಕು. ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹಿತಾಸಕ್ತಿಯನ್ನು ಕಾಪಾಡುವಂತೆ ಸೂಕ್ತ ಕ್ರಮಕೈಗೊಳ್ಳಬೇಕೆಂದು ಸುರೇಶ್ ಆಗ್ರಹಿಸಿದರು.**

### ಮೇ 15 ರೊಳಗೆ ಬೆಂಬಲ ಬೆಲೆ ರಾಗಿ ಮಾರಾಟ ಮಾಡಲು ಸೂಚನೆ

ಮೈಸೂರು:– 2025–26ನೇ ಸಾಲಿನಲ್ಲಿ ಕನಿಷ್ಟ ಬೆಂಬಲಬೆಲೆ ಯೋಜನೆಯಡಿ ರೈತರಿಂದ ರಾಗಿ ಖರೀದಿ ಸಂಬಂಧ ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಕಾರ್ಯವನ್ನು ನಿರ್ವಹಿಸಲಾಗುತ್ತಿರುತ್ತದೆ. ಮೇ ಮತ್ತು ಜೂನ್ ಮಾಹೆಗಳಿಗೆ ಎನ್.ಎಫ್.ಎಸ್.ಎ ಅಡಿ ರಾಗಿ ವಿತರಣೆಗೆ ಕ್ರಮವಹಿಸಬೇಕಾಗಿರುವುದರಿಂದ ಖರೀದಿ ಕಾರ್ಯವನ್ನು ಮೇ 15 ರೊಳಗೆ ಮುಕ್ತಾಯಗೊಳಿಸುವಂತೆ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ ವ್ಯವಸ್ಥಾಪಕ ನಿರ್ದೇಶಕರು ಸೂಚಿಸಿದ್ದಾರೆ.

ಅದರಂತೆ ಬೆಂಬಲಬೆಲೆ ಯೋಜನೆಯಡಿ ರಾಗಿ ಖರೀದಿ ಮಾಡಲು ಜಿಲ್ಲೆಯಲ್ಲಿ ತೆರೆಯಲಾಗಿರುವ ಎಲ್ಲಾ ಖರೀದಿ ಕೇಂದ್ರಗಳಲ್ಲಿ ರಾಗಿ ಖರೀದಿ ಪ್ರಕ್ರಿಯೆಯನ್ನು ಮೇ 15 ರಂದು ಮುಕ್ತಾಯಗೊಳಿಸಲಾಗುವುದು. ಬೆಂಬಲಬೆಲೆ ಯೋಜನೆಯಡಿ ರಾಗಿಯನ್ನು ಸರ್ಕಾರಕ್ಕೆ ಕೊಡಲು ನೊಂದಾಯಿಸಿಕೊಂಡಿರುವ ರೈತರು ತಮ್ಮ ತಾಲ್ಲೂಕು ವ್ಯಾಪ್ತಿಯ ಖರೀದಿ ಅಧಿಕಾರಿಗಳನ್ನು ಸಂಪರ್ಕಿಸಿ ಸಂಬಂಧಪಟ್ಟ ಖರೀದಿ ಕೇಂದ್ರಗಳಿಗೆ ನೀಡುವಂತೆ ತಿಳಿಸಲಾಗಿದೆ ಎಂದು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳಾದ ಜಿ.ಲಕ್ಷ್ಮಿ?ಮಕಾಂತರೆಡ್ಡಿ ಅವರು ಪ್ರಟಣೆಯಲ್ಲಿ ತಿಳಿಸಿದ್ದಾರೆ.

### ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಡಾ.ಸಹನಾ ಎಸ್.ಹಾದಿಮನಿ ಅಧಿಕಾರ ಸ್ವೀಕಾರ

ಮಡಿಕೇರಿ:–ಕೊಡಗು ಜಿಲ್ಲೆಗೆ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಡಾ.ಸಹನಾ ಎಸ್.ಹಾದಿಮನಿ ಅವರು ಇತ್ತೀಚೆಗೆ ಅಧಿಕಾರ ವಹಿಸಿಕೊಂಡಿದ್ದಾರೆ.

2014 ನೇ ಬ್ಯಾಚಿನ ಕೆಎಎಸ್ ಅಧಿಕಾರಿಯಾದ ಸಹನಾ ಎಸ್.ಹಾದಿಮನಿ ಅವರು ಈ ಹಿಂದೆ 6 ವರ್ಷಗಳ ಕಾಲ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂ ಸ್ವಾಧೀನ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಅದಕ್ಕೂ ಮೊದಲು ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ಆಡಳಿತ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ.



# ಹನೂರು: ಬಸವ ಜಯಂತಿ ಕಾರ್ಯಕ್ರಮ



ಹನೂರು : ಬಸವಣ್ಣನವರು ಅನುಭವ ಮಂಟಪದ ಆಡಳಿತಾತ್ಮಕ ಸಂವಿಧಾನಕ್ಕೆ ಅಂದೇ ಆಯಾಮವನ್ನು ನೀಡಿ, ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಜಗತ್ತಿಗೆ ನೀಡಿದ್ದರು ಎಂದು ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ಜನಧ್ವನಿ ವೆಂಕಟೇಶ್ ತಿಳಿಸಿದರು.

ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನರಿಪುರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಸಂವಿಧಾನ ಆಡಳಿತ ವ್ಯವಸ್ಥೆ ಜಾರಿಗೆ ಬರುವ ಮೊದಲು ನಮ್ಮ ನಾಡಿನಲ್ಲಿ 800 ವರ್ಷಗಳ ಹಿಂದೆಯೇ ಎಲ್ಲಾ ವರ್ಗದ ಜನ ಸಮುದಾಯಗಳಿಗೆ ಸಮಾನತೆ ಯಲ್ಲಿ ಪ್ರತಿನಿಧ್ಯಾವನ್ನು ನೀಡಿದ್ದು ಹೆಗ್ಗಳಿಕೆಯಾಗಿದೆ ಎಂದರು.

ಬಸವಣ್ಣ ಅವರು 12ನೇ ಶತಮಾನದಲ್ಲಿ ಎಲ್ಲಾ ಜನರನ್ನು ಅಪ್ಪಿಕೊಂಡು ಲಿಂಗ ದೀಕ್ಷೆ ನೀಡಿ, ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು. ಆದರೆ ಇಂದಿಗೂ ಜಾತಿ ವ್ಯವಸ್ಥೆ ತೊಲಗಿಲ್ಲ, ಅವರವರ ಜಾತಿ ಜನಾಂಗದ ಕಾರ್ಯಕ್ರಮದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಚಿಂತಿಸಬೇಕಿದೆ ಎಂದರು. ಅಂದು ಬಸವಣ್ಣ ಕಾಯಕ ಮತ್ತು ದಾಸೋಹಕ್ಕೆ ಒತ್ತು ನೀಡಿದ್ದರು. ಪ್ರಸ್ತುತ 20–21ನೇ ಶತಮಾನದಲ್ಲಿ ಶ್ರೀಶಿವಕುಮಾರ ಸ್ವಾಮೀಜಿ ಅವರು ಶಿಕ್ಷಣ ಮತ್ತು ದಾಸೋಹಕ್ಕೆ ಹೆಚ್ಚಿನ ಗಮನ ನೀಡಿ, ಬಸವಣ್ಣ ಅವರಂತೆ ನುಡಿದಂತೆ ನಡೆದಿರುವುದು ಇತಿಹಾಸ ಎಂದು ಬಣ್ಣಿಸಿದರು. ಇಂದಿನ ಆಧುನಿಕ ಯುಗದಲ್ಲಿ ಮಕ್ಕಳಿಗೆ ಮೊಬೈಲ್ ಬದಲು ವಚನ ಹೇಳಿಕೊಡಬೇಕು. ಎಲ್ಲರಲ್ಲಿಯೂ ನಡೆ, ನುಡಿ ಚೆನ್ನಾಗಿರಬೇಕು. ಬಸವಣ್ಣ ಅವರ ಮಾರ್ಗದರ್ಶನ ಮತ್ತು ಜೀವನ ಸಂದೇಶ ತಿಳಿದುಕೊಂಡು ನಡೆಯಬೇಕು ಎಂದರು

ವಚನ ಸಾಹಿತ್ಯವನ್ನು ರಚಿಸಿ, ಶರಣ ಸಂದೇಶಗಳನ್ನು ನೀಡಿದ ಬಸವಾದಿ ಶರಣರ ಸಾಮಾಜಿಕ ಜಾಗೃತಿ ಕಾರ್ಯ ಅಸಮಾನತೆಯ ಸಮಾಜ ಹಾಗೂ ಜಾಗತಿಕ ದೇಶಗಳ ಸಂಘರ್ಷದ ಕಾಲ ಘಟ್ಟದಲ್ಲಿ ಇಂದಿಗೂ ಪ್ರಸ್ತುತವಾಗಿದೆ. ಹಾಗಾಗಿ ಸಮಾನತೆ, ಶಾಂತಿ ಸೌಹಾರ್ದತೆಯನ್ನು ಜಗತ್ತಿಗೆ ಪಸರಿಸಲು ಜಗ ಜ್ಯೋತಿ ಶ್ರೀ ಬಸವೇಶ್ವರರನ್ನು ಜಗತ್ತಿನಾ ದ್ಯಂತ ಕೊಂಡೊಯ್ಯಬೇಕಿದೆ ಎಂದರು. ಈ ವೇಳೆ ಹನೂರು ಮಂಡಲ ಅಧ್ಯಕ್ಷ ವೃಷಭೇಂದ್ರ ಸ್ವಾಮಿ, ಉಗನಿಯ ಮಹೇಶ್, ಲೋಕೇಶ್ ಜೆಟ್ಟಿ ವಿಜಯೇಂದ್ರ ಕೂಡ್ಲೂರು ಮಾದೇಶ್ ಲಿಂಗಾಚಾರಿ ಚಿನ್ನರಾಜು ಊರಿನ ಮುಖಂಡರು ಯಜಮಾನರು ಉಪಸ್ಥಿತರಿದ್ದರು.

# ರಾಷ್ಟ್ರ ಮಟ್ಟದಲ್ಲಿ ಬೇಡಿಕೆಯ ಕಲೆ ಡೊಳ್ಳು



ರಾಮನಗರ: ರಾಜ್ಯದ ಕೆಲವಷ್ಟೇ ಪ್ರದೇಶಗಳಲ್ಲಿ ಸೀಮಿತವಾಗಿದ್ದ ಡೊಳ್ಳು ಕಲೆ ಇಂದು ರಾಜ್ಯ ಸೇರಿದಂತೆ ಅಂತರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆಯ ಕಲೆಯಾಗಿದೆ, ಇದಕ್ಕೆ ಖ್ಯಾತಿ ತಂದುಕೊಟ್ಟ ಶ್ರೇಯ ಕಲಾವಿದ ಶ್ರೀನಿವಾಸ್ ಅವರಿಗೆ ಸಲ್ಲುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೆ. ಸತೀಶ್ ಬಣ್ಣಿಸಿದರು.

ರಾಮನಗರದ ಜಾನಪದ ಲೋಕದಲ್ಲಿ ಡಾ. ಎಚ್.ಎಲ್. ನಾಗೇಗೌಡರ ನೆನಪಿನಲ್ಲಿ ಪ್ರತಿ ತಿಂಗಳ ನಡೆಯುವ ತಿಂಗಳ ಅತಿಥಿ" ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಡೊಳ್ಳು ಕಲಾವಿದರಾದ ಶ್ರೀನಿವಾಸ್ ಅವರ ನಿಸ್ವಾರ್ಥ ಕೊಡುಗೆಯಿಂದ ಇಂದು ಶುಭ ಸಮಾರಂಭಗಳಿಗೆ ಡೊಳ್ಳು ಕಲೆ ವಾಣಿಜ್ಯ ಕಲೆಯಾಗಿ ಬೆಳೆದಿದೆ ಇವರ ಮಗ ಚಂದ್ರು ಐ.ಪಿ.ಎಸ್, ಐ.ಎ.ಎಸ್ ಅಧಿಕಾರಿಗಳಿಗೆ ತರಬೇತಿಯನ್ನು ನೀಡುವ ಅವಕಾಶವನ್ನು ಪಡೆದಿದ್ದಾರೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ನಡೆಯುವ ಅನೇಕ ಕಾರ್ಯಕ್ರಮಗಳಲ್ಲಿ ಈ ರೀತಿಯ ಜನಪದ ಕಲಾವಿದರಿಗೆ ಗೌರವವನ್ನು ನೀಡುತ್ತಾ ಬಂದಿದೆ ಎಂದರು. ಸಾಹಿತಿಗಳು ಮತ್ತು ಕರ್ನಾಟಕ ಜಾನಪದ ಪರಿಷತ್ತಿನ ಚನ್ನಪಟ್ಟಣ ತಾಲೂಕು ಘಟಕದ ಅಧ್ಯಕ್ಷರಾದ ಡಾ. ವಿಜಯ ರಾಂಪುರ ಮಾತನಾಡಿ ಕರ್ನಾಟಕದ ಗಂಡು ಕಲೆ ಜನಪ್ರಿಯ ಕಲೆ ಶಕ್ತಿಯುತವಾದ ಕಲೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿದೆ ಎಂದರು.

ಅಂತರಾಷ್ಟ್ರೀಯ ಗಾಯಕರಾದ ಶಿವಕುಮಾರ್ ಬ್ಯಾಡ್ರಳ್ಳಿ ಅವರು ಮಾತನಾಡಿ, ಕಲೆಯನ್ನು ಪ್ರೇಕ್ಷಕರು ಅಂತರಂಗದಿಂದ ಕಾಪಾಡಬೇಕು, ಜಿಲ್ಲೆಯಲ್ಲಿ ಡೊಳ್ಳು ಕಲೆಗೆ ಬುನಾದಿ ಹಾಕಿಕೊಟ್ಟವರು ಶ್ರೀನಿವಾಸರವರು ಇವರ ಮೂಲಭೂತ ಸೌಕರ್ಯದ ಕೊರತೆಯ ನಡುವೆಯೂ ಜಾನಪದ ಲೋಕದಲ್ಲಿ ಈ ಕಲೆಯನ್ನು ಉಳಿಸಿ ಬೆಳೆಸಿ ಸಮೃದ್ಧಿ ಗೊಳಿಸಿದ್ದಾರೆ. ಎಂದರು.

ಡೊಳ್ಳು ಕುಣಿತ ಕಲಾವಿದರಾದ ಶ್ರೀನಿವಾಸ್ ಅವರನ್ನು ಗೌರವಿಸಲಾಯಿತು. ನಂತರ ನಡೆದ ಸಂವಾದದಲ್ಲಿ ಕಲೆ ಮತ್ತು ತಾವು ಕಲಿತ ಆಸಕ್ತಿ ಬಗ್ಗೆ ವಿವರಿಸಿದರು ಹಾಗೂ ಡೊಳ್ಳು ತಂಡದವರು ಕಲಾಪ್ರದರ್ಶನ ನಡೆಸಿಕೊಟ್ಟರು. ಜಾನಪದ ಲೋಕದ ಕ್ಯೂರೇಟರ್ ಡಾ. ರವಿ ಯು.ಎಂ, ಸಂಚಾಲಕ ಡಾ. ಸಂದೀಪ್ ಕೆ.ಎಸ್, ಡಿಪ್ಲೊಮಾ ವಿದ್ಯಾರ್ಥಿಗಳು, ಉಪಸ್ಥಿತರಿದ್ದರು.

**ಮುಖ್ಯ ಶಿಕ್ಷಕ ಶಂಕರ್ ಅಭಿಪ್ರಾಯ**

# ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಬೇಸಿಗೆ ಶಿಬಿರ ಅವಶ್ಯ



ಗುಂಡ್ಲುಪೇಟೆ: ಬೇಸಿಗೆ ರಜೆಯಲ್ಲಿ ಮಕ್ಕಳು ಬಿರು ಬಿಸಿಲಿನಲ್ಲಿ ಅಲೆದಾಡುವುದು ಹಾಗೂ ಮೊಬೈಲ್ ಗೀಳಿಗೆ ಅಂಟಿಕೊಳ್ಳುವುದನ್ನು ತಪ್ಪಿಸಿ, ಅವರಲ್ಲಿ ಕಲಿಕೆಯ ಜೊತೆಗೆ ಸೃಜನಾತ್ಮಕ ಕೌಶಲ್ಯಗಳನ್ನು ಹೊರತರಲು ಬೇಸಿಗೆ ಶಿಬಿರಗಳು ಅತ್ಯವಶ್ಯಕವಾಗಿವೆ ಎಂದು ಮುಖ್ಯ ಶಿಕ್ಷಕರಾದ ಶಂಕರ್ ಅಭಿಪ್ರಾಯಪಟ್ಟರು.


ತಾಲೂಕಿನ ಕೋಟೆಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ (ಜಿ.ಹೆಚ್.ಪಿ.ಎಸ್) ಶಿಕ್ಷಣ ಫೌಂಡೇಶನ್ ಮತ್ತು ಪಂಚಾಯತ್ ಇಲಾಖೆಯ ಸಹಯೋಗದಲ್ಲಿ ಕಳೆದ ಒಂದು ತಿಂಗಳಿನಿಂದ ನಡೆಯುತ್ತಿದ್ದ 'ಮಕ್ಕಳ ಬೇಸಿಗೆ ಶಿಬಿರ'ದ ಸಮಾರೋಪ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

"ಉತ್ತಮ ಸಮಾಜ ನಿರ್ಮಾಣದ ಜೊತೆಗೆ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಗುರುತಿಸಿ ಹೊರತರುವ ಸದುದ್ದೇಶದಿಂದ ಇಂತಹ ಶಿಬಿರಗಳು ಆಯೋಜನೆಯಾಗಬೇಕು. ಇದೇ ಮಹದೋದ್ದೇಶದಿಂದ ಕೋಟೆಕೆರೆ ಶಾಲೆಯಲ್ಲಿ ಕಳೆದ ಒಂದು ತಿಂಗಳ ಕಾಲ ಅಚ್ಚುಕಟ್ಟಾಗಿ ಹಾಗೂ ಅರ್ಥಪೂರ್ಣವಾಗಿ ಬೇಸಿಗೆ ಶಿಬಿರವನ್ನು ನಡೆಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ. ಇಂತಹ ಶಿಬಿರಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಾಗಿ ನಡೆಯಬೇಕು," ಎಂದು ಅವರು ಆಶಯ ವ್ಯಕ್ತಪಡಿಸಿದರು.

**ಉಚಿತ ಉಪಾಹಾರ ವ್ಯವಸ್ಥೆ:**

ಗ್ರಾಮ ಪಂಚಾಯಿತಿ ವತಿಯಿಂದ ಶಿಬಿರದ ಯಶಸ್ಸಿಗೆ ಬೆಂಬಲ ನೀಡಲಾಗಿದ್ದು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಮಂಜುನಾಥ್ ರಾವ್ ಅವರು ಬೇಸಿಗೆ ಶಿಬಿರದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಮಕ್ಕಳಿಗೆ ಮಧ್ಯಾಹ್ನದ ಉಪಾಹಾರದ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಮೆಚ್ಚುಗೆಗೆ ಪಾತ್ರರಾದರು.ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷರಾದ ಮಹಾದೇವ ನಾಯಕ, ಗ್ರಂಥಪಾಲಕ ಮಂಜುನಾಥ್, ಶಿಕ್ಷಣ ಮಾರ್ಗದರ್ಶಕಿ ನಾಗಮಣಿ, ಶಿಕ್ಷಣ ಫೌಂಡೇಶನ್ ಪದಾಧಿಕಾರಿಗಳು ಹಾಗೂ ಶಾಲಾ ಶಿಕ್ಷಕ ವೃಂದದವರು ಭಾಗವಹಿಸಿದ್ದರು.

# ಮಹಾರಾಣಾ ಪ್ರತಾಪಸಿಂಹ ಜಯಂತಿ



ಮೈಸೂರು: ಚಕ್ರವರ್ತಿ ಮಹಾರಾಣಾ ಪ್ರತಾಪ ಸಿಂಹರ 686ನೇ ಜಯಂತಿಯನ್ನು ಇಂದು ಬಿಜೆಪಿ ಕಚೇರಿಯಲ್ಲಿ ಆಚರಿಸಲಾಯಿತು.

ಬಿಜೆಪಿ ಮುಖಂಡ ಹಾಗೂ ನಟ ಎಸ್. ಜಯಪ್ರಕಾಶ್ ರಾಮ ಪ್ರತಾಪ ಸಿಂಹರ ಚಿತ್ರಪಟಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ಬಳಿಕ ಮಾತನಾಡಿ, ಮೊಘಲರಿಗೆ ಹಾಗೂ ಭಾರತ ದೇಶವನ್ನು ಲೂಟಿ ಮಾಡಲು ಬರುತ್ತಿದ್ದ ಲೂಟಿಕೋರರಿಗೆ ಹಾಗೂ ಮೊಘಲರಿಗೆ ಸಿಂಹ ಸ್ವಪ್ನವಾಗಿದ್ದ ರಾಣಾ ಪ್ರತಾಪ ಸಿಂಹ ಬಹಳ ಧೈರ್ಯದಿಂದ ಕೆಚ್ಚೆದೆಯಿಂದ ಘೋರ ಯುದ್ಧಗಳನ್ನು ಮಾಡಿ ದೇಶದ ಸಂಪತ್ತನ್ನು ಉಳಿಸಲು ಹೋರಾಡಿದ ಏಕೈಕ ರಜಪೂತ್ ರಾಜರಾಗಿದ್ದರು. ಅಂತಹ ರಾಜನನ್ನು ನೆನೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ತಿಳಿಸಿದರು.

# ನೂತನ ಮಠದ ಮಾರಮ್ಮ ದೇವಸ್ಥಾನ ಉದ್ಘಾಟನೆ

ಹನೂರು: ಶತಮಾನಕ್ಕೆ ಒಬ್ಬ ಸಂತನನ್ನು ಕಂಡ ನಾಡು ನಮ್ಮದು. ಸಮಾನತೆ ಸಮ ಸಮಾಜ ನಿರ್ಮಾಣದ ಕನಸನ್ನು ಕಂಡ ಬಾಬಾ ಸಾಹೇಬರ ಸಂವಿಧಾನ ಶಿಕ್ಷಣ ಉದ್ಯೋಗ ಜೀವನ ಸುಧಾರಣೆಗೆ ಅವಕಾಶ ಕಲ್ಪಿಸಿದೆ. ಕೇವಲ ಜಾತಿ ಧರ್ಮದಿಂದ ಯಾವುದನ್ನು ಗೆಲ್ಲಲು ಸಾಧ್ಯವಿಲ್ಲ, ಉತ್ತಮ ಶಿಕ್ಷಣ ಸಂಸ್ಕಾರ ಮತ್ತು ಸಮರ್ಪಣಾ ಭಾವದಿಂದ ಮಾತ್ರ ಯಶಸ್ಸು ಸಾಧ್ಯ ಎಂದು ಸಾಲೂರು ಬೃಹನ್ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಬಾಣೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಮಠದ ಮಾರಮ್ಮ ನವರ ದೇವಸ್ಥಾನ ಉದ್ಘಾಟನಾ ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದರು. ಭಾರತದಲ್ಲಿ ಆಧ್ಯಾತ್ಮಿಕ ಶಕ್ತಿಗೆ ಹೆಚ್ಚು ಗೌರವವಿದೆ ಎಂಬುದನ್ನು ಈ ಕಾರ್ಯಕ್ರಮ ಸಾಬೀತುಪಡಿಸಿದೆ. ಇದರ ಜೊತೆಗೆ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ಅಗತ್ಯವಿದೆ. ಶ್ರದ್ಧೆ ಭಕ್ತಿ ಜೊತೆಗೆ ಎಲ್ಲರೂ ಉತ್ತಮ ಶಿಕ್ಷಣ ಪಡೆದು ಸಮಾನತೆಯಿಂದ ಬದುಕಿ ಎಂದರು.

ನಿಶಾಂತ್ ಮಾತನಾಡಿ ಅನಿಲ್ ಕುಮಾರ್ ಮತ್ತು ಮಾಜಿ ಸಚಿವ ಕೋಟೆ ಎಂ ಶಿವಣ್ಣ ರವರ ಮಾರ್ಗದರ್ಶನ ಮತ್ತು ಪ್ರೇರಣೆಯಿಂದ ಗ್ರಾಮದ ಜನರು ನನ್ನ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸ ಅದರಲ್ಲೂ ತಾಯಂದಿರು ತೋರುವ ಪ್ರೀತಿ ಗೌರವಕ್ಕೆ ನಾನು ಚಿರಋಣಿಯಾಗಿರುತ್ತೇನೆ ಎಂದರು.




ಕೋಟೆ ಎಂ.ಶಿವಣ್ಣ. ಮಾತನಾಡಿ ದೇವಸ್ಥಾನ ದೇವರ ಪೂಜೆ ಜೊತೆಗೆ ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ. ಅದರಲ್ಲೂ ಮಹಿಳೆಯರು ಹೆಚ್ಚು ಶಿಕ್ಷಣ ಪಡೆದು ಸರ್ಕಾರದ ಮಹಿಳಾ ಮೀಸಲಾತಿಯನ್ನು ಪಡೆದು ಮಹಿಳಾ ಸಾಮ್ರಾಜ್ಯ ನಿರ್ಮಿಸಬೇಕು. ಹನೂರು ಕ್ಷೇತ್ರದಲ್ಲಿ ಸಮಾಜ ಸೇವಕ ನಿಶಾಂತ್ ತವರುವನೇಕ ಸೇವಾ ಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಾರೆ. ಅವರ ಸೇವಾ ಕಾರ್ಯಕ್ಕೆ ಬೆಲೆಂಕಟ್ಟಲು ಸಾಧ್ಯವಿಲ್ಲ. ಅವರ ಸೇವಾ ಕಾರ್ಯಕ್ಕೆ ತಕ್ಕ ಪ್ರತಿಫಲ ಸಿಗಲಿ ಎಂದು ತಿಳಿಸಿದರು.

. ಈ ಸಂದರ್ಭದಲ್ಲಿ ನಿವೃತ್ತ ಐ.ಎ.ಎಸ್. ಅಧಿಕಾರಿ ಬಿ.ಎಸ್. ಅನಿಲ್ ಕುಮಾರ್, ಮಾಜಿ ಸಚಿವರಾದ ಕೋಟೆ ಶಿವಣ್ಣ, ಮಾಜಿ ಶಾಸಕರಾದ ಆರ್. ನರೇಂದ್ರ, ಪಾಳ್ಯ ರಾಚಪ್ಪ, ಉದ್ಯಮಿ ಪೊನ್ನಾಚಿ ಮಹದೇವಸ್ವಾಮಿ, ಬಣ್ಣ ಮತ್ತು ಅರಗು ಕಾರ್ಖಾನೆ ಮಾಜಿ ಅಧ್ಯಕ್ಷ ಕೃಷ್ಣ , ರಾಮನಗರ ಜಿಲ್ಲಾ ಕೆ.ಡಿ.ಪಿ. ಸದಸ್ಯ ಗುರುಮೂರ್ತಿ, ಮುಖಂಡರಾದ ಪುಟ್ಟಣ್ಣ, ಸುದೇಶ್, ರಾಜಣ್ಣ ಕಮಲಾಪುರ, ಕರಿಯನಪುರ ರಾಚಯ್ಯ, ಬೂದುಬಾಳು ಮಾದೇವ. ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರಮೇಶ್ ಗ್ರಾಮದ ಯಜಮಾನರು ಉಪಸ್ಥಿತರಿದ್ದರು.

# ಸೇವೆಗೆ ಸಿಗದ ಕೆ.ಬೆಳತ್ತೂರು ಗ್ರಾಪಂ

## ಅಧಿಕಾರಿ–ಸಿಬ್ಬಂದಿಯ ಸುಳಿವಿಲ್ಲ; ಮೂಲಸೌಕರ್ಯ ವಂಚಿತ ಗ್ರಾಮಸ್ಥರ ಪರದಾಟ

### ಕರ್ತವ್ಯದ ವೇಳೆಯೂ ಕಚೇರಿ ಖಾಲಿ ಖಾಲಿ!

(ವರದಿ: ಶಿವಕುಮಾರ ತುಂಬಸೋಗೆ)

ಸರಗೂರು: ಗ್ರಾಮಗಳ ಸಮಗ್ರ ಅಭಿವೃದ್ಧಿ, ಮೂಲಸೌಕರ್ಯಗಳ ನಿರ್ವಹಣೆ ಹಾಗೂ ಸರ್ಕಾರದ ಯೋಜನೆಗಳನ್ನು ಸ್ಥಳೀಯವಾಗಿ ಅನುಷ್ಠಾನಗೊಳಿಸುವ ಮಹತ್ವದ ಜವಾಬ್ದಾರಿ ಹೊತ್ತಿರುವ ಕೆ. ಬೆಳತ್ತೂರು ಗ್ರಾಮ ಪಂಚಾಯಿತಿಯು ಇದೀಗ ಕೇವಲ ಕಾಟಾಚಾರಕ್ಕೆ ಬಾಗಿಲು ತೆರೆಯುತ್ತಿದೆ. ಕರ್ತವ್ಯದ ವೇಳೆಯಲ್ಲೂ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಚೇರಿಗೆ ಗೈರಾಗುತ್ತಿದ್ದು, ಕಳೆದ ಏಳೆಂಟು ತಿಂಗಳುಗಳಿಂದ ಸಾರ್ವಜನಿಕರಿಗೆ ಯಾವುದೇ ಸೌಲಭ್ಯಗಳು ದೊರೆಯುತ್ತಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಕುಡಿಯುವ ನೀರು, ಚರಂಡಿ ವ್ಯವಸ್ಥೆ, ಇ–ಸ್ವತ್ತು, ಜನನ–ಮರಣ ಪ್ರಮಾಣಪತ್ರ ಸೇರಿದಂತೆ ದೈನಂದಿನ ಸೇವೆಗಳನ್ನು ಪಡೆಯಲು ಗ್ರಾಮಸ್ಥರು ಹರಸಾಹಸ ಪಡುವಂತಾಗಿದೆ. ಅಂದಾಜು 4,000 ಜನಸಂಖ್ಯೆ ಹೊಂದಿರುವ ಈ ಗ್ರಾಮ ಪಂಚಾಯಿತಿಯಲ್ಲಿ ನಾಲ್ವರು ಚುನಾಯಿತ ಸದಸ್ಯರಿದ್ದಾರೆ. ಈ ಹಿಂದೆ ಎಚ್.ಡಿ. ಕೋಟೆ ತಾಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಈ ಗ್ರಾ.ಪಂ., ಇದೀಗ ನೂತನ ಸರಗೂರು ತಾಲೂಕು ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ.

**ಗಮನ ಸೆಳೆಯುವ ಅಂಶ ಪ್ರಭಾರ ಅಧಿಕಾರಿಗಳೂ ನಾಪತ್ತೆ!**

ಇಲ್ಲಿನ ಗ್ರಾ.ಪಂ.ಗೆ ಕಾಯಂ ಅಧಿಕಾರಿಗಳಿಲ್ಲ. ಸಮೀಪದ ಮನುಗನಹಳ್ಳಿ ಗ್ರಾ.ಪಂ. ಪಿಡಿಒ ಅವರನ್ನು ಪ್ರಭಾರ ನೆಲೆಯಲ್ಲಿ (ಡೆಪ್ಯುಟೇಷನ್) ನಿಯೋಜಿಸಲಾಗಿದೆ ಎನ್ನಲಾಗುತ್ತಿದೆ. ಆಡಳಿತ ಮಂಡಳಿಯ ಅವಧಿ ಮುಗಿದಿರುವುದರಿಂದ ಉಸ್ತುವಾರಿಗಾಗಿ ಬೇರೆ ಇಲಾಖೆಯ ಅಧಿಕಾರಿಯೊಬ್ಬರಿಗೆ ನೋಡಲ್ ಜವಾಬ್ದಾರಿ ನೀಡಲಾಗಿದೆ. ಆದರೆ, ಇತ್ತ ಮಾತ್ರ ಇಲಾಖೆಯ ಪ್ರಭಾರ ಅಧಿಕಾರಿಯೂ ಸಿಗುತ್ತಿಲ್ಲ, ಅತ್ತ ಮೇಲುಸ್ತುವಾರಿ ಅಧಿಕಾರಿಯ ಸುಳಿವೂ ಇಲ್ಲದಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.




**ಅಧಿಕಾರಿಗಳೇ ದಿಕ್ಕು, ಆದರೆ ಅವರ ಮುಖವೇ ಪರಿಚಯವಿಲ್ಲ!**

ಗ್ರಾಮ ಪಂಚಾಯಿತಿ ಸದಸ್ಯರ ಅಧಿಕಾರಾವಧಿ ಕಳೆದ ಡಿಸೆಂಬರ್‌ಗೆ ಮುಕ್ತಾಯಗೊಂಡಿದೆ. ಹೀಗಾಗಿ, ಗ್ರಾಮದ ಕುಂದುಕೊರತೆಗಳನ್ನು ಬಗೆಹರಿಸಲು ಜನರು ಸಂಪೂರ್ಣವಾಗಿ ಅಧಿಕಾರಿಗಳನ್ನೇ ಅವಲಂಬಿಸುವಂತಾಗಿದೆ. ಆದರೆ, ವಿಪರ್ಯಾಸವೆಂದರೆ ಇಲ್ಲಿಗೆ ನೇಮಕಗೊಂಡಿರುವ ಅಧಿಕಾರಿಗಳ ಮುಖ ಪರಿಚಯವೇ ಬಹುತೇಕ ಗ್ರಾಮಸ್ಥರಿಗಿಲ್ಲ. ಆಡಳಿತಾತ್ಮಕವಾಗಿ ಕಚೇರಿಯ ಸಂಪೂರ್ಣ ಜವಾಬ್ದಾರಿಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಹೊರಬೇಕಿದೆ ಇವರೊಂದಿಗೆ ಕಾರ್ಯದರ್ಶಿ, ಬಿಲ್ ಕಲೆಕ್ಟರ್, ದ್ವಿತೀಯ ದರ್ಜೆ ಲೆಕ್ಕ ಸಹಾಯಕ, ಡೇಟಾ ಎಂಟ್ರಿ ಆಪರೇಟರ್, ಕಚೇರಿ ಸಹಾಯಕ (ಗುಮಾಸ್ತ) ಹಾಗೂ ಪೌರಕಾರ್ಮಿಕರು ಇರಬೇಕು. ಆದರೆ, ಬೆಳಗ್ಗೆ 10–11 ಗಂಟೆ ಸುಮಾರಿಗೆ ಕಚೇರಿ ಬಾಗಿಲು ತೆರೆಯುವುದನ್ನು ಬಿಟ್ಟರೆ, ಸಂಜೆ ಬಾಗಿಲು ಮುಚ್ಚುವವರೆಗೂ ಕಚೇರಿಯಲ್ಲಿ ಖಾಲಿ ಕುರ್ಚಿಗಳೇ ದರ್ಶನ ನೀಡುತ್ತವೆ.

**ಗ್ರಾಮಸ್ಥರ ಅಳಲು:**



"ಕಳೆದ ನಾಲ್ಕು ವರ್ಷಗಳ ಹಿಂದೆ ಖರೀದಿಸಿರುವ ಕಸ ಸಂಗ್ರಹ ವಾಹನ ನಿಂತಲ್ಲೇ ತುಕ್ಕು ಹಿಡಿಯುತ್ತಿದೆ. ಗ್ರಾ.ಪಂ. ಕಚೇರಿ ಮುಂಭಾಗವೇ ಗಿಡಗಂಟಿಗಳು ಬೆಳೆದು ನಿಂತಿವೆ, ಪಕ್ಕದಲ್ಲೇ ಕಸದ ರಾಶಿ ಬಿದ್ದಿದೆ. ನಲ್ಲಿಗಳಲ್ಲಿ ಸಮರ್ಪಕವಾಗಿ ನೀರು ಬರುತ್ತಿಲ್ಲ. ಚರಂಡಿಗಳನ್ನು ಸ್ವಚ್ಛಗೊಳಿಸದ ಕಾರಣ ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ. ಬೀದಿದೀಪಗಳ ನಿರ್ವಹಣೆಯೂ ಇಲ್ಲದಂತಾಗಿದೆ."

**ಗೋಪಾಲ್ ರಾಜ್**
ಕೆ. ಬೆಳತ್ತೂರು ಗ್ರಾಮಸ್ಥ



"ನಮ್ಮ ದೂರುಗಳನ್ನು ನೀಡಲು ಕಚೇರಿಯ ವೇಳೆಯಲ್ಲಿ ಹೋದರೂ ಯಾರೂ ಇರುವುದಿಲ್ಲ. ಇಲ್ಲಿನ ಸಿಬ್ಬಂದಿ ಪ್ರತಿದಿನವೂ ಸರಗೂರು ಹಾಗೂ ಮೈಸೂರಿನ ಮೇಲಧಿಕಾರಿಗಳ ಕಚೇರಿಗೆ ಕೆಲಸದ ನಿಮಿತ್ತ ತೆರಳುತ್ತಾರೆಯೇ? ಮೇಲಧಿಕಾರಿಗಳಿಂದ ನಿತ್ಯವೂ ಸಭೆಗಳು ನಿಗದಿಯಾಗಿರುತ್ತವೆಯೇ? ಇಲ್ಲಿನ ಅಧಿಕಾರಿಗಳು ಹಾಗೂ ಸಿಬ್ಬಂದಿ ಯಾರು ಎಂಬುದೇ ನಮಗೆ ಈವರೆಗೂ ತಿಳಿದಿಲ್ಲ."

**– ಬಿ.ಎಂ. ಪ್ರಕಾಶ್**
ಕೆ. ಬೆಳತ್ತೂರು ಗ್ರಾಮಸ್ಥ.

# ನಿಮಾನ್ಸ್ ಘಟಕ ಆರಂಭಕ್ಕೆ ಅಂಜಿ ಆಗ್ರಹ



ಮೈಸೂರು: ನಗರದ ಹೊರ ವಲಯದ ಗುಡುಮಾದನಹಳ್ಳಿಯೇ ನಿಮಾನ್ಸ್ ಘಟಕ ನಿರ್ಮಾಣಕ್ಕೆ ಸೂಕ್ತ, ಯಾರದೇ ವಿರೋಧವಿದ್ದರೂ ನಿರ್ಮಾಣ ಕಾರ್ಯ ಶೀಘ್ರ ಆರಂಭಿಸಿ ಕರ್ನಾಟಕ ಪೌರ ಕಾರ್ಮಿಕರ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಮಿತಿ ಪದಾಧಿಕಾರಿ ಅಂಜಿ ಆಗ್ರಹಿಸಿದರು.

ನಗರದ ಸುದ್ದಿಗೋಷ್ಠಿಯಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಗುಡುಮಾರನಹಳ್ಳಿಯ ಸರ್ವೆ ನಂ. 8, 60, 68 ರಲ್ಲಿ ಸುಮಾರು 20 ಎಕರೆ ಸರ್ಕಾರಿ ಜಾಗವಿದೆ. ಈ ಹಿಂದೆ ವಿಮಾನ ನಿಲ್ದಾಣ ವಿಸ್ತರಣೆಗೆ ಎಕರೆಗೆ ಸುಮಾರು ಒಂದೂವರೆ ಕೋಟಿ ಪರಿಹಾರ ನೀಡಿದ ಉದಾಹರಣೆಯಿದೆ. ಇದು ಸರ್ಕಾರಿ ಜಾಗವಾಗಿದ್ದು, ಹಲವಾರು ಮಂದಿ ಇದರಲ್ಲಿ ವ್ಯವಸಾಯ ಮಾಡಿ ಈಗಾಗಲೇ ಸಾಕಷ್ಟು ಸಂಪಾದನೆ ಮಾಡಿಕೊಂಡಿದ್ದಾರೆ. ಹೀಗಾಗಿ ನಿಜಕ್ಕೂ ಇವರು ಬಡವರಾಗಿದ್ದರೆ ಬೇರೆ ಕಡೆ ಜಾಗ ಕೊಡಲಿ. ಆದರೆ ಇದೇ ಜಾಗದಲ್ಲಿ ನಿಮಾನ್ಸ್ ನಿರ್ಮಾಣವಾಗಲೆಂದು ಒತ್ತಾಯಿಸಿದರು. ಇಲ್ಲಿ ನಿರ್ಮಾಣ ಮಾಡುವುದರಿಂದ ಮೈಸೂರು ಜಿಲ್ಲೆಯವರು ಮಾತ್ರವಲ್ಲ, ಮಂಡ್ಯ, ಚಾಮರಾಜನಗರ ಜಿಲ್ಲೆಯವರಿಗೂ ಮಾನಸಿಕ ಅನಾರೋಗ್ಯ ಮತ್ತು ನರರೋಗಕ್ಕೆ ಸಂಬಂಧಿಸಿದ ಚಿಕಿತ್ಸೆ ಪಡೆಯಲು ಅನುಕೂಲವಾಗುತ್ತದೆ. ಈಗ ಇದಕ್ಕಾಗಿ ಬೆಂಗಳೂರಿಗೆ ಹೋಗಬೇಕಾಗಿ ಬಂದಿದ್ದು, ಇದು ತಪ್ಪುತ್ತದೆ. ಈ ಕಾರಣದಿಂದಾಗಿ ಇಲ್ಲಿಯೇ ನಿರ್ಮಾಣ ಆಗ್ರಹಿಸಿ ಮೇ 13 ರಂದು ಬೆಳಗ್ಗೆ 11ಕ್ಕೆ ಡಿಸಿ ಕಚೇರಿ ಎದುರು ಒಕ್ಕೂಟದ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳುತ್ತಿರುವುದಾಗಿ ತಿಳಿಸಿದರು. ಇನ್ನಿತರ ಪದಾಧಿಕಾರಿಗಳಾದ ಡಿ.ಆರ್. ರಾಜು, ಶಿವಶ್ರೀನಿವಾಸ್, ಸಿ.ಆರ್. ವಿಜಯ್, ವಸಂತಕುಮಾರಿ ಇದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ನನ್ನ ಹುಟ್ಟು–ಸಾವು ಕೆ.ಆರ್.ನಗರದಲ್ಲೇ: ಸಾರಾ



ಮೈಸೂರು: ನಾನು ಕೆ.ಆರ್. ನಗರ ಕ್ಷೇತ್ರದಲ್ಲಿ ಮಾತ್ರ ಸ್ಪರ್ಧಿಸುತ್ತೇನೆ. ಯಾವುದೇ ಕಾರಣಕ್ಕೂ ಬೇರೆ ಕ್ಷೇತ್ರ ದಲ್ಲಿ ಸ್ಪರ್ಧಿಸುವುದಿಲ್ಲ, ನನ್ನ ರಾಜಕೀಯ ಹುಟ್ಟು–ಸಾವು ಎರಡೂ ಕೂಡ ಕೆ.ಆರ್.ನಗರ ಕ್ಷೇತ್ರದಲ್ಲಿ ಮಾತ್ರ. ಹೊರತಾಗಿ ಯಾವ ಕ್ಷೇತ್ರಕ್ಕೂ ನಾನು ಹೋಗುವುದಿಲ್ಲ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಸ್ಪಷ್ಟ ಪಡಿಸಿದರು.

ಇವತ್ತಿನ ರಾಜಕೀಯ ವ್ಯವಸ್ಥೆಯನ್ನು ನೋಡಿದರೆ ನಾವು ರಾಜಕಾರಣಿಗಳು ಎಂದು ಹೇಳಿಕೊಳ್ಳಲು ಅಸಹ್ಯವಾಗುತ್ತಿದೆ. ನಾನು ಬದುಕಿರುವವರೆಗೂ ನನ್ನ ಕುಟುಂಬದ ಯಾರೊಬ್ಬರು ಸಹ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಒಂದು ವೇಳೆ ನನ್ನ ಕುಟುಂಬದ ಯಾರಾದರೂ ಚುನಾವಣೆಗೆ ಸ್ಪರ್ಧಿಸಿದರೆ ನಾನು ಆ ಕೂಡಲೇ ರಾಜಕೀಯ ನಿವೃತ್ತಿ ಪಡೆಯುತ್ತೇನೆ. ಕೆ.ಆರ್.ನಗರದ ಜನರೇ ಅಷ್ಟು ಪ್ರೀತಿ, ವಿಶ್ವಾಸ, ಅಭಿಮಾನ ತೋರಿಸುತ್ತಿರುವಾಗ ನಾನ್ಯಾಕೆ ಬೇರೆ ಕ್ಷೇತ್ರಕ್ಕೆ ಹೋಗಲಿ. ನಮ್ಮ ಕುಟುಂಬಕ್ಕೆ ಕೆ.ಆರ್.ನಗರ ಕ್ಷೇತ್ರದ ಜನರ ಋಣವಿದೆ. ಹೀಗಾಗಿ ವೈದ್ಯನಾಗಿ ಡಾ.ಧನುಷ್ ಸೇವೆ ಮಾಡುತ್ತಿದ್ದಾನೆ. ಯಾವುದೇ ಕಾರಣಕ್ಕೂ ನನ್ನ ಕುಟುಂಬದ ಯಾರೊಬ್ಬರೂ ಚುನಾವಣೆಗೆ ಬರುವುದಿಲ್ಲ ಎಂದು ಪುನರುಚ್ಚರಿಸಿದರು.

# ರೈತನ ಮೇಲೆ ಕಾಡಾನೆ ದಾಳಿ

ಹನೂರು: ಜಮೀನಿನಲ್ಲಿದ್ದ ರೈತನೋರ್ವನ ಮೇಲೆ ಕಾಡಾನೆ ದಾಳಿ ಮಾಡಿದ ಪರಿಣಾಮ ತೀವ್ರ ಗಾಯಗೊಂಡು ಖಾಸಗಿ ಆಸ್ಪತ್ರೆಗೆ ದಾಖಲಾಗಿರುವ ಘಟನೆ ಸೋಮವಾರ ಮಧ್ಯಾಹ್ನ ಜರುಗಿದೆ.



ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮರೂರು ಗ್ರಾಮದ ಅಂಕಪ್ಪ ಸ್ವಾಮಿ (75) ಗಾಯಗೊಂಡ ರೈತನಾಗಿದ್ದಾನೆ.

**ಘಟನೆಯ ವಿವರ:** ರೈತ ಅಂಕಪ್ಪ ಸ್ವಾಮಿ ರವರ ಜಮೀನಿನಲ್ಲಿ ಬೆಳೆದಿರುವ ಹಲಸಿನ ಹಣ್ಣನ್ನು ಕಾಡಾನೆ ತಿನ್ನಲು ಬಂದಿದೆ. ಈ ವೇಳೆ ರೈತ ಕಾಡಾನೆಯನ್ನು ಓಡಿಸಲು ಪ್ರಯತ್ನಿಸಿದ್ದಾರೆ. ಆದರೆ ಆನೆ ರೈತನ ಮೇಲೆ ದಾಳಿ ಮಾಡಿ ಎತ್ತಿ ಬಿಸಾಡಿದೆ. ಈ ವೇಳೆ ರೈತನ ಕಾಲು ಹಾಗೂ ಕತ್ತಿನ ಮೂಳೆ ಮುರಿದಿದೆ ತಕ್ಷಣ ಕುಟುಂಬಸ್ಥರು ಖಾಸಗಿ ವಾಹನದ ಮೂಲಕ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆತಂದಿದ್ದಾರೆ ಆದರೆ ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇರುವುದರಿಂದ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ವಿಚಾರ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಅಧಿಕಾರಿಗಳು ರೈತರನ್ನು ಭೇಟಿ ಮಾಡಿ ಧೈರ್ಯ ತುಂಬಿದ್ದಾರೆ.

# ಮೈಸೂರು ಸೈಕಲ್ ಡೇ 4ನೇ ಆವೃತ್ತಿ ಯಶಸ್ವಿ



ಮೈಸೂರು: ಸುಸ್ಥಿರ ನಗರ ಸಂಚಾರ ಮತ್ತು ವಾಯು ಗುಣಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆಯು ಹಮ್ಮಿಕೊಂಡಿರುವ 'ಮೈಸೂರು ಸೈಕಲ್ ಡೇ'ಯ 4ನೆಯ ಆವೃತ್ತಿಯು ಇಂದು ಮೈಸೂರು ನಗರದ ಸರಸ್ವತಿಪುರಂನಲ್ಲಿ ನೆರವೇರಿತು.

ಜಿಐಜೆಡ್ ಮತ್ತು ಇಎಸ್‌ಎಫ್ ಸಹಯೋಗದೊಂದಿಗೆ ಸರಸ್ವತಿಪುರಂನ ಬೇಕಿಂಗ್ ಪಾಯಿಂಟ್ ಸರ್ಕಲ್ ಬಳಿ ಆಯೋಜಿಸಲಾಗಿದ್ದ ಈ ವಿಶೇಷ ಕಾರ್ಯಕ್ರಮಕ್ಕೆ ಪರಿಸರ ಪ್ರೇಮಿಗಳಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು. ಸುಸ್ಥಿರ ನಗರ ಸಂಚಾರ ? ವಾಯು ಗುಣಮಟ್ಟ ಕಾರ್ಯಕ್ರಮದ ಅಡಿಯಲ್ಲಿ ಜಾರಿಗೆ ತರಲಾದ ಈ ಯೋಜನೆಯು ಪರಿಸರ ರಕ್ಷಣೆ, ಸಾರ್ವಜನಿಕ ಆರೋಗ್ಯ ವೃದ್ಧಿ ಮತ್ತು ಮಾಲಿನ್ಯ ರಹಿತ ನಗರ ಜೀವನದ ಮಹತ್ವವನ್ನು ಸಾರಿತು. ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ 5 ಕಿಲೋಮೀಟರ್ ಉದ್ದದ ಸೈಕಲ್ ರ್‍ಯಾಲಿ ಜರುಗಿತು. ನಂತರ ನಡೆದ 'ಓಪನ್ ಸ್ಟ್ರೀಟ್' ಚಟುವಟಿಕೆಗಳು ಹಾಗೂ ಸಾಂಪ್ರದಾಯಿಕ ಆಟೋಟಗಳು ರಸ್ತೆಯ ಮೇಲೆ ಹಬ್ಬದ ವಾತಾವರಣ ನಿರ್ಮಿಸಿದ್ದವು. ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಉತ್ಸಾಹದಿಂದ ಪಾಲ್ಗೊಂಡಿದ್ದು, ನಗರದ ರಸ್ತೆಗಳು ಕೇವಲ ವಾಹನ ಸಂಚಾರಕ್ಕೆ ಸೀಮಿತವಲ್ಲದೆ ಜನಸ್ನೇಹಿ ಚಟುವಟಿಕೆಗಳ ತಾಣವೂ ಆಗಬಲ್ಲವು ಎಂಬುದನ್ನು ತೋರಿಸಿಕೊಟ್ಟವು. ಮೈಸೂರು ನಗರ ಪೊಲೀಸ್, ಸಂಚಾರಿ ಪೊಲೀಸ್, ಎನ್ಸಿಸಿ ಕೆಡೆಟ್ಗಳು, ಪ್ರಮುಖ ಶಿಕ್ಷಣ ಸಂಸ್ಥೆಗಳು ಹಾಗೂ ವಿವಿಧ ಸರ್ಕಾರಿ ಇಲಾಖೆಗಳ ಸಮನ್ವಯದೊಂದಿಗೆ ಈ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು. ಶುದ್ಧ ಗಾಳಿ ಮತ್ತು ಆರೋಗ್ಯಕರ ಜೀವನಶೈಲಿಯನ್ನು ಜನಪ್ರಿಯಗೊಳಿಸುವಲ್ಲಿ "ಮೈಸೂರು ಸೈಕಲ್ ಡೇ" ಈಗ ನಗರದ ಪ್ರಮುಖ ವೇದಿಕೆಯಾಗಿ ಹೊರಹೊಮ್ಮುತ್ತಿದೆ.

### ಮೇ13 ವರುಣ, 17ಕ್ಕೆ ಚಾಮುಂಡೇಶ್ವರಿಯಲ್ಲಿ ಕಾರ್ಯಕ್ರಮ ,ಎಚ್‌ಡಿಕೆ ಸಾರಥ್ಯ,

# ಮೇ13, 17ಕ್ಕೆ ಜೆಡಿಎಸ್ ಶಕ್ತಿ ಪ್ರದರ್ಶನ




ಮೈಸೂರು: ಸದ್ದಿಲ್ಲದೆ ಸಂಘಟನೆ ಶುರು ಮಾಡಿರುವ ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಜನರೊಂದಿಗೆ ಜನತಾದಳ ಕಾರ್ಯಕ್ರಮ ವನ್ನು ಮೇ13 ವರುಣ, 17ಕ್ಕೆ ಚಾಮುಂಡೇಶ್ವರಿಯಲ್ಲಿ ಆಯೋಜಿಸಲು ನಿರ್ಧರಿಸಿದ್ದು, ಅದರಲ್ಲೂ ವಿಶೇಷವಾಗಿ ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸಾರಥ್ಯವಹಿಸಲಿದ್ದಾರೆ.

ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಶಾಸಕ ಜಿ.ಡಿ.ಹರೀಶ್ ಗೌಡ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ್ ಸ್ವಾಮಿ ನೇತೃತ್ವದಲ್ಲಿ ನಡೆಯುತ್ತಿರುವ ಜನರೊಂದಿಗೆ ಜನತಾದಳ ಕಾರ್ಯಕ್ರಮ ಈಗಾಗಲೇ ರಾಜ್ಯದಲ್ಲಿ 75 ಕ್ಷೇತ್ರದಲ್ಲಿ ಪೂರ್ಣಗೊಳಿಸಿದೆ. ಅದರಂತೆ ಮೇ 13ರಂದು ವರುಣ ಕ್ಷೇತ್ರದ ಮೆಲ್ಲಹಳ್ಳಿ ಸಮೀಪದ ಖಾಸಗಿ ಮದುವೆ ಮಂಟಪದಲ್ಲಿ ನಡೆಲಯಲಿದೆ. ಮೇ 17ರಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಜನರೊಂದಿಗೆ ಜನತಾದಳ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ಜಿಲ್ಲೆಯ ಸಮಾರೋಪ ಸಮಾರಂಭ ಕಾರ್ಯಕ್ರಮವೂ ಅಲ್ಲೇ ನಡೆಸುವುದರಿಂದ ಅಲ್ಲಿಗೆ ಸ್ವತಃ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರನ್ನೇ ಆಹ್ವಾನಿಸಿದ್ದೇವೆ. ಅವರ ನೇತೃತ್ವದಲ್ಲಿಯೇ ಸಭೆ ನಡೆಯಲಿದೆ ಎಂದರು.

ಜೆಡಿಎಸ್ ನ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ ಮಾತನಾಡಿ, ವ್ಯಭಿಚಾರ, ದರೋಡೆ, ಭ್ರಷ್ಟಾಚಾರ ಮೂರ ರಲ್ಲೂ ಭಾಗಿಯಾದ ಅಧಿಕಾರಿಗೆ ಕ್ಲೀನ್ ಚಿಟ್ ನೀಡುವು ದಾದರೆ ಶಿಕ್ಷೆ ಕೊಡುವುದಾದರೂ ಯಾರಿಗೆ ಮುಖ್ಯಮಂತ್ರಿ ಗಳೇ ಹಿರಿಯ ಪೊಲೀಸ್ ಅಧಿಕಾರಿ ರಾಮಚಂದ್ರರಾವ್ ಮೇಲೆ ಗುರುತರ ಆರೋಪಗಳು ಕೇಳಿ ಬಂದಿವೆ. ಆದರೂ ಅವರ ಮೇಲಿನ ಅಮಾನತು ರದ್ದುಪಡಿಸಿ ಮತ್ತೆ ಕರ್ತವ್ಯಕ್ಕೆ ನಿಯೋಜಿಸಿರುವುದರ ಔಚಿತ್ಯವೇನಿತ್ತು. ಭ್ರಷ್ಟ ಅಧಿಕಾರಿಗಳನ್ನು ರಕ್ಷಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಆರೋಪಿಸಿದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರೇ ಭ್ರಷ್ಟ ಅಧಿಕಾರಿಗಳನ್ನು ರಕ್ಷಿಸುವ ಕೆಲಸ ಮಾಡುತ್ತಿದ್ದಾರೆ. ಮೈಸೂರು ಜಿಲ್ಲಾಧಿಕಾರಿ ಆಗಿದ್ದ ರೋಹಿಣಿ ಸಿಂಧೂರಿ ಬಟ್ಟೆ ಬ್ಯಾಗ್ ಖರೀದಿ ಹಗರಣದಲ್ಲಿ ಭಾಗಿಯಾಗಿದ್ದಾರೆ. ಕೊರೊನಾ ಸಂದರ್ಭದಲ್ಲಿ ಚಾಮರಾಜನಗರದಲ್ಲಿ ನಡೆದ ಆಕ್ಸಿಜನ್ ಕೊರತೆಯಿಂದ ಜನರು ಸಾವನ್ನಪ್ಪಲು ರೋಹಿಣಿ ಸಿಂಧೂರಿ ಪ್ರಮುಖ ಕಾರಣ. ಆದರೂ ಅವರನ್ನು ಶಿಕ್ಷಿಸುವ ಬದಲು ರಕ್ಷಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಎಂದರು.

ಐಪಿಎಸ್ ಅಧಿಕಾರಿ ತಮ್ಮ ಕಚೇರಿಯಲ್ಲೇ ಮಹಿಳಾ ಸಿಬ್ಬಂದಿ ಜತೆ ಹಿರಿಯ ಅಧಿಕಾರಿ ಅನೂಚಿತವಾಗಿ ನಡೆದುಕೊಂಡಿದ್ದರು. ವಿಡಿಯೋಗಳು ವೈರಲ್ ಆಗಿದ್ದವು. ಅವರಿಗೆ ಸರ್ಕಾರ ಕ್ಲೀನ್‌ಚಿಟ್ ಕೊಟ್ಟಿದೆ. ರನ್ಯಾ ರಾವ್ ತಂದೆಯ ಸರ್ಕಾರಿ ಕಾರಿನಲ್ಲಿ ರಾಜಾರೋಷವಾಗಿ ಓಡಾಡಿದ್ದು ದೃಢಪಟ್ಟಿತ್ತು. ಅದೇ ಅಧಿಕಾರಿಗೆ ಇಲವಾಲ ಜಂಕ್ಷನ್‌ನಲ್ಲಿ ಹಲವು ವರ್ಷಗಳ ಹಿಂದೆ ನಡೆದ ದರೋಡೆ ಕೇಸ್‌ನಲ್ಲೂ ಸಿದ್ದರಾಮಯ್ಯ ಅವರು ಕ್ಲೀನ್‌ಚಿಟ್ ಕೊಟ್ಟಿದ್ದರು. ಈಗ ಅಮಾನತು ವಾಪಸ್ ಪಡೆಯುವ ಮೂಲಕ ವಿನಾಯಿತಿ ನೀಡಲಾಗಿದೆ.

ಇನ್ನೊಬ್ಬ ಮಹಿಳಾ ಐಎಎಸ್ ಅಧಿಕಾರಿ ಪಾರಂಪರಿಕ ಕಟ್ಟಡದ ಅನಧಿಕೃತ ನವೀಕರಣ, ಪೀಠೋಪಕರಣ ಕಳ್ಳತನ, ಅಧಿಕಾರ ದುರುಪಯೋಗದಂತಹ ಅನೇಕ ಅಕ್ರಮಗಳನ್ನು ಎಸಗಿದ್ದರು. ಹೈಕೋರ್ಟ್ ತೀರ್ಪಿನ ಬಳಿಕ ಸುಪ್ರೀಂಕೋರ್ಟ್ಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ. ಇದ್ಯಾವುದೂ ವೈಯುಕ್ತಿಕ ವ್ಯವಹಾರ ಅಲ್ಲ. ಸುಪ್ರೀಂಕೋರ್ಟ್ಗೆ ಹೋಗಲು ಆ ಅಧಿಕಾರಿ ಸರ್ಕಾರದಿಂದ ಅನುಮತಿ ಪಡೆದಿದ್ದಾರೆಯೇ?, ಚಾಮರಾಜನಗರ ಆಕ್ಸಿಜನ್ ದುರಂತದಲ್ಲಿ 32 ಜನರು ಮೃತಪಟ್ಟರು. ಅದಕ್ಕೆ ಕಾರಣರಾದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮ ಏನು? ಆ ಸಾವುಗಳಿಗೆ ಕೊಟ್ಟ ಬೆಲೆ ಏನು? ಘಟನೆ ನಡೆದಾಗ ವೀರಾವೇಷದಿಂದ ಬಂದು ತನಿಖೆಗೆ ಆಗ್ರಹಿಸಿದ್ದ ಈಗಿನ ಸಿದ್ದರಾಮಯ್ಯ ಅವರೇ, ತನಿಖಾ ವರದಿ ಏನಾಯಿತು? ಮುಖ್ಯ ಕಾರ್ಯದರ್ಶಿ ಯಾವ ಒತ್ತಡಕ್ಕೆ ಮಣಿದು ಸುಮ್ಮನಾ ದರು ಎಂದು ಪ್ರಶ್ನಿಸಿದರು. ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಹಾಗು ಜೆಡಿಎಸ್ ಜಿಲ್ಲಾಧ್ಯಕ್ಷ ಎಂ. ಅಶ್ವಿನ್ ಕುಮಾರ್, ಮಾಜಿ ಮೇಯರ್ ಗಳಾದ ಆರ್. ಲಿಂಗಪ್ಪ, ಎಂ.ಜೆ.ರವಿಕುಮಾರ್, ಜೆಡಿಎಸ್ ನಗರಾಧ್ಯಕ್ಷ ಎಸ್ ಬಿಎಂ ಮಂಜು, ಮುಖಂಡರಾದ ರಮೇಶ್, ಅಭಿಷೇಕ್, ಕೆ.ಟಿ.ಚಲುವೇಗೌಡ, ಯುವಘಟಕದ ಅಧ್ಯಕ್ಷ ಮದನ್ ಸೋಮು, ಅಭಿಷೇಕ್, ರಮೇಶ್(ರವಿ), ಚಂದ್ರಹಾಸ್, ರಘುರಾಮ್, ರಿಜ್ವಾನ್, ಪ್ರಕಾಶ್, ಹೇಮಾವತಿ, ಇನ್ನಿತರರು ಉಪಸ್ಥಿತರಿದ್ದರು.

## ಪೋಸ್ಟರ್ ಬಿಡುಗಡೆ

**ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಆಯೋಜಿಸಿ ರುವ ಜನತಾ ದಳ ಪ್ರೀಮಿಯರ್ ಲೀಗ್(ಜೆಪಿಎಲ್) ಕ್ರಿಕೆಟ್ ಪಂದ್ಯಾವಳಿಯ ಮೈಸೂರು ತಂಡದ ಪೋಸ್ಟರ್ ಅನ್ನು ಸೋಮ ವಾರ ಬಿಡುಗಡೆ ಮಾಡಲಾ ಯಿತು. ಈ ವೇಳೆ ಮಾತನಾ ಡಿದ ಮಾಜಿ ಶಾಸಕ ಅಶ್ವಿನ್ ಕುಮಾರ್, ಮೇ 18ರಂದು ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾ ಗಿದೆ. ಮೈಸೂರು ಜಿಲ್ಲೆಯ ತಂಡಕ್ಕೆ ಒಡೆಯರ್ ವಾರಿ ಯರ್ ಎಂದು ಹೆಸರಿಟ್ಟಿದ್ದು, ವಿವಿಧ ತಾಲೂಕುಗಳ ಆಟಗಾರರನ್ನೂ ಸೇರಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.**

## ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಡೊಳ್ಳು ಕಲೆಗೆ ಮನ್ನಣೆ




ರಾಮನಗರ: ರಾಜ್ಯದ ಕೆಲವಷ್ಟೇ ಪ್ರದೇಶಗಳಲ್ಲಿ ಸೀಮಿತವಾಗಿದ್ದ ಡೊಳ್ಳು ಕಲೆ ಇಂದು ರಾಜ್ಯ ಸೇರಿದಂತೆ ಅಂತರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆಯ ಕಲೆಯಾಗಿದೆ, ಇದಕ್ಕೆ ಖ್ಯಾತಿ ತಂದುಕೊಟ್ಟ ಶ್ರೇಯ ಕಲಾವಿದ ಶ್ರೀನಿವಾಸ್ ಅವರಿಗೆ ಸಲ್ಲುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೆ. ಸತೀಶ್ ಹೇಳಿದರು.

ಇಲ್ಲಿಗೆ ಸಮೀಪದ ಜಾನಪದ ಲೋಕದಲ್ಲಿ ಡಾ. ಎಚ್.ಎಲ್. ನಾಗೇಗೌಡರ ನೆನಪಿನಲ್ಲಿ ಪ್ರತಿ ತಿಂಗಳ ನಡೆಯುವ ತಿಂಗಳ ಅತಿಥಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಡೊಳ್ಳು ಕಲಾವಿದರಾದ ಶ್ರೀನಿವಾಸ್ ಅವರ ನಿಸ್ವಾರ್ಥ ಕೊಡುಗೆಯಿಂದ ಇಂದು ಶುಭ ಸಮಾರಂಭಗಳಿಗೆ ಡೊಳ್ಳು ಕಲೆ ವಾಣಿಜ್ಯ ಕಲೆಯಾಗಿ ಬೆಳೆದಿದೆ ಇವರ ಮಗ ಚಂದ್ರು ಐ.ಪಿ.ಎಸ್, ಐ.ಎ.ಎಸ್ ಅಧಿಕಾರಿಗಳಿಗೆ ತರಬೇತಿಯನ್ನು ನೀಡುವ ಅವಕಾಶವನ್ನು ಪಡೆದಿದ್ದಾರೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ನಡೆಯುವ ಅನೇಕ ಕಾರ್ಯಕ್ರಮಗಳಲ್ಲಿ ಈ ರೀತಿಯ ಜನಪದ ಕಲಾವಿದರಿಗೆ ಗೌರವವನ್ನು ನೀಡುತ್ತಾ ಬಂದಿದೆ ಎಂದರು.

ಜಾನಪದ ಲೋಕದ ಕ್ಯೂರೇಟರ್ ಡಾ. ರವಿ ಯು.ಎಂ, ಸಂಚಾಲಕ ಡಾ. ಸಂದೀಪ್ ಕೆ.ಎಸ್, ಡಿಪ್ಲೊಮಾ ವಿದ್ಯಾರ್ಥಿಗಳು, ಲೋಕದ ಸಿಬ್ಬಂದಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

### ಕಲೆಯನ್ನು ಅಂತರಂಗದಿಂದ ಕಾಪಾಡಿ – ಶಿವಕುಮಾರ್

ಅಂತರಾಷ್ಟ್ರೀಯ ಗಾಯಕರಾದ ಶಿವಕುಮಾರ್ ಬ್ಯಾಡ್ರಳ್ಳಿ ಅವರು ಮಾತನಾಡಿ, ಕಲೆಯನ್ನು ಪ್ರೇಕ್ಷಕರು ಅಂತರಂಗದಿಂದ ಕಾಪಾಡಬೇಕು, ಜಿಲ್ಲೆಯಲ್ಲಿ ಡೊಳ್ಳು ಕಲೆಗೆ ಬುನಾದಿ ಹಾಕಿಕೊಟ್ಟವರು ಶ್ರೀನಿವಾಸರವರು ಇವರ ಮೂಲಭೂತ ಸೌಕರ್ಯದ ಕೊರತೆಯ ನಡುವೆಯೂ ಜಾನಪದ ಲೋಕದಲ್ಲಿ ಈ ಕಲೆಯನ್ನು ಉಳಿಸಿ ಬೆಳೆಸಿ ಸಮೃದ್ಧಿ ಗೊಳಿಸಿದ್ದಾರೆ. ಗಂಡು ಕಲೆ ಇಂದು ಕೇವಲ ಗಂಡು ಕಲೆಯಾಗಿ ಇರದೆ ಹೆಣ್ಣು ಮಕ್ಕಳು ಕಲಿಯುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಡೊಳ್ಳು ಕುಣಿತ ಕಲಾವಿದರಾದ ಶ್ರೀನಿವಾಸ್ ಅವರನ್ನು ಗೌರವಿಸಲಾಯಿತು. ನಂತರ ನಡೆದ ಸಂವಾದದಲ್ಲಿ ಕಲೆ ಮತ್ತು ತಾವು ಕಲಿತ ಆಸಕ್ತಿ ಬಗ್ಗೆ ವಿವರಿಸಿದರು ಹಾಗೂ ಡೊಳ್ಳು ತಂಡದವರು ಕಲಾಪ್ರದರ್ಶನ ನಡೆಸಿಕೊಟ್ಟರು.

### ಡೊಳ್ಳು ಕುಣಿತ ಆರಾಧನಾ ಕಲೆ – ವಿಜಯ್ ರಾಂಪುರ

ಕರ್ನಾಟಕ ಜಾನಪದ ಪರಿಷತ್ತಿನ ಚನ್ನಪಟ್ಟಣ ತಾಲೂಕು ಘಟಕದ ಅಧ್ಯಕ್ಷ ಡಾ. ವಿಜಯ್ ರಾಂಪುರ ಮಾತನಾಡಿ ಕರ್ನಾಟಕದ ಗಂಡು ಕಲೆ ಜನಪ್ರಿಯ ಕಲೆ ಶಕ್ತಿಯುತವಾದ ಕಲೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿದೆ. ಯಾವುದೇ ಕಲೆ ಹುಟ್ಟಬೇಕಾದರೆ ಆರಾಧನೆ ಅಥವಾ ಮನರಂಜನಾ ಕಲೆಯಿಂದ ಹುಟ್ಟಿಕೊಳ್ಳುತ್ತದೆ ಆದರೆ ಡೊಳ್ಳು ಕುಣಿತ ಆರಾಧನೆ ಕಲೆ. ಧಾರ್ಮಿಕ ಮತ್ತು ಸಾಂಸ್ಕೃತಿಕ ಜೊತೆಗೆ ಪೌರಾಣಿಕ ಹಿನ್ನೆಲೆಯಲ್ಲಿ ಇದೆ. ಹಬ್ಬ ಹರಿದಿನ ಜಾತ್ರೆಗಳಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇತ್ತೀಚಿನ ದಿನಮಾನಗಳಲ್ಲಿ ರಾಜಕೀಯ ಕಾರ್ಯಕ್ರಮಗಳಲ್ಲಿ ಕಲಾವಿದರು ಮಿಂಚುತ್ತಿದ್ದಾರೆ, ಆರ್ಥಿಕವಾಗಿ ಸಬಲೀಕರಣ ವಾಗಬೇಕು ಎನ್ನುವ ದೃಷ್ಟಿಯಿಂದ ಕಲೆ ಬೆಳೆದು ವಿಜೃಂಭಿಸಲಿ ಎಂದರು.

## 82 ವಿದ್ಯಾರ್ಥಿಗಳಿಗೆ ಉದ್ಯೋಗ



ಮೈಸೂರು: ನಗರದ ಶೇಷಾದ್ರಿಪುರಂ ಪದವಿ ಕಾಲೇಜು 2025?26 ಶೈಕ್ಷಣಿಕ ವರ್ಷದಲ್ಲಿ ಅತ್ಯುತ್ತಮ ಉದ್ಯೋಗ ದಾಖಲೆಯನ್ನು ಸಾಧಿಸಿದೆ. ಬಿ.ಕಾಂ, ಬಿಬಿಎ ಮತ್ತು ಬಿಸಿಎ ಸ್ಟ್ರೀಮ್‌ಗಳ 82 ವಿದ್ಯಾರ್ಥಿಗಳು ಹಲವಾರು ಪ್ರತಿಷ್ಠಿತ ಸಂಸ್ಥೆಗಳಿಂದ ಉದ್ಯೋಗ ಕೊಡುಗೆಗಳನ್ನು ಪಡೆದುಕೊಂಡಿದ್ದಾರೆ.

ಕ್ಯಾಂಪಸ್ ನೇಮಕಾತಿ ಡ್ರೈವ್‌ನ ಭಾಗವಾಗಿ ಕಾಲೇಜಿನ 70 ಕ್ಕೂ ಹೆಚ್ಚು ಪ್ರಮುಖ ಕಂಪನಿಗಳನ್ನು ಸ್ವಾಗತಿಸಿತು. ಪ್ರಮುಖ ನೇಮಕಾತಿದಾರರಲ್ಲಿ ಕೋಡ್ ಯಂಗ್, ಆಕ್ಸೆಂಚರ್, ಕಾಮನ್‌ವೆಲ್ತ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಡಿಲಾಯ್ಟ್ ಕ್ಯೂಸ್ಪೈಡರ್ಸ್, ಅಮಗಿ ಮೀಡಿಯಾ ಲ್ಯಾಬ್ಸ್ ಮತ್ತು ಕಾಗ್ನಿಜೆಂಟ್ ಸೇರಿವೆ. ಉದ್ಯೋಗ ಋತುವಿನಲ್ಲಿ ನೀಡಲಾಗುವ ಅತ್ಯಧಿಕ ವೇತನದ ಕಂಪನಿ ವಾರ್ಷಿಕ 8 ಲಕ್ಷವಾಗಿದ್ದರೆ, ಸರಾಸರಿ ಸಿಟಿಸಿ ವಾರ್ಷಿಕ 3.5 ಲಕ್ಷವಾಗಿತ್ತು. ಕಾಲೇಜು ಆಡಳಿತ ಮಂಡಳಿಯು ಈ ಗಮನಾರ್ಹ ಸಾಧನೆಗೆ ಬಲವಾದ ಕೈಗಾರಿಕಾ ಸಹಯೋಗಗಳು, ಸಮಗ್ರ ಉದ್ಯೋಗ ತರಬೇತಿ ಉಪಕ್ರಮಗಳು ಮತ್ತು ವಿದ್ಯಾರ್ಥಿಗಳು ಪ್ರದರ್ಶಿಸಿದ ಶೈಕ್ಷಣಿಕ ಶ್ರೇಷ್ಠತೆ ಕಾರಣ ಎಂದು ಹೇಳಿದೆ. ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ಕೆ.ಸೌಮ್ಯ ಈರಪ್ಪ ಇನ್ನಿತರರು ಉಪಸ್ಥಿತರಿದ್ದರು.

## ಕಾಮಗಾರಿಗೆ ಶಾಸಕರಿಂದ ಗುದ್ದಲಿಪೂಜೆ



ಚಾಮರಾಜನಗರ: ನಗರದ13ನೇ ವಾರ್ಡ್ ನಲ್ಲಿ ಅಂಬೇಡ್ಕರ್ ಸಮುದಾಯ ಭವನದ ಮುಂದುವರೆದ ಕಾಮಗಾರಿಗೆ ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

2025–26ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಅಂಬೇಡ್ಕರ್ ಸಮುದಾಯ ಭವನದ ಮುಂದುವರೆದ ಕಾಮಗಾರಿ 20 ಲಕ್ಷ ರೂ. ನೀಡಲಾಗಿದೆ. ಗುಣಮಟ್ಟದಿಂದ ಸುಸಜ್ಜಿತ ಸಮುದಾಯ ಭವನ ನಿರ್ಮಿಸಿಕೊಂಡು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಮುಖಂಡ ಮಹೇಶ್ ಕುದರ್, ಸಿ.ಕೆ. ಮಂಜುನಾಥ್, ಯಜಮಾನರಾದ ಮಂಜುನಾಥ್ ಕುದರ್, ಮಹದೇವು, ಶಿವಣ್ಣ, ಗುರುಸ್ವಾಮಿ, ನಾಗರಾಜು, ಮಲ್ಲಿಕಾರ್ಜುನ, ನಿರ್ಮಿತಿ ಕೇಂದ್ರ ಇಂಜಿನಿಯರ್ ಆದ ಭೀಮ್ ಸಾಗರ್, ಸೋಮುಶೇಖರ್ ಇತರರು ಹಾಜರಿದ್ದರು.

# ಸಮಸಮಾಜದಿಂದ ಮಾತ್ರ ಅಂಬೇಡ್ಕರ್ ಕನಸು ನನಸು

### ಪ್ರಗತಿಪರ ಚಿಂತಕ ಚೇತನ್ ಅಹಿಂಸಾ ಅಭಿಪ್ರಾಯ | ಅಂಬೇಡ್ಕರ್ ಜಯಂತಿ

ಚಾಮರಾಜನಗರ: ಸಂವಿಧಾನದ ಮೂಲಕ ಸಮಸಮಾಜದ ಕನಸನ್ನು ಸಾಕಾರಗೊಳಿಸಲು ಡಾ. ಬಿ.ಆರ್. ಅಂಬೇಡ್ಕರ್ ಶ್ರಮಿಸಿದ್ದರು. ನಾವೆಲ್ಲರೂ ಒಗ್ಗೂಡಿ ಸಮ ಸಮಾಜವನ್ನು ಕಟ್ಟಿದಾಗ ಮಾತ್ರ ಅವರ ಕನಸು ಸಂಪೂರ್ಣವಾಗಿ ನನಸಾಗಲು ಸಾಧ್ಯ ಎಂದು ನಟ ಹಾಗೂ ಪ್ರಗತಿಪರ ಚಿಂತಕ ಚೇತನ್ ಅಹಿಂಸಾ ಅಭಿಪ್ರಾಯಪಟ್ಟರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಬಡಾವಣೆಯಲ್ಲಿ ಬಡಾವಣೆಯ ಯಜಮಾನರು, ಕುಲಸ್ಥರು ಹಾಗೂ ಸರ್ವೋದಯ ಡಾ. ಬಿ.ಆರ್. ಅಂಬೇಡ್ಕರ್ ಸೇವಾ ಸಮಿತಿ ವತಿಯಿಂದ ಆಯೋಜಿಸಿದ್ದ ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

"ಸಮಾಜದಲ್ಲಿ ಜಾತಿ ತಾರತಮ್ಯ, ಅಸ್ಪೃಶ್ಯತೆ ಇಂದಿಗೂ ಅಲ್ಲಲ್ಲಿ ಜೀವಂತವಾಗಿದೆ. ಹೀಗಾಗಿ ಸಮಸಮಾಜದ ಕನಸು ಇನ್ನೂ ಪೂರ್ಣವಾಗಿ ಈಡೇರಿಲ್ಲ. ದೇಶದ ಸಂಪತ್ತು ಕೇವಲ ಕೆಲವರ ಕೈಯಲ್ಲಿ ಕ್ರೋಢೀಕರಣಗೊಳ್ಳದೆ, ಆರ್ಥಿಕ ಸಮಾನತೆ ನೆಲೆಗೊಳ್ಳಬೇಕಿದೆ. ಉತ್ತಮ ಸಮಾಜ ನಿರ್ಮಾಣ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಅಂಬೇಡ್ಕರ್ ಅವರು ತೋರಿದ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಿದೆ," ಎಂದು ತಿಳಿಸಿದರು.

**ಸಂವಿಧಾನ ಶಿಲ್ಪಿಗೆ ಮಾತ್ರ ಸೀಮಿತಗೊಳಿಸದಿರಿ**

"ಅಂಬೇಡ್ಕರ್ ಹಾಗೂ ಕಾನ್ಶಿರಾಂ ಅವರ ವಿಚಾರಧಾರೆಗಳನ್ನು ಗಟ್ಟಿಯಾಗಿ ಉಳಿಸಿಕೊಂಡಿರುವ ಕೀರ್ತಿ ಚಾಮರಾಜನಗರದ ಜನತೆಗೆ ಸಲ್ಲುತ್ತದೆ. ರಾಜ್ಯದ ರಾಜಕಾರಣದಲ್ಲಿ ಪರ್ಯಾಯ ಶಕ್ತಿಯೊಂದು ಇಲ್ಲಿಂದಲೇ ಹುಟ್ಟಬೇಕಿದೆ. ಅಂಬೇಡ್ಕರ್ ಅವರನ್ನು ಕೇವಲ 'ಸಂವಿಧಾನ ಶಿಲ್ಪಿ' ಎಂದು ಸೀಮಿತಗೊಳಿಸುತ್ತಿರುವುದು



ನೋವಿನ ಸಂಗತಿ. ಅವರಲ್ಲಿ ಕೇವಲ ಒಂದು ದೇಶದ್ದಲ್ಲ, 100 ದೇಶಗಳ ಸಂವಿಧಾನವನ್ನು ಬರೆಯುವಷ್ಟು ಅಸಾಧಾರಣ ಸಾಮರ್ಥ್ಯವಿತ್ತು," ಎಂದು ಬಣ್ಣಿಸಿದರು.

"ಬಾಬಾಸಾಹೇಬರ ಪೋಸ್ಟರ್ ಅಥವಾ ಪ್ರತಿಮೆಗಳಲ್ಲಿ ಅಂಬೇಡ್ಕರ್ ವಾದ ಸಿಗುವುದಿಲ್ಲ. 'ನನ್ನನ್ನು ಪೂಜಿಸಬೇಡಿ, ನನ್ನನ್ನು ಓದಿ' ಎಂದು ಅವರೇ ಹೇಳಿದ್ದರು. ಅವರ ವಿಚಾರಗಳನ್ನು ನಾವು ಜನಸಾಮಾನ್ಯರಿಗೆ ತಲುಪಿಸದಿದ್ದರೆ, ಅಸಮಾನತೆಯ ಶಕ್ತಿಗಳು ಅವರನ್ನು ಕೇವಲ ಪ್ರತಿಮೆಗೆ ಸೀಮಿತಗೊಳಿಸಿಬಿಡುತ್ತವೆ," ಎಂದು ಎಚ್ಚರಿಸಿದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಮೈಸೂರಿನ ಉರಿಲಿಂಗಿಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, "ಸಂವಿಧಾನದ ಮೂಲಕ ದೇಶದ ಸರ್ವರಿಗೂ ಸಮಾನತೆ ಕಲ್ಪಿಸಿಕೊಟ್ಟ ಮಹಾನ್ ನಾಯಕ ಬಾಬಾಸಾಹೇಬ್ ಅಂಬೇಡ್ಕರ್," ಎಂದು ಸ್ಮರಿಸಿದರು. ಭೋಗಾಪುರ ವಸತಿಯುತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಪಿ. ದೇವರಾಜು ಮುಖ್ಯ ಭಾಷಣ ಮಾಡಿದರು.

ಕಾರ್ಯಕ್ರಮದಲ್ಲಿ ನಗರಸಭಾ ಪೌರಾಯುಕ್ತ ಪರಶುರಾಮ್ ಛಲವಾದಿ, ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಮಾಜಿ ಸದಸ್ಯೆ ಕಲಾವತಿ, ಮುಖಂಡರಾದ ಮಹೇಶ್ ಕುದರ್, ಉಮೇಶ್ ಕುದರ್, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಎಂ. ಕೃಷ್ಣಮೂರ್ತಿ, ಗಡಿ ಯಜಮಾನ ನಾಗರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

**ಪ್ರತಿಭಾ ಪುರಸ್ಕಾರ, ಸನ್ಮಾನ**

ಇದೇ ವೇಳೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಶಿಕ್ಷಕರಾದ ಸಿ ಕೆ. ರಾಮಸ್ವಾಮಿ, ಮಹದೇವಸ್ವಾಮಿ, ಸಿ.ಎಂ. ನರಸಿಂಹಮೂರ್ತಿ, ನಂದೀಶ್ ಮತ್ತು ಮಲ್ಲಿಕಾರ್ಜುನ ಅವರನ್ನು ಸನ್ಮಾನಿಸಲಾಯಿತು. ಅಂತಾರಾಷ್ಟ್ರೀಯ ಜಾನಪದ ಗಾಯಕ ಸಿ.ಎಂ. ನರಸಿಂಹಮೂರ್ತಿ ಮತ್ತು ತಂಡದಿಂದ ಮೂಡಿಬಂದ 'ಭೀಮ ಗೀತ ಗಾಯನ' ಸಭಿಕರ ಗಮನ ಸೆಳೆಯಿತು.

## ಲಾಟರಿ ಮಾರಾಟ: ಆರೋಪಿ ಬಂಧನ

ಗುಂಡ್ಲುಪೇಟೆ: ಪಟ್ಟಣದಲ್ಲಿ ಅಕ್ರಮವಾಗಿ ಕೇರಳ ಲಾಟರಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಬಂಧಿಸಿರುವ ಘಟನೆ ನಡೆದಿದೆ.

ಪಟ್ಟಣದ 14ನೇ ವಾರ್ಡ್ ಮಣಿಕಂಠ (44) ಬಂಧಿತ ಆರೋಪಿ. ಈತ ಪಟ್ಟಣದ ಊಟಿ ಸರ್ಕಲ್ ಬಳಿ ಲಾಟರಿ ಟಿಕೆಟ್ ಮಾರಾಟ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ಗುಂಡ್ಲುಪೇಟೆ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ನರೇಶ್‌ಕುಮಾರ್ ಹಾಗೂ ಸಿಬ್ಬಂದಿ ದಾಳಿ ನಡೆಸಿ, ಸುಮಾರು 5,800 ರೂ. ಮೌಲ್ಯದ 116 ಲಾಟರಿ ಟಿಕೆಟ್‌ಗಳು ಹಾಗೂ 5,300 ರೂ ನಗದನ್ನು ವಶಕ್ಕೆ ಪಡೆದು ಆತನನ್ನು ಬಂಧಿಸಿದ್ದಾರೆ. ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಾಡಿಗೆ ಬಂದ ಜಿಂಕೆ

ಗುಂಡ್ಲುಪೇಟೆ :– ಆಹಾರ ಅರಸಿಕೊಂಡು ಕಾಡಿನಿಂದ ನಾಡಿಗೆ ಬಂದ ಜಿಂಕೆಯನ್ನು ನಾಯಿಗಳ ದಾಳಿಯಿಂದ ರಕ್ಷಿಸಿ

ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಒಪ್ಪಿಸಿದ ಘಟನೆ ತಾಲೂಕಿನ ತೆರಕಣಾಂಬಿಯಲ್ಲಿ ನಡೆದಿದೆ. ತೆರಕಣಾಂಬಿ ಬಸ್ ನಿಲ್ದಾಣಕ್ಕೆ ದಾರಿ ತಪ್ಪಿ ಬಂದ ಜಿಂಕೆಯನ್ನು ನಾಯಿಗಳ ಹಿಂಡು ದಾಳಿ ನಡೆಸಲು ಯತ್ನಿಸಿದ್ದನ್ನು ಕಂಡ ಸಂಚಾರ ನಿಯಂತ್ರಕ್ಕ ವಿಠ್ಠಲ್ ಸ್ಥಳೀಯರ ಸಹಕಾರದೊಂದಿಗೆ ನಾಯಿಗಳನ್ನು ಚದುರಿಸಿ ಜಿಂಕೆಯನ್ನು ರಕ್ಷಿಸಿ ಅರಣ್ಯ ಇಲಾಖೆಯ ಉಪವಲಯ ಅರಣ್ಯಾಧಿ ಕಾರಿ ನವೀನ್ ಕುಮಾರ್ ರವರಿಗೆ ಮಾಹಿತಿ ನೀಡಿದ್ದಾರೆ ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆಯ ಸಿಬ್ಬಂದಿಗಳು ಜಿಂಕಯನ್ನು ರಕ್ಷಣೆ ಮಾಡಿದ್ದಾರೆ



## ಶಾಂತಿ, ಸೌಹಾರ್ದತೆಯಿಂದ ಬದುಕಬೇಕಾದ ಅಗತ್ಯ: ರೆ.ಫಾ.ಬೆಂಜಮಿನ್ ವಾಸ್

ಮೈಸೂರು: ದೇಶದಲ್ಲಿ ಧರ್ಮ ಪ್ರಚಾರಕ್ಕೆ ರಕ್ಷಣೆಯಿದೆ. ಆದರೆ ಬಲವಂತದ ಮತಾಂತರಕ್ಕಲ್ಲ ಎಂದು ಸುಪ್ರೀಂಕೋರ್ಟ್ ತಿಳಿಸಿದೆ. ಇದರೊಡನೆ ದೇಶದ ಎಲ್ಲರೂ ಸರ್ವ ಧರ್ಮಗಳಿಗೂ ಗೌರವ ಕೊಡುವ ಮೂಲಕ ಪರಸ್ಪರ ಶಾಂತಿ, ಸೌಹಾರ್ದತೆಯಿಂದ ಬದುಕಬೇಕಾದ ಅಗತ್ಯವಿದೆ ಎಂದು ಇಂಡಿಯಾ ಬೈಬಲ್ ಲಿಟರೇಚರ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ರೆ.ಫಾ.ಬೆಂಜಮಿನ್ ವಾಸ್ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬಲವಂತ, ಬೆದರಿಕೆ ಅಥವಾ ಭೌತಿಕ ಪ್ರಲೋಭನೆಯನ್ನು ಒಳಗೊಂಡ ಯಾವುದೇ ಮತಾಂತರ ಸರಿಯಲ್ಲ. ಅದು ಸದಾ ಸ್ವಯಿಚ್ಚಿಕವಾ ಗಿರಬೇಕು. ಬಲವಂತದ ಮತಾಂತರಕ್ಕೆ ಶಿಕ್ಷೆಯಿದೆ ಎಂಬ ಅರಿವು ಎಲ್ಲರಿಗೂ ಇದೆ. ಇದರೊಡನೆ ಕ್ರೈಸ್ತರು ಎಂದಿಗೂ ಬಲವಂತದ ಮತಾಂತರ ಮಾಡಿಲ್ಲ. ಆ ರೀತಿ ಮಾಡಿದ್ದಿದ್ದರೆ ದೇಶದಲ್ಲಿ ಈ ಸಮುದಾಯದ ಜನಸಂಖ್ಯೆ ಇಷ್ಟು ಕಡಿಮೆ ಇರುತ್ತಿರಲಿಲ್ಲ. ನೆಮ್ಮದಿ ಬಯಸುವವರಿಗೆ ನೆರವು ನೀಡುವ ಕೆಲಸವನ್ನಷ್ಟೇ ಮಾಡುತ್ತಿದ್ದಾರೆ. ತಮ್ಮ ಮನೆಯಲ್ಲಿಯೂ ಹಿಂದೂ ದೇವರ ವಿಗ್ರಹಗಳಿವೆ, ತಮ್ಮ ಕುಟುಂಬದವರೂ ಸಹಾ ಅತಿ ಹೆಚ್ಚಿನ ಗೌರವ ನೀಡುತ್ತಿದ್ದಾರೆ. ಹೀಗಾಗಿ ದೇಶವನ್ನು ಸರ್ವ ಜನಾಂಗದ ಶಾಂತಿಯ ತೋಟವಾಗಿಸುವತ್ತ ಎಲ್ಲರೂ ಶ್ರಮಿಸಬೇಕೆಂದು ಕೋರಿದರು. ಸತ್ಯನಾರಾಯಣ್ ಇದ್ದರು.

## ಕಾರುಗಳ ನಡುವೆ ಅಪಘಾತ

ಗುಂಡ್ಲುಪೇಟೆ: ಕಾರು ಮತ್ತು ಲಾರಿ ನಡುವೆ ಅಪಘಾತ ಸಂಭವಿಸಿ ಪ್ರಯಾಣಿಕರು ಪಾರಾದ ಘಟನೆ ತಾಲೂಕಿನ ಗರಗನಹಳ್ಳಿ ಗೇಟ್ ಸಮೀಪದಲ್ಲಿ ನಡೆದಿದೆ.



ಗುಂಡ್ಲುಪೇಟೆಯಿಂದ ಮೈಸೂರಿಗೆ ತೆರಳುತ್ತಿದ್ದ ಲಾರಿ ಮತ್ತು ಮೈಸೂರಿನಿಂದ ಗುಂಡ್ಲುಪೇಟೆ ಕಡೆಗೆ ಬರುತ್ತಿದ್ದ ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಕಾರಿನಲ್ಲಿದ್ದ ನಾಲ್ಕು ಮಂದಿ ಅದೃಷ್ಟವಶಾತ್ ಪಾರಾಗಿದ್ದಾರೆ. ಆದರೆ ಕಾರಿನ ಮುಂಭಾಗ ಸಂಪೂರ್ಣ ಜಖಂ ಆಗಿದೆ. ಮಾಹಿತಿ ತಿಳಿದ ಬೇಗೂರು ಠಾಣೆ ಪೊಲೀಸರು ಎರಡು ವಾಹನಗಳನ್ನು ವಶಕ್ಕೆ ಪಡೆದು. ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಮಹದೇಶ್ವರ ಬೆಟ್ಟದಲ್ಲಿ ಚಿರತೆ ದಾಳಿಗೆ ಬಾಲಕ ಬಲಿ

ಹನೂರು: ನಾಡಿನ ಪ್ರಸಿದ್ಧ ಯಾತ್ರಾಸ್ಥಳವಾದ ಜಿಲ್ಲೆಯ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಮತ್ತೆ ಚಿರತೆ ದಾಳಿ ನಡೆಸಿದ್ದು, ಪಾಲಕರ ಜೊತೆ ಬಂದಿದ್ದ ಬಾಲಕ ಸಾವನ್ನಪ್ಪಿದ್ದಾನೆ.

ಬೆಂಗಳೂರಿನ ಲಗ್ಗೆರೆ ವಾರ್ಡ್‌ನ ನಿವಾಸಿ ಸುರೇಶ ಎಂಬವರ ಪುತ್ರ ಹರ್ಷಿತ್ ಚಿರತೆ ದಾಳಿಯಿಂದ ಮೃತಪಟ್ಟಿದ್ದಾನೆ. ಲಗ್ಗೆರೆ ವಾರ್ಡ್‌ನ ನಿವಾಸಿಗಳು ಶನಿವಾರ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ದೇವರ ದರ್ಶನ ಪಡೆದ ವಾಸ್ತವ್ಯ ಹೂಡಿದ್ದರು. ಇಂದು ಬೆಳಗ್ಗೆ 10ಕ್ಕೂ ಹೆಚ್ಚು ಜನರು ನಾಗಮಲೆಗೆ ತೆರಳುತ್ತಿದ್ದಾಗ ಇಂಡಿಗನತ್ತ ಗ್ರಾಮದ ಸಮೀಪ ಬಾಲಕನ ಮೇಲೆ ಚಿರತೆ ದಾಳಿ ನಡೆಸಿ ಪೊದೆಗೆ ಎಳೆದೊಯ್ದು ಕೊಂದಿದೆ. ಈ ಸಂದರ್ಭ ದಲ್ಲಿ ಜತೆಗಿದ್ದ ಕುಟುಂಬಸ್ಥರು ಜೋರಾಗಿ ಕಿರುಚಾ ಡಿದರೂ ಬಿಡದೆ ಎಳೆದೊಯ್ದಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಮಾಹಿತಿ ಪಡೆದು ಶವ ಪತ್ತೆ ಹಚ್ಚಿದ್ದಾರೆ.



ಪುತ್ರನನ್ನು ಕಳೆದುಕೊಂಡ ಪೋಷಕರ ಆಕ್ರಂ ದನ ಮುಗಿಲು ಮುಟ್ಟಿದೆ. ಕಳೆದ ಶಿವರಾತ್ರಿ ಜಾತ್ರಾ ಮಹೋತ್ಸವ ಸಂದರ್ಭದಲ್ಲೂ ತಾಳುಬೆಟ್ಟ ಸಮೀಪ ಚಿರತೆ ದಾಳಿ ಮಾಡಿ ಯುವಕನನ್ನು ಬಲಿ ಪಡೆದಿತ್ತು.

ಇಂಡಿಗನತ್ತ ಗ್ರಾಮದ ಹುಚ್ಚೇಗೌಡ ಎಂಬವ ರಿಗೆ ಸೇರಿದ ಮೂರು ಮೇಕೆಗಳ ಮೇಲೂ ಶನಿ ವಾರ ತಡರಾತ್ರಿ ಚಿರತೆ ದಾಳಿ ನಡೆಸಿದ್ದು ಮೂರು ಮೇಕೆಗಳು ಮೃತಪಟ್ಟಿವೆ. ಇದೇ ಚಿರತೆ ಬಾಲಕನ ಮೇಲೆ ದಾಳಿ ಮಾಡಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

**ಅರಣ್ಯ ಇಲಾಖೆಯ ವಿರುದ್ಧ ಆಕ್ರೋಶ**

ಭಕ್ತರು ನಾಗಮಲೆಗೆ ತೆರಳಲು ಅರಣ್ಯ ಇಲಾಖೆಯವರು ಬೆಳಿಗ್ಗೆ 7 ಗಂಟೆಯ ಬಳಿಕ ಟಿಕೆಟ್ ನೀಡುತ್ತಿದ್ದರು. ಆದರೆ ಭಾನುವಾರ 6 ಗಂಟೆಗೆ ಟಿಕೆಟ್ ನೀಡಿರುವುದರಿಂದ ಈ ದುರ್ಘಟನೆ ಸಂಭವಿಸಿದೆ. ಈ ಸಾವಿಗೆ ಅರಣ್ಯ ಇಲಾಖೆಯವರೇ ಕಾರಣ ಎಂದು ನಮ್ಮ ಕನ್ನಡಿಗರ ವಿಜಯ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಪೊನ್ನಾಚಿ ಸ್ನೇಹಜೀವಿ ರಾಜು ಆರೋಪಿಸಿದ್ದಾರೆ. ನಿಗದಿ ಮಾಡಿರುವ ಸಮಯಕ್ಕಿಂತ ಮೊದಲು ಚಾರಣಕ್ಕೆ ಟಿಕೆಟ್ ಏಕೆ ಕೊಡಬೇಕಿತ್ತು? ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಲೆ ಮಹದೇಶ್ವರ ಬೆಟ್ಟ ಕಾನನದಲ್ಲಿ ಚಿರತೆ ದಾಳಿ ಮುಂದುವರೆದಿದ್ದು, ಈ ಹಿಂದೆ ಮಂಡ್ಯದ ಪಾದಯಾತ್ರಿ ಯುವಕ ಸಾವನ್ನಪ್ಪಿದ್ದ. ಈ ಘಟನೆ ಮಾಸುವ ಮುನ್ನವೇ ಕುಟುಂಬಸ್ಥರ ಜೊತೆ ಪಾದಯಾತ್ರೆ ಮೂಲಕ ತೆರಳುತ್ತಿದ್ದ ಬಾಲಕನ ಮೇಲೆ ಚಿರತೆ ದಾಳಿ ನಡೆಸಿತ್ತು. ಅದೃಷ್ಟವಶಾತ್ ತರಚಿದ ಗಾಯಗಳಾಗಿ ಬಾಲಕ ಬದುಕುಳಿದಿದ್ದ. ಇದಾದ ಬಳಿಕ ಇಂದು ಬೆಳಗ್ಗೆ ಬಾಲಕ ಚಿರತೆ ದಾಳಿಗೆ ಬಲಿಯಾಗಿರುವುದು ಭಕ್ತರು ಹಾಗೂ ಸಾರ್ವಜನಿಕರಲ್ಲಿ ಆತಂಕ ಉಂಟುಮಾಡಿದೆ.

## ಡಾ.ಬಿ.ಆರ್.ಅಂಬೇಡ್ಕರ್ 135ನೇ ಜಯಂತಿ



ಚಾಮರಾಜನಗರ, ನಗರದ ಹೌಸಿಂಗ್ ಬೋರ್ಡ್ ಕಾಲೋನಿಯ ಡಾ.ಭೀಮ್ ರಾವ್ ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಭಾನುವಾರ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮ ಅದ್ಧೂರಿಯಾಗಿ ನಡೆಯಿತು.

ನಗರದ ಹೌಸಿಂಗ್ ಬೋರ್ಡ್ ಕಾಲೋನಿಯ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನದ ಮುಂಭಾಗ ಅಂಬೇಡ್ಕರ್ ಭಾವಚಿತ್ರ ಮೆರವಣಿಗೆಗೆ ಸಂಘದ ಅಧ್ಯಕ್ಷ ವಿ.ಮಹದೇವಯ್ಯ ಚಾಲನೆ ನೀಡಿದರು. ಕಾಲೋನಿಯ ವಿವಿಧ ರಸ್ತೆಗಳಲ್ಲಿ ಸಾಗಿದ ಮೆರವಣಿ ವೇದಿಕೆ ಕಾರ್ಯಕ್ರಮ ನಿಗದಿಯಾಗಿದ್ದ ಅಂಬೇಡ್ಕರ್ ಪಾರ್ಕ್ ಬಳಿ ಅಂತ್ಯವಾಯಿತು. ಮೆರವಣಿಗೆಯಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕುಣಿದು ಕುಪ್ಪಳಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ವಿ.ಮಹದೇವಯ್ಯ ಮಾತನಾಡಿ, ಪ್ರತಿವರ್ಷದಂತೇ ಈ ವರ್ಷವೂ ಡಾ.ಭೀಮ್ ರಾವ್ ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಭೀಮೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಂಬೇಡ್ಕರ್ ಅವರ ತತ್ವ–ಸಿದ್ಧಾರಂತಗಳು ಪ್ರಸ್ತುತ ಜಗತ್ತಿಗೆ ಪ್ರೇರಣೆಯಾಗಿದೆ. ಅವರ ಅಪಾರವಾದ ಜ್ಞಾನ ನಮ್ಮ ದೇಶದ ಪ್ರಗತಿಗೆ ಬಹುದೊಡ್ಡ ಕೊಡುಗೆ ನೀಡಿದೆ ಎಂದರು. ಸಂಘದ ಪ್ರಧಾನ ಕಾರ್ಯ ದರ್ಶಿ ಆರ್.ಶಿವಮೂರ್ತಿ, ಉಪಾಧ್ಯಕ್ಷರಾದ ಶಿವಕುಮಾರ್, ಮೋಹನಾಂಭ, ಪಿ. ಯಶೋಧರ, ಖಜಾಂಚಿ ಎಚ್.ವಿ. ಕೃಷ್ಣಮೂರ್ತಿ, ಕಾರ್ಯದರ್ಶಿಗಳಾದ ದೊರೆಸ್ವಾಮಿ, ಶಿವು, ಪವನ್ ಕುಮಾರ್, ನಿರ್ದೇಶಕರಾದ ಕಲ್ಯಾಣಮ್ಮ, ಯತೀಶ್, ಪ್ರತಾಪ್, ಉಮೇಶ್, ಬಿ.ಕೃಷ್ಣ, ನಾಗೇಂದ್ರ, ರವಿ ಅರಸು, ನಾಗ ಬಸವಣ್ಣ, ಶೃಂಗಾರ್, ಮಲ್ಲಿಕಾರ್ಜುನಸ್ವಾಮಿ, ಪ್ರಕಾಶ್, ಕಾಂತರಾಜು, ನಂಜುಂಡಯ್ಯ, ಇಂದ್ರಾಣಿ, ಹನುಮಂತಯ್ಯ, ಇತರರು ಹಾಜರಿದ್ದರು.

**ದಾಸಬಣಜಿಗರ ಸೀತಾ ರಾಮಮಂದಿರದಲ್ಲಿ ಆಯೋಜನೆ**

## ವಿಜೃಂಭಣೆಯ ರಾಮಪಟ್ಟಾಭೀಷೇಕ ಮಹೋತ್ಸವ

ಚಾಮರಾಜನಗರ, ನಗರದ ಚಿಕ್ಕ ಅಂಗಡಿ ಬೀದಿಯ ಶ್ರೀ ಸೀತಾರಾಮಮಂದಿರದಲ್ಲಿ ದಾಸ ಬಣಜಿಗರ ಸಂಘದ ಆಶ್ರಯದಲ್ಲಿ ಮೇ, 8 ರ ಶುಕ್ರವಾರದಿಂದ ಮೇ 10 ರ ಭಾನುವಾರದವರೆಗೆ ಮೂರು ದಿನಗಳ ಕಾಲ ನಡೆದ ಶ್ರೀ ಸೀತಾರಾಮ ಕಲ್ಯಾಣೋತ್ಸವ, ಶ್ರೀ ರಾಮಪಟ್ಟಾಭೀಷೇಕ ಮಹೋತ್ಸವ ಹಾಗೂ ಹನುಮಂತೋತ್ಸವ ವಿಜೃಂಭಣೆಯಿಂದ ನೆರವೇರಿತು.

ಶ್ರೀ ರಾಮಪಟ್ಟಾಭೀಷೇಕ ಮಹೋತ್ಸವದ ಅಂಗವಾಗಿ ಮೂರು ದಿನಗಳ ಕಾಲ ಮುಂಜಾನೆ ಮತ್ತು ಸಂಜೆ ದೇವರಿಗೆ ಅರ್ಚನೆ, ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳು ನೆರವೇರಿತು. ಚಾಮರಾಜನಗರ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತರು ದೇವರ ದರ್ಶನ ಪಡೆದು ಪ್ರಸಾದ ಸವಿದರು. ಶ್ರೀರಾಮಪಟ್ಟಾಭೀಷೇಕ ಮಹೋತ್ಸವದ ಅಂಗವಾಗಿ ಶ್ರೀರಾಮಮಂದಿರ ಸೇರಿದಂತೆ ಚಿಕ್ಕ ಅಂಗಡಿ ಬೀದಿ ವಿದ್ಯುತ್ ದೀಪಗಳಿಂದ ಕಂಗೊಳಿಸುತಿತ್ತು. ಶುಕ್ರವಾರ ರಾತ್ರಿ ನಡೆದ ಶ್ರೀ ರಾಮಕಲ್ಯಾಣೋತ್ಸವ ಹಾಗೂ ಶನಿವಾರ



ಮಧ್ಯಾಹ್ನ ನಡೆದ ಶ್ರೀರಾಮಪಟ್ಟಾಭೀಷೇಕವನ್ನು ನೆರೆದಿದ್ದ ಭಕ್ತ ಸಮೂಹ ಕಣ್ತುಂಬಿಸಿಕೊಂಡರು.

ಸಂಜೆ ವಿವಿಧ ಬಗೆಯ ಹೂವು ಗಳಿಂದ ಅಲಂಕೃತಗೊಂಡ ಪಲ್ಲಕ್ಕಿ ಉತ್ಸವ ಆಕರ್ಷಿಣೀಯವಾಗಿತ್ತು. ಶ್ರೀ ಸೀತಾ ರಾಮ ಭಾವಚಿತ್ರ ಹೊತ್ತ ಅಲಂಕೃತ ಪಲ್ಲಕ್ಕಿ ಉತ್ಸವ ನಗರದ ಪ್ರಮುಖ ಬೀದಿಗಳ ನೆರವೇರಿತು. ಮಹಿಳೆಯರು ಸೇರಿದಂತೆ ಯುವಕರು ಪಲ್ಲಕ್ಕಿ ಉತ್ಸವ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಮಾರನೆ ದಿನ ಭಾನುವಾರ ಹನುಮಂತೋತ್ಸವದ ಅಂಗವಾಗಿ ಹನುಮಂತ ಮೂರ್ತಿಯ ಮೆರವಣಿಗೆ ನಡೆಯಿತು. ಮೆರವಣಿಗೆಯುದ್ದಕ್ಕೂ ಯುವಕರು ಪರಸ್ಪರ ಬಣ್ಣಗಳನ್ನು ಎರೆಚುತ್ತಾ ಓಕಳಿ ಆಚರಿಸುವ ಮೂಲಕ ಮೂರು ದಿನಗಳು ನಡೆದ ಶ್ರೀ ರಾಮಪಟ್ಟಾಭೀಷೇಕಕ್ಕೆ ತೆರೆ ಎಳೆಯಲಾಯಿತು.

ಧಾರ್ಮಿಕ ಕಾರ್ಯಗಳಲ್ಲಿ ದಾಸ ಬಣಜಿಗ ಸಂಘದ ಅಧ್ಯಕ್ಷ – ಪದಾಧಿಕಾರಿಗಳು, ಯುವಕರು, ಮಹಿಳೆಯರು, ಸಮುದಾಯದ ಹಿರಿಯ, ಕಿರಿಯ ಮುಖಂಡರು ಭಾಗವಹಿಸಿದ್ದರು.

# ಸಂಕ್ಷಿಪ್ತ ಸುದ್ದಿ

## ನಾಳೆ ಸರ್ಕಾರಿ ನೌಕರರ ದಿನಾಚರಣೆ ಕಾರ್ಯಕ್ರಮ

**ಮಂಡ್ಯ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್,ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಮಂಡ್ಯ ಇವರ ಸಂಯುಕ್ತ ಆಶ್ರಯದಲ್ಲಿ ಸರ್ಕಾರಿ ನೌಕರರ ದಿನಾಚರಣೆ ಕಾರ್ಯಕ್ರಮ ಹಾಗೂ ನಾಗರೀಕ ಸೇವಾ ದಿನಾಚರಣೆ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮವನ್ನು ಮೇ 13 ರಂದು ಮಧ್ಯಾಹ್ನ 02 ಗಂಟೆಗೆ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ

ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ .ಕುಮಾರಸ್ವಾಮಿ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮಂಡ್ಯ ವಿಧಾನಸಭಾ ಶಾಸಕರಾದ ಪಿ.ರವಿಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಶಾಸಕ ಎ.ಬಿ ರಮೇಶ ಬಂಡಿಸಿದ್ದೇಗೌಡ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಹಾಗೂ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ ಎಂ ನರೇಂದ್ರಸ್ವಾಮಿ, ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷರಾದ ಡಾ.ಮೂರ್ತಿ ಅವರು ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಲಿದ್ದಾರೆ.


ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ,ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ವಿಧಾನ ಸಭಾ ಶಾಸಕರುಗಳಾದ ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ ಮಂಜು, ಕೆ.ಎಂ ಉದಯ, ರಾಜ್ಯ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್ ಆತ್ಮಾನಂದ, ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ.ಹೆಚ್.ಕೃಷ್ಣ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಪಿ ಪ್ರಕಾಶ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷರಾದ ಸಿ.ಡಿ ಗಂಗಾಧರ, ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಿ. ನಾಗೇಂದ್ರ ಕುಮಾರ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಸಿ. ಎಸ್. ಷಡಾಕ್ಷರಿ ರವರು ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತಾರಾಗಿ ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಆಡಳಿತಾಧಿಕಾರಿಗಳಾದ ಮನೋಜ್ ಕುಮಾರ್ ಮೀನಾ, ಜಿಲ್ಲಾಧಿಕಾರಿಗಳಾದ ಡಾ. ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ. ಆರ್. ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶೋಭರಾಣಿ ವಿ. ಜೆ. ಅಪರ ಜಿಲ್ಲಾಧಿಕಾರಿಗಳಾದ ಬಿ. ಸಿ. ಶಿವಾನಂದಮೂರ್ತಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷರಾದ ಎಸ್. ಶಂಭುಗೌಡ ರವರು ಭಾಗವಹಿಸಲಿದ್ದಾರೆ.

## ಅರ್ಜಿ ಆಹ್ವಾನ

**ಮಂಡ್ಯ:**–2026–27 ನೇ ಸಾಲಿನ ಡಿ.ಇ.ಎಲ್. ಇಡಿ/ಡಿ.ಪಿ.ಇಡಿ/ಡಿ.ಪಿ.ಎಸ್.ಇ. ಕೋರ್ಸುಗಳ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ ಅನುದಾನಿತ ಹಾಗೂ ಅನುದಾನರಹಿತ ಸಂಸ್ಥೆಗಳಲ್ಲಿ ಸರ್ಕಾರಿ ಕೋಟಾದಡಿ ಲಭ್ಯವಿರುವ ಸೀಟುಗಳಿಗೆ ದಾಖಲಾತಿ ಪ್ರಕ್ರಿಯೆ ನಿರ್ವಹಿಸುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಮೇ 06 ರಿಂದ ಜೂನ್ 01 ರವರೆಗೆ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಇಲಾಖೆ ವೆಬ್ ಸೈಟ್ : www.schooleducation.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದು.ಹೆಚ್ಚಿನ ಮಾಹಿತಿಗಾಗಿ 9448999376,9448959069 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಡಯಟ್ ಉಪನಿರ್ದೇಶಕರು (ಅಭಿವೃದ್ಧಿ) ಪದನಿಮಿತ್ತ ಹಾಗೂ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ತುರ್ತು ಕ್ರಮವಹಿಸಿ ಗ್ರಾಮಗಳಿಗೆ ಭೇಟಿ ನೀಡಿ ವಾಸ್ತವ ಸ್ಥಿತಿ ಪರಿಶೀಲಿಸಿ

**ಮಂಡ್ಯ:** ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಎದುರಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಆದ್ಯತೆ ಮೇರೆಗೆ ಪರಿಹರಿಸಲು ಅಧಿಕಾರಿಗಳು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಸೂಚಿಸಿದರು.



ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ 15 ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಲ್‌ಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದ್ದು, ಇನ್ನೂ ಎರಡು ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಹೆಚ್ಚಿನ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಕಡ್ಡಾಯವಾಗಿ ಸ್ಥಳಕ್ಕೆ ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿ ಸಮಸ್ಯೆಗಳನ್ನು ತಕ್ಷಣ ಪರಿಹರಿಸಬೇಕು ಎಂದು ಸೂಚಿಸಿದರು.

ಕೊಳವೆ ಬಾವಿಗಳ ಇಳುವರಿಯನ್ನು ನಿಯಮಿತವಾಗಿ ಪರಿಶೀಲಿಸಬೇಕು. ಬೇಸಿಗೆ ಮುಗಿಯುವವರೆಗೆ ಜನರಿಗೆ ಕುಡಿಯುವ ನೀರಿನ ತೊಂದರೆ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜನರಿಂದ ಕುಡಿಯುವ ನೀರಿನ ಸಮಸ್ಯೆ ಕುರಿತು ದೂರುಗಳು ಬಾರದಂತೆ ತಹಶೀಲ್ದಾರರು, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮೀಣ ನೀರು ಸರಬರಾಜು ಇಲಾಖೆ ಅಧಿಕಾರಿಗಳು ಮೊದಲ ಆದ್ಯತೆಯ ಮೇರೆಗೆ ಸಮಸ್ಯೆ ಪರಿಹಾರಕ್ಕೆ ಮುಂದಾಗಬೇಕು ಎಂದು ಹೇಳಿದರು.

ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಯಾವುದೇ ಹಣದ ಕೊರತೆ ಇಲ್ಲ. ಆದ್ದರಿಂದ ತುರ್ತು ಕ್ರಮಗಳ ಮೂಲಕ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ತಿಳಿಸಿದರು.

ನದಿ, ಕೆರೆ ಹಾಗೂ ಇತರೆ ಜಲಮೂಲಗಳಿಂದ ಅನಧಿಕೃತವಾಗಿ ಪಂಪ್‌ಸೆಟ್ ಬಳಸಿ ನೀರು ಎತ್ತುವುದು ಕಾನೂನುಬಾಹಿರ ಚಟುವಟಿಕೆಯಾಗಿದೆ. ಇದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ತಹಶೀಲ್ದಾರರು, ತಾಲೂಕು ಪಂಚಾಯಿತಿ ಅಧಿಕಾರಿಗಳು, ಚೆಸ್ಕಾಂ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಜಲಮೂಲ ಪ್ರದೇಶಗಳಿಗೆ ಭೇಟಿ ನೀಡಿ ಅನಧಿಕೃತ ಪಂಪ್‌ಸೆಟ್‌ಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಬೇಕು ಎಂದು ಸೂಚಿಸಿದರು. ನೀರು ಶುದ್ಧೀಕರಣ ಘಟಕಗಳ ಕಾರ್ಯನಿರ್ವಹಣೆ ಹಾಗೂ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಪರೀಕ್ಷಿಸಬೇಕು ಎಂದ ಅವರು, ಜಿಲ್ಲೆಯಲ್ಲಿ ಮುಂದಿನ 40 ವಾರಗಳವರೆಗೆ ಮೇವಿನ ಸಮಸ್ಯೆ ಎದುರಾಗುವುದಿಲ್ಲ ಎಂದು ತಿಳಿಸಿದರು. ಸಭೆಯಲ್ಲಿ ಶಿವನಂದಾಮೂರ್ತಿ, ಎನ್.ಜಿ.ಪ್ರಮೋದ್ ಕುಮಾರ್, ಅಶೋಕ್, ಟಿ.ಎನ್. ನರಸಿಂಹಮೂರ್ತಿ, ಶಿವಲಿಂಗಯ್ಯ ಸೇರಿದಂತೆ ಜಿಲ್ಲೆಯ ಎಲ್ಲಾ ತಹಶೀಲ್ದಾರರು, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಪೌರಾಯುಕ್ತರು ಹಾಗೂ ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳು ಉಪಸ್ಥಿತರಿದ್ದರು.

## ಮೇ 12 ರಂದು ವಿದ್ಯುತ್ ವ್ಯತ್ಯಯ



**ಮಂಡ್ಯ:** 66/11 ಕೆ.ವಿ ಜಿ.ಮಲ್ಲಿಗೆರೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಮೇ 12 ರಂದು ಬೆಳಿಗ್ಗೆ 09 ರಿಂದ ಸಂಜೆ 6 ಗಂಟೆಯ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಜಿ.ಮಲ್ಲಿಗೆರೆ ವಿದ್ಯುತ್ ವಿತರಣಾ ಕೇಂದ್ರಗಳಾದ ಜಿ.ಮಲ್ಲಿಗೆರೆ, ಹೊನ್ನೆಮಡು, ಹುನಗನಹಳ್ಳಿ, ನಂಜೇನಹಳ್ಳಿ, ಮುತ್ತೆಗೆರೆ, ತಿಪ್ಪಾಪುರ, ಬುಂಡಾರೆಕೊಪ್ಪಲು, ಎಂ.ಹಟ್ನ, ಸಂಗಾಪುರ ಜವನಹಳ್ಳಿ, ಮಲ್ಲೇನಹಳ್ಳಿ, ಛತ್ರನಹಳ್ಳಿ, ಬಿಲ್ಲೇನಹಳ್ಳಿ, ಬಂಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಜಿಲ್ಲಾ ಚಾವಿಸನಿನಿ ಕಾ ಮತ್ತು ಪಾ ವಿಭಾಗ ಕಾರ್ಯನಿರ್ವಾಹಕ ಅಭಿಯಂತರರು (ವಿ) ಎಸ್. ಅನಿತಾಬಾಯಿ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೆಮ್ಮರಗಾಲ ಪ್ರೌಢಶಾಲೆಯಲ್ಲಿ ಗುರುವಂದನಾ – ಸ್ನೇಹ ಸಮ್ಮಿಲನ

## ನೆನಪಿನ ಬುತ್ತಿ ಬಿಚ್ಚಿ ಭಾವುಕರಾದ ಹಳೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು

**ನಂಜನಗೂಡು:** ತಾಲ್ಲೂಕಿನ ಹೆಮ್ಮರಗಾಲ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ 'ಗುರುವಂದನಾ ಮತ್ತು ಸ್ನೇಹ ಸಮ್ಮಿಲನ' ಕಾರ್ಯಕ್ರಮವು ಅತ್ಯಂತ ಅದ್ದೂರಿಯಾಗಿ ಹಾಗೂ ಅರ್ಥಪೂರ್ಣವಾಗಿ ನೆರವೇರಿತು.



20 ವರ್ಷಗಳ(7300) ದಿನಗಳ ನಂತರ ಒಂದೆಡೆ ಸೇರಿದ ಹಳೆಯ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳ ಸವಿ ನೆನಪುಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಅಂದಿನ ಕಾಲದಲ್ಲಿ ವಿದ್ಯೆ ಕಲಿಸಿದ, ಜೈ ಕುಮಾರಸ್ವಾಮಿ(ಜೆಕೆಎಸ್) ಸದಾಶಿವ(ಜಿಸಿಎಸ್) ಬಸವಣ್ಣ (ಬಿಎಂಬಿ) ಕುಮಾರಸ್ವಾಮಿ (ಕೆಎಸ್) ವೆಂಕಟೇಶ್(ವಿಕೆ) ಭೈರವೇಶ್ವರ, ಅಟೆಂಡರ್ ಮಹದೇವು ಸೇರಿದಂತೆ ಸುಮಾರು 8 ಮಂದಿ ಹಿರಿಯ ಶಿಕ್ಷಕರನ್ನು ಆತ್ಮೀಯವಾಗಿ ಸನ್ಮಾನಿಸಿ, ಗುರುವಂದನೆ ಸಲ್ಲಿಸಲಾಯಿತು. ತಮ್ಮ ಶಿಷ್ಯಂದಿರು ಇಂದು ಸಮಾಜದ ವಿವಿಧ ಸ್ತರಗಳಲ್ಲಿ ಗುರುತಿಸಿಕೊಂಡಿರುವುದನ್ನು ಕಂಡು ಶಿಕ್ಷಕರು ಭಾವುಕರಾದರು.

ಈ ಸಂದರ್ಭದಲ್ಲಿ 120ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮಕ್ಕೆ ಕಳೆ ನೀಡಿದರು.ಕಾರ್ಯಕ್ರಮದ ಉದ್ದಕ್ಕೂ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವಿನ ಪ್ರೀತಿ, ಗೌರವದ ಮಧುರ ಬಾಂಧವ್ಯ ಮೇಳೈಸಿತ್ತು. ಶಿಕ್ಷಕರು ವಿದ್ಯಾರ್ಥಿಗಳನ್ನು ಹರಸುತ್ತಾ ಆಡಿದ ಮಾತುಗಳು ಎಲ್ಲರ ಕಣ್ಣಾಲಿಗಳು ಒದ್ದೆಯಾಗುವಂತೆ ಮಾಡಿದವು.

ಇಡೀ ವಾತಾವರಣವು ಭಾವೋದ್ವೇಗ ಹಾಗೂ ಸಂತಸದಿಂದ ಕೂಡಿತ್ತು.

ಸನ್ಮಾನ ಸ್ವೀಕರಿಸಿದ ಹಿರಿಯ ಶಿಕ್ಷಕರು ಮಾತನಾಡಿ, "ವಿದ್ಯಾರ್ಥಿಗಳು ಇಷ್ಟು ವರ್ಷಗಳ ನಂತರವೂ ನಮ್ಮನ್ನು ನೆನಪಿಟ್ಟುಕೊಂಡು ಗೌರವಿಸುತ್ತಿರುವುದು ಜೀವನದ ಅತ್ಯಂತ ಹೆಮ್ಮೆಯ ಕ್ಷಣ," ಎಂದು ಹರ್ಷ ವ್ಯಕ್ತಪಡಿಸಿದರು. ಹಳೆಯ ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಗುರುಗಳ ಪಾದಕ್ಕೆ ನಮಸ್ಕರಿಸಿ ಆಶೀರ್ವಾದ ಪಡೆದರು.ಒಟ್ಟಾರೆಯಾಗಿ ಈ ಸ್ನೇಹ ಸಮ್ಮಿಲನವು ಹಳೆಯ ನೆನಪುಗಳನ್ನು ಮೆಲುಕು ಹಾಕುವುದರ ಜೊತೆಗೆ, ಗುರು–ಶಿಷ್ಯರ ಪರಂಪರೆಯನ್ನು ಎತ್ತಿ ಹಿಡಿಯುವಲ್ಲಿ ಯಶಸ್ವಿಯಾಯಿತು.

ಕಾರ್ಯಕ್ರಮ ಆಯೋಜಿಸಿದ ಪತ್ರಕರ್ತ ಮಹೇಶ್ ಕೆಬ್ಬೆ,ವಿಕಾಸ್, ಶೃತಿ,ಸೋಮಣ್ಣ,ರವಿಶಂಕರ್, ಸೇರಿದಂತೆ ಕೆಲವರಿಗೆ ಸಹಪಾಠಿಗಳೇ ಸನ್ಮಾನಿಸಿದ್ದು ಅರ್ಥಪೂರ್ಣವಾಗಿತ್ತು.

## ಚಿಣ್ಣರ ಬೇಸಿಗೆ ಶಿಬಿರಕ್ಕೆ ಲಕ್ಷ್ಮಿ ಚಾಲನೆ



**ಮಂಡ್ಯ:** ನಗರದ ಸ್ವಾಮಿ ವಿವೇಕಾನಂದ ರಂಗಮಂದಿರದಲ್ಲಿ ರೆಬಲ್ ಡ್ಯಾನ್ಸ್ ಗ್ರೂಪ್ ವತಿಯಿಂದ ಚಿಣ್ಣರ ಬೇಸಿಗೆ ಶಿಬಿರದ ಸಮರೂಪ ಸಮಾರಂಭವನ್ನು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಲಕ್ಷ್ಮಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಬೇಸಿಗೆ ಶಿಬಿರಗಳಿಂದ ಮಕ್ಕಳನ್ನು ಟಿವಿ ಮೊಬೈಲ್ ಗಳಿಂದ ದೂರ ಇಡಬಹುದಾಗಿದೆ ಬೇಸಿಗೆ ಶಿಬಿರದಲ್ಲಿ ನೃತ್ಯ ಸಂಗೀತ ಯೋಗ ಸಾಹಸ ಕ್ರೀಡೆಗಳನ್ನು ಈ ಶಿಬಿರಗಳಲ್ಲಿ ಕಲಿಸುವುದರಿಂದ ಮಕ್ಕಳು ಸದೃಢವಾಗುವುದಲ್ಲದೆ ಎಲ್ಲರೊಡನೆ ಬೆರೆಯುವಂತಹ ಅವಕಾಶಗಳನ್ನು ಕಲ್ಪಿಸಿದಂತಾಗುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಶಿಬಿರಗಳಿಂದ ಮಕ್ಕಳ ಪ್ರತಿಭೆಗಳನ್ನು ಗುರುತಿಸುವುದಲ್ಲದೆ ಉತ್ತಮ ವೇದಿಕೆ ಸಿಕ್ಕಂತಾಗುತ್ತದೆ ಪೋಷಕರು ಮಕ್ಕಳ ಆಸಕ್ತಿಗೆ ಕುಂದಿಸಧೆ ಮಕ್ಕಳು ಯಾವ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸುತ್ತಾರೆ ಆ ಕ್ಷೇತ್ರದಲ್ಲಿ ಬೆಳೆಯಲು ಪೋಷಕರು ಪೋಷಿಸಬೇಕೆಂದು ಸಲಹೆ ನೀಡಿದರು.

ನಂತರ ವಿದ್ಯಾರ್ಥಿಗಳು ಪ್ರದರ್ಶಿಸಿದ ವಿವಿಧ ನೃತ್ಯ ಹಾಗೂ ಯೋಗ ಸಾಹಸಕ್ಕೆ ಪ್ರೇಕ್ಷಕರು ಮನ ಸೋತರು. ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಪ್ರಮಾಣ ಪತ್ರ ವಿತರಿಸಲಾಯಿತು.

# ಪಾಂಡವಪುರ ತಾಲ್ಲೂಕನ್ನು ಸಾವಯವ ತಾಲ್ಲೂಕು ಎಂದು ಘೋಷಣೆ

**ಮಂಡ್ಯ:** ರಾಜ್ಯ ಸರ್ಕಾರವು 2026–27ನೇ ಸಾಲಿನ ಬಜೆಟ್ನಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕನ್ನು ಸಾವಯವ ತಾಲ್ಲೂಕು ಎಂದು ಘೋಷಿಸಿರುವುದು ಕೃಷಿ ಕ್ಷೇತ್ರದ ದೀರ್ಘಕಾಲೀನ ಅಭಿವೃದ್ಧಿಗೆ ಮಹತ್ವದ ಹೆಜ್ಜೆಯಾಗಿದೆ.



ಈ ಘೋಷಣೆಯಿಂದ ರೈತರ ಆದಾಯ ವೃದ್ಧಿ, ಮಣ್ಣಿನ ಆರೋಗ್ಯ ಸಂರಕ್ಷಣೆ, ಪರಿಸರ ಸಮತೋಲನ ಹಾಗೂ ವಿಷರಹಿತ ಆಹಾರ ಉತ್ಪಾದನೆಗೆ ಉತ್ತೇಜನ ದೊರೆಯಲಿದೆ.

ಈ ನಿಟ್ಟಿನಲ್ಲಿ ಪಾಂಡವಪುರ ತಾಲ್ಲೂಕನ್ನು ಮಾದರಿ ಸಾವಯವ ಕೃಷಿ ಪ್ರದೇಶವನ್ನಾಗಿ ರೂಪಿಸುವ ಮೂಲಕ ರಾಜ್ಯದ ಇತರೆ ಭಾಗಗಳಿಗೂ ಪ್ರೇರಣೆಯಾಗುವಂತೆ ಸಮಗ್ರ ಯೋಜನೆ ಜಾರಿಗೊಳಸುವುದು ಸರ್ಕಾರದ ಆಶಯವಾಗಿದೆ.

ಈ ಯೋಜನೆಗೆ ಜಾರಿಗೆ ಪೂರಕವಾಗಿ ಜಿಲ್ಲಾಧಿಕಾರಿಗಳು, ಸೋಮವಾರ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರ ಜೊತೆ ಪಾಂಡವಪುರದಲ್ಲಿ ರೈತ ಮುಖಂಡರು ಹಾಗೂ ರೈತರೊಂದಿಗೆ ಸಭೆಯನ್ನು ನಡೆಸಲಾಯಿತು.

ಸಭೆಯಲ್ಲಿ ಈ ಯೋಜನೆ ಪರಿಣಾಮಕಾರಿಯಾಗಿ ಜಾರಿಯಾಗಲು ಕೆಳಕಂಡ ಪೂರಕ ಕ್ರಮಗಳನ್ನು ತಕ್ಷಣ ಕೈಗೊಳ್ಳುವುದು ಅಗತ್ಯವಾಗಿರುವ ಸಂಬಂಧ ಕೆಳಕಂಡ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. ಇಡೀ ದೇಶದಲ್ಲಿ ಕೃಷಿಯಲ್ಲಿ ರಸಗೊಬ್ಬರವನ್ನು ಅತೀ ಹೆಚ್ಚಾಗಿ ಬಳಸುತ್ತಿರುವುದರಿಂದ, ಆಹಾರದ ಗುಣಮಟ್ಟ ಕಳಪೆಯಾಗುವುದರ ಜೊತೆಗೆ ಮಣ್ಣಿನ ಉತ್ಪಾದನಾ ಸಾಮರ್ಥ್ಯವ್ಯೂ ಕಡಿಮೆಯಾಗುತ್ತಿರುತ್ತದೆ.
1. ರಾಸಾಯನಿಕಗಳ ಹೆಚ್ಚಿನ ಬಳಕೆಯಿಂದಾಗಿ ಆಹಾರದ ಗುಣಮಟ್ಟದ ಸಾರ ಪುಷ್ಟೀಕರವಾಗಿರುವುದಿಲ್ಲ.
2. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ವತಿಯಿಂದ ಕರ್ನಾಟಕ ರಾಜ್ಯದಲ್ಲಿಯೇ 02 ನೇ ತಾಲ್ಲೂಕನ್ನಾಗಿ ಜಿಲ್ಲೆಯ ಪಾಂಡವಪುರ ತಾಲ್ಲೂಕನ್ನು ಸಾವಯವ ತಾಲ್ಲೂಕು ಎಂದು ಘೋಷಣೆ ಮಾಡಲಾಗಿದ್ದು ಜಿಲ್ಲೆಯಲ್ಲಿನ ಕೃಷಿ ಅಭಿವೃದ್ಧಿಗೆ ಮೆಟ್ಟಿಲಾಗಿದೆ. ಪಾಂಡವಪುರ ತಾಲ್ಲೂಕನ್ನಾಗಿ ಪರಿವರ್ತನೆ ಮಾಡಬೇಕಾಗಿರುವುದು ಮುಂದಿರುವ ಜವಬ್ದಾರಿಯಾಗಿರುತ್ತದೆ.
3. ಯೋಜನೆಗೆ ಪೂರಕವಾಗಿ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರು ಜಿಲ್ಲಾಡಳಿತದೊಂದಿಗೆ ಚರ್ಚಿಸಿ, ಏಕ ಕಾಲದಲ್ಲಿ 5,000 ರೈತರೊಂದಿಗೆ ಗ್ರೂಪ್ ಕಾಲ್ ಮಾಡಿ ಹಾಗೂ ಗ್ರಾಮ ಸಹಾಯಕರ ಮೂಲಕ ರೈತರ ಅಭಿಪ್ರಾಯವನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿರುತ್ತಾರೆ.
4. ಪಾಂಡವಪುರ ತಾಲ್ಲೂಕಿನಲ್ಲಿ ಮೇಲುಕೋಟೆ ಹೋಬಳಿಯನ್ನು ಪ್ರಾಯೋಗಿಕ ಹೋಬಳಿಯನ್ನಾಗಿ ಆಯ್ಕೆ ಮಾಡಲು ನಿರ್ಧರಿಸಲಾಗಿರುತ್ತದೆ.
5. ನಮ್ಮ ರಾಜ್ಯದ ಬಹುಪಾಲು ಬಜೆಟ್ ಅನ್ನು ರಸಗೊಬ್ಬರಗಳಿಗೇ ಮೀಸಲಿರಿಲಾಗುತ್ತಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಯುದ್ಧದಂತಹ ಸಂಧಿಗ್ಧ ಮುಗ್ಗಟ್ಟು ಪರಿಸ್ಥಿತಿಯಲ್ಲಿ ಸಾವಯವ ತಾಲ್ಲೂಕು ಎಂಬ ಯೋಜನೆಯನ್ನು ಜಾರಿಗೆ ತಂದಿರುವುದು ಆರ್ಥಿಕವಾಗಿ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆಗೆ ಸಹಕಾರಿಯಾಗಿರುತ್ತದೆ.
6. ಆದ್ದರಿಂದ ಯೋಜನೆಯ ಸಮರ್ಪಕ ಅನುಷ್ಠಾನದ ನಿಟ್ಟಿನಲ್ಲಿ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಜವಬ್ದಾರಿಯುತವಾಗಿ ಕರ್ತವ್ಯ ನಿರ್ವಹಣೆ ಮಾಡಬೇಕು ಹಾಗೂ ಪೂರಕವಾಗಿ ರೈತರು ಯೋಜನೆಯ ಅನುಷ್ಠಾನಕ್ಕಾಗಿ ಸಹಕರಿಸಬೇಕು ಎಂದು ಹಾಜರಿದ್ದ ಅಧಿಕಾರಿಗಳಿಗೆ ಹಾಗೂ ರೈತ ಸಂಘದ ಮುಖಂಡರುಗಳಿಗೆ ಸೂಚಿಸಲಾಯಿತು.

7, ತಾಲ್ಲೂಕಿನ ರಂಗೇನಹಳ್ಳಿ, ಎಂ.ಶೆಟ್ಟಹಳ್ಳಿ ಹಾಗೂ ಇನ್ನಿತರೆ ಗ್ರಾಮಗಳಲ್ಲಿನ ಅರಣ್ಯ ಇಲಾಖೆಯ ಜಮೀನನ್ನು ಹೊರತುಪಡಿಸಿ, ಉಳಿಕೆ ಸರ್ಕಾರಿ ಜಮೀನನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಕಾಯ್ದಿರಿಸುವಲ್ಲಿ ತುರ್ತಾಗಿ ಕ್ರಮಕೈಗೊಳ್ಳುವಂತೆ ಹಾಜರಿದ್ದ ಕಂದಾಯ ಇಲಾಖಾ ಅಧಿಕಾರಿಗಳಿಗೆ ಸೂಚಿಸಲಾಯಿತು.

8. ಜೊತೆಗೆ ಜಿಲ್ಲೆಯಲ್ಲಿನ ಭತ್ತ ಮತ್ತು ರಾಗಿ ಕಟಾವು ಯಂತ್ರಕ್ಕೆ ಕೆಳಕಂಡಂತೆ ಬಾಡಿಗೆ ದರವನ್ನು ನಿರ್ಧರಿಸಲು ಸೂಚಿಸಲಾಯಿತು.

**ಯಂತ್ರದ ವಿವರ**

ಪ್ರತಿ ಗಂಟೆಗೆ ನಿಗಧಿಪಡಿಸಿದ ದರ (ರೂ ಗಳಲ್ಲಿ)

1 ಚೈನ್/ಟ್ರಾಕ್ ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ರೂ.2500/–

2 ಟೈರ್ (ಗ್ರಿಪ್) ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ರೂ.2000/–

3 ಟೈರ್ (ಸಾಮಾನ್ಯ) ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ರೂ.1800/–

4 ರಾಗಿ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ರೂ.2900/–

ಸದರಿ ಸಭೆಯಲ್ಲಿ ಉಪವಿಭಾಗಾಧಿಕಾರಿ, ಪಾಂಡವಪುರ ಉಪವಿಭಾಗ, ತಹಶೀಲ್ದಾರ್, ಪಾಂಡವಪುರ ತಾಲ್ಲೂಕು, ಅಧ್ಯಕ್ಷರು, ಜಿಲ್ಲಾ ರೈತ ಸಂಘ ಹಾಗೂ ಅಧ್ಯಕ್ಷರು, ಪಾಂಡವಪುರ ತಾಲ್ಲೂಕು ರೈತ ಸಂಘ ಹಾಗೂ ಇತರೆ ಪದಾಧಿಕಾರಿಗಳು ಹಾಜರಿದ್ದರು.

ನಂತರದಲ್ಲಿ ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

# ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಿ: ಶಾಸಕ ಹೆಚ್.ಟಿ.ಮಂಜು

**ಕೆ.ಆರ್.ಪೇಟೆ:** ತಾಲೂಕಿನ ಕಿಕ್ಕೇರಿ ಹೋಬಳಿಯ ವಿವಿಧ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಅವರು ಭೂಮಿ ಪೂಜೆ ನೆರವೇರಿಸಿದರು.



ಕಿಕ್ಕೇರಿ ಹೋಬಳಿಯ ವಡಕಹಳ್ಳಿ, ಐನೋರಹಳ್ಳಿ, ದೇವರಹಳ್ಳಿ, ಕಡಹೆಮ್ಮಿಗೆ, ಯಲಾದಹಳ್ಳಿ ಗ್ರಾಮಗಳಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ ಲೋಕೋಪಯೋಗಿ ಇಲಾಖೆಯಿಂದ ಐಕನಹಳ್ಳಿ ಕೊಪ್ಪಲು ತೋಪೇಗೌಡ ವೃತ್ತದಿಂದ ಕಾಂತರಾಜಪುರ ಮಾರ್ಗದ ರಸ್ತೆ ಹಾಗೂ ಊಗಿನಹಳ್ಳಿ ಗೇಟ್ ನಿಂದ ಮಾದಾಪುರ ಮಾರ್ಗದ ಮುಖ್ಯ ರಸ್ತೆಯ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಶಾಸಕ ಹೆಚ್.ಟಿ.ಮಂಜು ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಿರ್ವಹಣೆ ಮಾಡಬೇಕು. ಅಧಿಕಾರಿಗಳು ಕಾಮಗಾರಿ ನಡೆಯುವ ವೇಳೆ ಉಪಸ್ಥಿತರಿದ್ದು ಕಾಮಗಾರಿಯ ಗುಣಮಟ್ಟ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಾನು ವಿರೋಧ ಪಕ್ಷದ ಶಾಸಕನಾಗಿದ್ದೇನೆ ಸರ್ಕಾರ ಕೊಡುವ ಅಲ್ಪ ಸ್ವಲ್ಪ ಅನುದಾನದಲ್ಲಿ ತೀರಾ ಅಗತ್ಯ ಇರುವ ಗ್ರಾಮಗಳಿಗೆ ಅನುದಾನವನ್ನು ಹಂಚಿಕೆ ಮಾಡಿ ರಸ್ತೆ ಅಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಿ ಕೆಲಸ ಮಾಡುತ್ತಿದ್ದೇನೆ. ಹಂತ ಹಂತವಾಗಿ ತಾಲೂಕಿನ ಎಲ್ಲಾ ಗ್ರಾಮಗಳ ರಸ್ತೆ ಅಭಿವೃದ್ಧಿಗೆ ನನ್ನ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಅನುದಾನವನ್ನು ನೀಡುತ್ತೇನೆ. ತಾಲೂಕಿನ ಎಲ್ಲಾ ಗ್ರಾಮಗಳನ್ನು ನಾನು ಸಮಾನವಾಗಿ ಕಾಣುತ್ತೇನೆ ಯಾವುದೇ ಕಾರಣಕ್ಕೂ ಯಾವುದೇ ಗ್ರಾಮವನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ. ಸ್ವಲ್ಪ ತಡವಾಗಬಹುದು ಎಲ್ಲಾ ಗ್ರಾಮಗಳಿಗೂ ಸರ್ಕಾರ ನೀಡುವ ಅನುದಾನವನ್ನು ಹಂಚಿಕೆ ಮಾಡಿ ತಾಲ್ಲೂಕಿನ ಜನತೆ ನನ್ನ ಮೇಲೆ ಇಟ್ಟಿರುವ ವಿಶ್ವಾಸ ಮತ್ತು ನಂಬಿಕೆಯನ್ನು ಉಳಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. 2028ಕ್ಕೆ ಜೆಡಿಎಸ್– ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರವು ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ. ಆಗ ತಾವು ಕ್ಷೇತ್ರದಿಂದ ನನ್ನನ್ನು ಪುನರ್ ಆಯ್ಕೆ ಮಾಡಿದರೆ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿಗಳಷ್ಟು ಅನುದಾನ ತಂದು ತಾಲೂಕು ಎಂದೆಂದೂ ಕಂಡರಿಯದಂತಹ ಗುರುತರವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುತ್ತೇನೆ ಎಂದು ಶಾಸಕ ಹೆಚ್.ಟಿ. ಮಂಜು ಭರವಸೆ ನೀಡಿದರು.

ತಾಲೂಕಿನಾದ್ಯಂತ ತಮ್ಮ ರಸ್ತೆಗಳನ್ನು ನಿರ್ಮಿಸಿ ತಾಲ್ಲೂಕನ್ನು ಮಾದರಿ ತಾಲ್ಲೂಕನ್ನಾಗಿಸಲು ನಿರ್ಧಾರ ಮಾಡಿದ್ದೇನೆ. ತಾಲೂಕಿನ ಪ್ರತಿ ಗ್ರಾಮಗಳಿಗೂ ಜಲಜೀವನ್ ಮಿಷನ್ ಯೋಜನೆ ಅಡಿಯಲ್ಲಿ ಶುದ್ಧ ಕುಡಿಯುವ ನೀರಿನ ಯೋಜನೆ ಜಾರಿಗೊಳಿಸಲಾಗುತ್ತಿದೆ.

ಈ ಕಾಮಗಾರಿಯಲ್ಲಿ ಜೆ.ಜೆ. ಎಂ.ಕಾಮಗಾರಿಯ ಗುತ್ತಿಗೆದಾರರು ನಿಗದಿತ ಅವಧಿಯಲ್ಲಿ ಕಾಮಗಾರಿಯನ್ನು ಗುಣಮಟ್ಟದಿಂದ ಪೂರ್ಣಗೊಳಿಸಿಕೊಡಬೇಕು ಯಾವುದೇ ಕಾರಣಕ್ಕೂ ಕಾಮಗಾರಿಯನ್ನು ಅಪೂರ್ಣಗೊಳಿಸಬಾರದು. ಒಂದು ವೇಳೆ ಅಪೂರ್ಣಗೊಳಿಸಿದ ಕಾಮಗಾರಿಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳು ಛಾರ್ಜ್ ತೆಗೆದುಕೊಳ್ಳಬಾರದು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಬಸವೇಗೌಡ, ಕಿಕ್ಕೇರಿ ಹೋಬಳಿಯ ಜೆಡಿಎಸ್ ಘಟಕದ ಅಧ್ಯಕ್ಷರಾದ ಕಾಯಿಮಂಜೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಐನೋರಹಳ್ಳಿ ಮಲ್ಲೇಶ್, ತಾಲ್ಲೂಕು ಪಂಚಾಯತ್ ಮಾಜಿ ಸದಸ್ಯ ಕೃಷ್ಣೇಗೌಡ, ಕಿಕ್ಕೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶೇಖರ್, ವಡಕಹಳ್ಳಿ ಮಂಜೇಗೌಡ, ಲಕ್ಷ್ಮೀಪುರ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಊಗಿನಹಳ್ಳಿ ಮುರುಳೀಧರ್, ಬಾಲಚಂದ್ರು ಎಲ್‌ಐಸಿ ಅಶೋಕ್, ಮುಖಂಡರಾದ ಐಕನಹಳ್ಳಿ ದೇವೇಗೌಡ, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಕಾಳಿಕಾಂಬ ಕಮಟೇಶ್ವರಿ ದೇವಾಲಯದ 21ನೇ ವಾರ್ಷಿಕೋತ್ಸವ ಸಂಭ್ರಮ



**ಕೆ.ಆರ್.ನಗರ:** ನಗರದ ಪಾರ್ಕ್ ಪ್ರದೇಶದಲ್ಲಿರುವ ಶ್ರೀ ಕಾಳಿಕಾಂಬ ಕಮಟೇಶ್ವರಿ ದೇವಾಲಯದ 21ನೇ ವರ್ಷದ ವಾರ್ಷಿಕೋತ್ಸವವನ್ನು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಭಕ್ತಿಭಾವದಿಂದ ಆಚರಿಸಲಾಯಿತು.

ಪ್ರತಿ ವರ್ಷದಂತೆ ಈ ವರ್ಷವೂ ಮುಂಜಾನೆ ಅಮ್ಮನವರಿಗೆ ವಿಶೇಷ ಅಲಂಕಾರ, ಹೋಮ–ಹವನ, ಅಭಿಷೇಕ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಭಕ್ತರು ಮತ್ತು ಸಾರ್ವಜನಿಕರು ಬೆಳಗ್ಗೆಯಿಂದಲೇ ದೇವಾಲಯಕ್ಕೆ ಆಗಮಿಸಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ತಮ್ಮ ಇಷ್ಟಾರ್ಥಗಳ ಸಿದ್ಧಿಗಾಗಿ ಪ್ರಾರ್ಥಿಸಿದರು.

ದೇವಾಲಯವನ್ನು ತಳಿರು ತೋರಣಗಳು ಹಾಗೂ ವಿದ್ಯುತ್ ದೀಪಗಳಿಂದ ಸುಂದರವಾಗಿ ಅಲಂಕರಿಸಲಾಗಿದ್ದು, ಮೂರ್ತಿಗೆ ಹೂವಿನ ಅಲಂಕಾರ ವಿಶೇಷ ಆಕರ್ಷಣೆಯಾಯಿತು. ಅರ್ಚಕರಾದ ಮಧುಸೂದನ ಅವರ ನೇತೃತ್ವದಲ್ಲಿ ಪೂಜಾ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು.

ನಂತರ ಭಕ್ತಾದಿಗಳಿಗೆ ಪ್ರಸಾದ ವಿತರಣೆ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ರೇವಣ್ಣ, ಪರಶುರಾಮ ಚಾರ್, ಗುರುರಾಜ ಚಾರ್, ರೇಣುಕಾಪ್ರಸಾದ್, ಚಂದ್ರಶೇಖರ್, ಕುಶಾಲ್, ಶಶಾಂಕ್, ದಿನೇಶ್, ಮೂರ್ತಿ, ಪುಟ್ಟಸ್ವಾಮಿ ಚಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದು, ನೂರಾರು ಭಕ್ತರು ಭಾಗವಹಿಸಿ ಉತ್ಸವವನ್ನು ಯಶಸ್ವಿಗೊಳಿಸಿದರು.

# ಭಾವ ಶುದ್ಧಿಯ ಕಾಯಕನಿಷ್ಠ ಶರಣ... ತುರುಗಾಹಿ ರಾಮಣ್ಣ



| ವೀಣಾ ಹೇಮಂತ್‌ಗೌಡ ಪಾಟೀಲ್



ಕಾಯಕ ದಾಸೋಹ ಹಾಗೂ ಆಧ್ಯಾತ್ಮದ ಆಳವಾದ ಚಿಂತನೆಗಳನ್ನು ಹೊಂದಿದ್ದ ತುರುಗಾಹಿ ರಾಮಣ್ಣನವರು 12ನೇ ಶತಮಾನದ ಶರಣರಲ್ಲಿ ಒಬ್ಬರು. ಹಸುಗಳನ್ನು ಕಾಯುವ ತುರುಗಾಹಿ ವೃತ್ತಿಯನ್ನು ಮಾಡುತ್ತಿದ್ದ ಅವರು ಲಿಂಗಪೂಜಾ ನಿಷ್ಠರು, ಶಿವ ತತ್ವ ಚಿಂತಕರಾಗಿದ್ದರು. ಭಾವ ಶುದ್ಧಿಯಿಂದ ಕಾಯಕ ಮಾಡುವುದೇ ನಿಜವಾದ ಭಕ್ತಿ ಎಂದು ಅವರು ನಂಬಿದ್ದರು.ಶರಣ ತುರುಗಾಹಿ ರಾಮಣ್ಣನವರ 46 ವಚನಗಳು ದೊರೆತಿವೆ. ಗೋಪತಿನಾಥ ವಿಶ್ವೇಶ್ವರ ಲಿಂಗ ಎಂಬುದು ಇವರ ವಚನಗಳ ಅಂಕಿತನಾಮ.

ಮಹಾ ಮನೆಯಲ್ಲಿ ಪ್ರತಿದಿನವೂ ನಡೆಯುತ್ತಿದ್ದ ದಾಸೋಹದಲ್ಲಿ ಸಾವಿರಾರು ಜನರು ಪ್ರಸಾದವನ್ನು ಸೇವಿಸುತ್ತಿದ್ದರು. ಅಲ್ಲಿ ಬೇಕಾಗುತ್ತಿದ್ದ ಹಾಲು ಮೊಸರು ಬೆಣ್ಣೆ ತುಪ್ಪಗಳನ್ನು ಪೂರೈಸಲು ಅತಿ ದೊಡ್ಡ ದನದ ಕೊಟ್ಟಿಗೆ ಕೂಡ ಮಹಾಮನೆಯಲ್ಲಿತ್ತು.

ಹಸುಗಳನ್ನು ಮೇಯಿಸುವ ಕಾಯಕದಲ್ಲಿ ತೃಪ್ತಿಯನ್ನು ಕಂಡುಕೊಂಡಿದ್ದ ಅವರು ತಮ್ಮ ಕಾಯಕವನ್ನು ನಿಷ್ಠೆಯಿಂದ ಮಾಡುತ್ತಿದ್ದರು. ಶಿವ ತತ್ವಗಳನ್ನು ಆಳವಾಗಿ ಚಿಂತಿಸುತ್ತಿದ್ದ ಶಿವಶರಣ ತುರುಗಾಹಿ ರಾಮಣ್ಣನವರು ಉಳಿದೆಲ್ಲಾ ಶಿವಶರಣರ ಮನೆಯ ಹಸುಗಳ ಜೊತೆಗೆ ಮಹಾಮನೆಯ ಎಲ್ಲಾ ಹಸುಗಳನ್ನು ತಾವೇ ಊರ ಹೊರಗಿನ ಗೋಮಾಳಕ್ಕೆ ಕರೆದೊಯ್ದು ಮೇಯಿಸಿ ತರುವ ಜವಾಬ್ದಾರಿಯನ್ನು ಹೊತ್ತಿದ್ದರು. ಎಲ್ಲ ಶಿವಶರಣರ ಮನೆಗಳಿಗೆ ಹೋಗಿ ಕಟ್ಟಿದ ಕರುವನ್ನು ಕೂಡಿದ ಹಸುವನ್ನು ಬಿಚ್ಚಿ ಕಳುಹಿಸಲು ಕೂಗಿ ಕರೆಯುತ್ತಿದ್ದ ರಾಮಣ್ಣನವರ ಪ್ರೀತಿಯ ದನಿಗೆ ಹಸುಗಳು ಇನ್ನಿಲ್ಲದ ಹಿಗ್ಗಿನಿಂದ ಕೊರಳ ಹಗ್ಗ ಬಿಚ್ಚಿದ ಕೂಡಲೇ ಓಡೋಡಿ ಬರುತ್ತಿದ್ದವು. ಅವುಗಳನ್ನು ಮುದ್ದಾಡಿ, ಮೈ ಸವರಿ, ಬೆನ್ನು ಚಪ್ಪರಿಸಿ ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದ್ದ ರಾಮಣ್ಣ ಆ ಎಲ್ಲ ದನ ಕರುಗಳೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದರು. ಸಾಯಂಕಾಲ ಎಲ್ಲ ದನಗಳನ್ನು ಅವರವರ ಮನೆಗೆ ತಲುಪಿಸಿ ನಂತರ ಮಹಾಮನೆಗೆ ಬಂದು ಅಲ್ಲಿಯ ಹಸುಗಳನ್ನು ಕಟ್ಟಿ ಅವುಗಳಿಗೆ ಮೇವು, ನೀರು ನೀಡಿ ಆರೈಕೆ ಮಾಡುತ್ತಿದ್ದರು. ಹೊಟ್ಟು ಹಿಂಡಿಗಳನ್ನು ಹಾಕಿ ಪಾಲಿಸಿ ಪೋಷಿಸುತ್ತಿದ್ದರು.

ಸದಾ ಆಧ್ಯಾತ್ಮ ಚಿಂತನೆಯಲ್ಲಿ ತೊಡಗಿಕೊಂಡಿರುತ್ತಿದ್ದ ತುರುಗಾಹಿ ರಾಮಣ್ಣನವರ ನೇತೃತ್ವದಲ್ಲಿ ಅದೊಂದು ದಿನ ಹಸುಗಳನ್ನು ಹೊಡೆದುಕೊಂಡು ಊರ ಹೊರಗಿನ ಹುಲ್ಲುಗಾವಲಿನಲ್ಲಿ ಅವುಗಳನ್ನು ಮೇಯಲು ಬಿಟ್ಟು ಜೊತೆಗೆ ಇದ್ದ ಉಳಿದ ದನಗಾಹಿಗಳೊಂದಿಗೆ ಆಧ್ಯಾತ್ಮದ ಕುರಿತು ಚರ್ಚೆಯಲ್ಲಿ ಮುಳುಗಿದರು. ಆಗ ಬಸವಣ್ಣನವರನ್ನು ದ್ವೇಷಿಸುತ್ತಿದ್ದ ಕೆಲವರು ಜಂಗಮ ವೇಷವನ್ನು ಧರಿಸಿ ಇವರಿಂದ ತುಸುವೇ ದೂರದಲ್ಲಿ ಆರಾಮವಾಗಿ ಹುಲ್ಲನ್ನು ಮೇಯುತ್ತಿದ್ದ ಮಹಾಮನೆಯ ದನಗಳನ್ನು ಕದ್ದು ಕೊಂಡೊಯ್ದರು. ದೂರದಲ್ಲಿ ವಚನ ತತ್ವ ಚಿಂತನೆ ಮಾಡುತ್ತಿದ್ದ ರಾಮಣ್ಣ ಹಾಗೂ ಸಂಗಡಿಗರಿಗೆ ಕಳ್ಳರ ಹುನ್ನಾರದ ಅರಿವೇ ಆಗಲಿಲ್ಲ.

ಉಪೇಕ್ಷಿತ ವಚನಕಾರರು

ಸಾಯಂಕಾಲದ ಹೊತ್ತಿಗೆ ಎಲ್ಲ ದನಗಳನ್ನು ಮರಳಿ ಊರಿಗೆ ಕೊಂಡೊಯ್ಯುವಾಗ ಅವರಿಗೆ ಆದ ಪ್ರಮಾದದ ಅರಿವಾಯಿತು. ಕೂಡಲೇ ಓಡೋಡುತ್ತಾ ಬಂದು ಬಸವಣ್ಣನವರ ಬಳಿ ನಡೆದ ವಿಷಯವನ್ನು ಅರುಹಿದರು.

ಅವರ ಮಾತುಗಳನ್ನು ಕೇಳಿದ ಬಸವಣ್ಣನವರು ಜಂಗಮ ವೇಷ ಧರಿಸಿದವರು ಶರಣರಲ್ಲದೆ ಮತ್ತಿನ್ನಾರು ಆಗಲು ಸಾಧ್ಯ.... ಅವರು ಕಳ್ಳರಲ್ಲ ಸಾಕ್ಷಾತ್ ಶಿವಶರಣರು ಎಂದು ಹೇಳಿ ರಾಮಣ್ಣ ಹಾಗೂ ಅವರ ಜೊತೆಗಾರರನ್ನು ಸಮಾಧಾನಿಸಿದರು.

ಬೆಳಗಿನಿಂದ ಮೇಯಲು ಹೋದ ದನಗಳು ಮರಳಿ ಬಾರದೆ ಇದ್ದ ಕಾರಣ ತಾಯನ್ನಗಲಿದ ಕರುಗಳು ತಾಯಿಯ ಹಂಬಲದಿಂದ ಅಂಬಾ ಎಂದು ಮೊರೆ ಇಟ್ಟವು. ಕರುಗಳ ಗೋಳಿಡುವಿಕೆಯನ್ನು ಕೇಳಲಾಗದೆ ತುರುಗಾಹಿ ರಾಮಣ್ಣನವರನ್ನು ಕರೆದು ಹಸುಗಳನ್ನು ಕದ್ದು ಜಂಗಮರೂಪಿ ಕಳ್ಳರ ಮನೆಗೆ ಹಸು ಮತ್ತು ಕರುಗಳನ್ನು ತಲುಪಿಸಲು ಕೇಳಿಕೊಂಡರು. ಅಂತೆಯೇ ಕರುಗಳನ್ನು ಅವುಗಳ ತಾಯಿ ಹಸುಗಳ ಬಳಿ ಕರೆದೊಯ್ದು ರಾಮಣ್ಣ ತಲುಪಿಸಿದರು.

ದುರ್ಗಾಹಿ ರಾಮಣ್ಣನವರು ತಮ್ಮ ಕಾಯಕಕ್ಕೆ ನಿಷ್ಠರಾಗಿದ್ದರು.

ಇವನ ವಚನಗಳು ಸಂಖ್ಯೆಯಲ್ಲಿ ಅಲ್ಪವಾದರೂ ಸತ್ತ್ವಯುತಾಗಿವೆ. ಇವುಗಳಲ್ಲಿ ಮೊದಲ ಹದಿನೇಳು ಇವನ ಕಾಯಕಕ್ಕೆ ಸಂಬಂಧಿಸಿವೆ. ಇವುಗಳಲ್ಲಿ ಈತ ದನಕಾಯ್ದು ಪಡೆದ ದಿವ್ಯಾನುಭವ ಸಾಂಕೇತಿಕವಾಗಿ ವ್ಯಕ್ತವಾಗಿದೆ. ಅತ್ತಿತ್ತ ಚಲಿಸುವ ನೂರಾರು ಕುಲಗಳ, ನೂರಾರು ಹಸುಗಳನ್ನು ಒಂದೇ ಒಂದು ಕೋಲು ನಿಲ್ಲಿಸುವಂತೆ ನಾವು ಏಕಚಿತ್ತವನ್ನು ಗಳಿಸಿಕೊಂಡು ಲಿಂಗವನ್ನರಿಯಬೇಕು ಎಂಬುದಾಗಿ ಸಾಂಕೇತಿಕವಾಗಿ ಈತ ಹೇಳಿದ್ದಾನೆ. ಉಳಿದ ವಚನಗಳಲ್ಲಿ ನಿಷ್ಠೆ, ತ್ರಿವಿದಭಕ್ತಿ, ಷಟ್‌ಸ್ಥಲ, ಕ್ರಿಯಾಶುದ್ಧಿ, ಭಾವಶುದ್ಧಿ, ಚಿತ್ತಶುದ್ಧಿಗಳು ಭೇದಾಭೇದ ಭಾವ-ಮುಂತಾದ ತತ್ತ್ವದ ವಿಷಯಗಳು ಪ್ರತಿಪಾದಿತವಾಗಿವೆ.

**ಅಯ್ಯಾ ಏನನಹುದೆಂಬೆ**
**ಏನನಲ್ಲಾ ಎಂಬೆ**
**ಕಾಯವುಳ್ಳನ್ನಕ್ಕ ಕರ್ಮ ಬಿಡದು**
**ಜೀವವುಳ್ಳನ್ನಕ್ಕ ಕಾರ್ಪಣ್ಯ ಕೆಡದು**
**ಆರ ಕೇಳಿ ಆರಿಗೆ ಹೇಳಿಹೆನೆಂದಡೂ**
**ಭಾವದ ಭ್ರಮೆ ಬಿಡದು**
**ಮಹಾಸಮುದ್ರವನೀಜುವವನಂತೆ ಕರ ಕಾಲು ಆಡುವನ್ನಕ್ಕ**
**ಜೀವಭ್ರಮೆ ನಿಂದಲ್ಲಿ ನಿಂದಿತ್ತು**
**ಭಾವಭ್ರಮೆ ಒಂದನರಿತು ಒಂದನರಿದೆಹೆನೆಂಬನ್ನಕ್ಕ**
**ಬಂದಿತ್ತು ದಿನ ಅಂಗವ ಹರಿವುದಕ್ಕೆ**
**ಈ ಸಂದೇಹದ ಸಂದಿಯಲ್ಲಿ ಕೆಡಹದೆ**
**ನಿಜದಂಗವ ತೋರು ಗೋಪತಿನಾಥ ವಿಶ್ವೇಶ್ವರ ಲಿಂಗ.**



ಯಾವುದು ಸರಿ-ಯಾವುದು ತಪ್ಪು; ಯಾವುದು ದಿಟ-ಯಾವುದು ಸಟೆ; ಯಾವುದು ನೀತಿ-ಯಾವುದು ಅನೀತಿ ಎಂಬುದನ್ನು ಗೆರೆ ಹೊಡೆದಂತೆ ವಿಂಗಡಿಸಿ ನೋಡಿ ತಿಳಿಯಲಾಗದೆ ಜೀವನದ ಉದ್ದಕ್ಕೂ ವ್ಯಕ್ತಿಯು ಕಂಗಾಲಾಗಿ ತೊಳಲಾಡುತ್ತಿರುವುದನ್ನು ಈ ವಚನದಲ್ಲಿ ಹೇಳಲಾಗಿದೆ ಎಂಬುದು ಈ ವಚನದ ತಾತ್ಪರ್ಯ.

ಇಂತಹ 40ಕ್ಕೂ ಹೆಚ್ಚು ವಚನಗಳನ್ನು ಬರೆದ ಶರಣ ತುರುಗಾಹಿ ರಾಮಣ್ಣನವರಿಗೆ ಶರಣು ಶರಣಾರ್ಥಿ

# ಮಂಡ್ಯ: ತರಬೇತಿ ಕೇಂದ್ರದಲ್ಲಿ ಕೋರ್ಸ್‌ಗಳಿಗೆ ಪ್ರವೇಶ ಆರಂಭ

**ಮಂಡ್ಯ:** ನಗರದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಎಫ್‌ಟಿಟಿಐ)ಯ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ಆರಂಭಗೊಂಡಿದೆ ಎಂದು ಕೇಂದ್ರದ ಪ್ರಾಂಶುಪಾಲರಾದ ಡಾ. ಕೆ. ಮದನ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್ ಕೋರ್ಸ್‌ನಿಂದ ಆರಂಭವಾದ ಈ ತರಬೇತಿ ಕೇಂದ್ರದಲ್ಲಿ ಈಗ ಡಿಪ್ಲೊಮಾ ಇನ್ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಹಾಗೂ ಡಿಪ್ಲೊಮಾ ಇನ್ ಆಟೊಮೇಶನ್ ಅಂಡ್ ರೋಬೋಟಿಕ್ಸ್ ಕೋರ್ಸ್‌ಗಳನ್ನೂ ಆರಂಭಿಸಲಾಗಿದೆ ಎಂದು ಹೇಳಿದರು.

10ನೇ ತರಗತಿ ಉತ್ತೀರ್ಣರಾದವರಿಗೆ 3 ವರ್ಷಗಳ ತರಬೇತಿ ಹಾಗೂ 1 ವರ್ಷದ ಉದ್ಯೋಗ ತರಬೇತಿ ನೀಡಲಾಗುತ್ತದೆ. ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾದವರು ಹಾಗೂ ಐಟಿಐ ಪೂರೈಸಿದವರು ಲ್ಯಾಟರಲ್ ಎಂಟ್ರಿ ಮೂಲಕ ನೇರವಾಗಿ ದ್ವಿತೀಯ ವರ್ಷಕ್ಕೆ ಪ್ರವೇಶ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಪ್ರವೇಶವನ್ನು 70:30 ಅನುಪಾತದಲ್ಲಿ ಮಾಡಲಾಗುತ್ತಿದ್ದು, ಅದರಲ್ಲೂ ಶೇ.30 ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿರುತ್ತದೆ. ಕಾಲೇಜು ಬಸ್ ನಿಲ್ದಾಣ ಮತ್ತು ರೈಲು ನಿಲ್ದಾಣಗಳಿಗೆ ಹತ್ತಿರವಿರುವುದರಿಂದ ಸಂಚಾರಕ್ಕೆ ಯಾವುದೇ ತೊಂದರೆ ಇರುವುದಿಲ್ಲ.

ಕಾಲೇಜು ಸಮೀಪದಲ್ಲಿ ವಿದ್ಯಾರ್ಥಿನಿಲಯ ಸೌಲಭ್ಯವೂ ಲಭ್ಯವಿದ್ದು, ದೂರದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಹೆಚ್ಚಿನ ಮಾಹಿತಿಗಾಗಿ 9964679968 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಈ ವೇಳೆ ಪ್ಲೇಸ್‌ಮೆಂಟ್ ಅಧಿಕಾರಿ ವಿ.ಕೆ. ನರೇಂದ್ರ ಬಾಬು, ಉಪನ್ಯಾಸಕರಾದ ಜೆ.ಎಸ್. ಸಿದ್ದಾರ್ಥ ಮತ್ತು ಶರತ್ ರಾಜ್ ಉಪಸ್ಥಿತರಿದ್ದರು.



# "₹-ರೂವಾರಿ: ಯುವ ಭಾರತದ ಸೃಜನಶೀಲ ಶಕ್ತಿ"



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸಾಧನೆ ಎಂಬುದು ಕೇವಲ ಅದೃಷ್ಟವಲ್ಲ, ಅದು ಶ್ರದ್ಧೆ ಮತ್ತು ಸೃಜನಶೀಲತೆಯ ಸಮಾಗಮ. ಇಂದು ನಾವು ಹೆಮ್ಮೆಯಿಂದ ಬಳಸುವ ರೂಪಾಯಿ ಚಿಹ್ನೆಯ ( ) ಹಿಂದೆ ಡಿ.ಉದಯ ಕುಮಾರ್ ಎಂಬ ಯುವಕನ ಅಸಾಮಾನ್ಯ ಪರಿಶ್ರಮವಿದೆ. ಐಐಟಿ ಬಾಂಬೆಯಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಇಡೀ ರಾಷ್ಟ್ರದ ಆರ್ಥಿಕ ಅಸ್ಮಿತೆಯನ್ನು ಬದಲಿಸಿದ ಇವರ ಸಾಧನೆ, ಇಂದಿನ ಯುವ ಪೀಳಿಗೆಗೆ ದಾರಿದೀಪವಾಗಿದೆ.

ಉದಯ ಕುಮಾರ್ ಒಬ್ಬ ಸಾಮಾನ್ಯ ವಿದ್ಯಾರ್ಥಿಯಾಗಿ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಜಯಗಳಿಸಿದ್ದು ನಮಗೆ ನೀಡುವ ದೊಡ್ಡ ಪಾಠವೆಂದರೆ ಅವಕಾಶಗಳು ಎಲ್ಲರಿಗೂ ಸಮಾನವಾಗಿರುತ್ತವೆ,ಆದರೆ ಅವುಗಳನ್ನು ಯಾರು ಸದುಪಯೋಗಪಡಿಸಿಕೊಳ್ಳುತ್ತಾರೋ ಅವರು ಇತಿಹಾಸ ನಿರ್ಮಿಸುತ್ತಾರೆ.ನಿಮ್ಮಲ್ಲಿರುವ ವಿಶಿಷ್ಟ ಕೌಶಲವೇ ನಿಮ್ಮನ್ನು ಜಗತ್ತಿನ ಮುಂದೆ ಗುರುತಿಸುವಂತೆ ಮಾಡುತ್ತದೆ.

ಇಂದಿನ ಯುವಕರು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗುತ್ತಿರುವಾಗ,ಉದಯ ಕುಮಾರ್ ಅವರು ಭಾರತದ ದೇವನಾಗರಿ ಲಿಪಿಯನ್ನು ರೋಮನ್ ಲಿಪಿಯೊಂದಿಗೆ ಸಂಯೋಜಿಸಿ



ಜಾಗತಿಕ ವಿನ್ಯಾಸ ಸೃಷ್ಟಿಸಿದರು.ನಮ್ಮ ಬೇರುಗಳನ್ನು ಗೌರವಿಸುತ್ತಲೇ ಆಧುನಿಕತೆಯನ್ನು ಅಪ್ಪಿಕೊಳ್ಳುವುದು ಹೇಗೆ ಎಂಬುದಕ್ಕೆ ಇದೊಂದು ಶ್ರೇಷ್ಠ ಉದಾಹರಣೆ.

ಸ್ಪೂರ್ತಿ ಸುಧೆ - 17

ಈ ಚಿಹ್ನೆಯಲ್ಲಿರುವ ಎರಡು ಸಮಾನಾಂತರ ರೇಖೆಗಳು ಆರ್ಥಿಕ ಸಮಾನತೆಯನ್ನು ಸಾರುತ್ತವೆ. ಯುವಜನತೆ ಕೇವಲ ಉದ್ಯೋಗಾಕಾಂಕ್ಷಿಗಳಾಗದೆ,ದೇಶದ ಪ್ರಗತಿಗೆ ಕೊಡುಗೆ ನೀಡುವ ಸೃಜನಶೀಲ ಚಿಂತಕರಾಗಬೇಕು. ಉದಯ ಕುಮಾರ್ ಅವರಂತೆ ನೀವು ಕೂಡ ನಿಮ್ಮ ಕ್ಷೇತ್ರಗಳಲ್ಲಿ ಹೊಸತನವನ್ನು ತರುವ ಮೂಲಕ ಭಾರತದ ಗೌರವವನ್ನು ಹೆಚ್ಚಿಸಬಹುದು.

ಸಾಧಿಸಲು ವಯಸ್ಸು ಅಥವಾ ಹಿನ್ನೆಲೆ ಅಡ್ಡಿಯಲ್ಲ,ನಾವೀನ್ಯತೆಯ ಹಂಬಲವಿದ್ದರೆ ಸಾಕು.ಭಾರತೀಯ ರೂಪಾಯಿಯ ಈ ಚಿಹ್ನೆಯು ಪ್ರತಿ ಯುವಕನಲ್ಲೂ ನಾನು ದೇಶಕ್ಕಾಗಿ ಏನನ್ನಾದರೂ ಮಾಡಬಲ್ಲೆ ಎಂಬ ಆತ್ಮವಿಶ್ವಾಸವನ್ನು ತುಂಬಲಿ.

# ಉಸಿರಾಟವೇ ಮೂಲಮಂತ್ರ ಯೋಗ: ಕಿ ಗಾಂಗ್, ಟೈ ಚಿ



| ರೂಪ ಮಂಜುನಾಥ ಹೊಳೆನರಸೀಪುರ

ಮನುಷ್ಯ ಹುಟ್ಟಿದ ದಿನದಿಂದ ಒಂದು ಕನಸು ಕಾಣುತ್ತಾನೆ. ಅದು ಸುಖವಾಗಿ ಬದುಕಬೇಕು ಎಂದು. ಆದರೆ ಸುಖದ ಅಡಿಪಾಯ ಏನು ಹಣವೇ ಅಧಿಕಾರವೇ ಪ್ರೀತಿಯೇ

ಇವೆಲ್ಲ ಇದ್ದರೂ, ಮೈ ನೋಯುತ್ತಿದ್ದರೆ, ಮನಸ್ಸು ಕಳವಳದಲ್ಲಿದ್ದರೆ ಯಾವ ಸುಖವೂ ಸುಖವಲ್ಲ. ಅದಕ್ಕೇ ನಮ್ಮ ಹಿರಿಯರು ಹೇಳಿದರು: ಆರೋಗ್ಯವೇ ಮಹಾಭಾಗ್ಯ. ಎಂದು.

**ಆರೋಗ್ಯ ಏಕೆ ಬೇಕು:**
ಆರೋಗ್ಯ ಕೇವಲ ರೋಗವಿಲ್ಲದಿರುವ ಸ್ಥಿತಿ ಮಾತ್ರವಲ್ಲ ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ದೈಹಿಕ, ಮಾನಸಿಕ ಮತ್ತು ಸಾಮಾಜಿಕ ನೆಲೆಯಲ್ಲಿ ಸಂಪೂರ್ಣ ಸ್ವಸ್ಥವಾಗಿರುವುದೇ ನಿಜವಾದ ಆರೋಗ್ಯ.

ಆರೋಗ್ಯ ಇದ್ದರೆ ಮಾತ್ರ ಕನಸು ಕಾಣಬಹುದು, ಕನಸು ನನಸು ಮಾಡಬಹುದು. ಮುಂದಿನ ಪೀಳಿಗೆಗೆ ಮಾರ್ಗದರ್ಶಕರಾಗಬಹುದು, ವೃದ್ಧಾಪ್ಯದಲ್ಲಿ ಘನತೆಯಿಂದ ಬದುಕಬಹುದು. ಆರೋಗ್ಯ ಒಬ್ಬ ವ್ಯಕ್ತಿಯ ಹಕ್ಕು ಮಾತ್ರವಲ್ಲ , ಇಡೀ ಸಮಾಜದ ಶಕ್ತಿ!

ಜಗತ್ತಿನ ದೇಶಗಳು ಆರೋಗ್ಯ ಕಾಪಾಡಿಕೊಳ್ಳುವ ಬಗೆ

ಭೂಮಿಯ ಮೇಲಿನ ವಿವಿಧ ದೇಶಗಳು ತಮ್ಮ ತಮ್ಮ ಮಣ್ಣಿಗೆ, ಸಂಸ್ಕೃತಿಗೆ ತಕ್ಕಂತೆ ಆರೋಗ್ಯದ ದಾರಿ ಹುಡುಕಿಕೊಂಡಿವೆ .ಅದನ್ನು ನೋಡಿದಾಗ ಬೆರಗಾಗುತ್ತದೆ.

ಜಪಾನ್ ಹರಾ ಹಾಚಿ ಬು ಎಂಬ ತತ್ವ ಅನುಸರಿಸುತ್ತಾರೆ ಹೊಟ್ಟೆ ತುಂಬುವ ಮೊದಲೇ ಊಟ ನಿಲ್ಲಿಸು, ಎಂಬರ್ಥ. ಜೊತೆಗೆ ಸಮುದ್ರಾಹಾರ, ಹಸಿರು ಚಹಾ, ನಿತ್ಯ ನಡಿಗೆ ಇವು ಜಪಾನಿಗರನ್ನು ದೀರ್ಘಾಯುಷಿಗಳನ್ನಾಗಿ ಮಾಡಿವೆ. ಓಕಿನಾವಾ ದ್ವೀಪದಲ್ಲಿ ನೂರು ವರ್ಷ ದಾಟಿದ ಜನರ ಸಂಖ್ಯೆ ಜಗತ್ತಿನಲ್ಲೇ ಅತ್ಯಧಿಕವಾಗಿದೆ.

ಭಾರತವು ಆಯುರ್ವೇದ, ಯೋಗ, ಧ್ಯಾನಗಳ ಈ ತ್ರಿವೇಣಿ ಸಂಗಮವು ಸಾವಿರಾರು ವರ್ಷಗಳಿಂದ ದೇಹ ಮತ್ತು ಮನಸ್ಸಿನ ಸಮತೋಲನ ಕಾಯ್ದಿಟ್ಟಿದೆ.ನಮ್ಮ ಸನಾತನ ಪದ್ಧತಿಯ ಅಡುಗೆಗಳು ಬಹಳ ಆರೋಗ್ಯಪೂರ್ಣವಾಗಿತ್ತು.ಅಡುಗೆ ಮನೆಯೇ ಔಷಧಾಲಯದ ಮಾದರಿಯಾಗಿತ್ತು. ಅಡುಗೆಯಲ್ಲಿ ಬಳಸುವ ಅರಿಶಿನ, ಜೀರಿಗೆ,ದೊಡ್ಡಿಪತ್ರೆ, ಕಾಳುಮೆಣಸು, ಮೆಂತ್ಯೆ ಇವು ಔಷಧಿಗಳೂ ಹೌದು, ರುಚಿಯೂ ಹೌದು. ಭೂತಾನ್ ಜಿಡಿಪಿ ಅಳೆಯದೆ ಒಟ್ಟು ರಾಷ್ಟ್ರೀಯ ಸಂತೋಷ ಅಳೆಯುವ ದೇಶ. ಮಾನಸಿಕ ಆರೋಗ್ಯ, ಪ್ರಕೃತಿಯೊಡನೆ ಸಹಬಾಳ್ವೆ, ಸರಳ ಜೀವನ, ಇಲ್ಲಿನ

**ಆರೋಗ್ಯ ಸೂತ್ರಗಳು:** ಭೂಮಧ್ಯ ಸಮುದ್ರ ತೀರದ ಗ್ರೀಸ್, ಇಟಲಿ, ಸ್ಪೇನ್ ಮುಂತಾದ ದೇಶಗಳಲ್ಲಿ ಮೆಡಿಟರೇನಿಯನ್ ಆಹಾರ ಪ್ರಸಿದ್ಧ. ಆಲಿವ್ ಎಣ್ಣೆ, ತರಕಾರಿ, ಮೀನು, ಕುಟುಂಬದೊಡನೆ ಸಂತೋಷದ ಊಟ , ಇವು ಹೃದಯದ ಆರೋಗ್ಯ ಕಾಯ್ದಿಡುತ್ತವೆ.


ಡೆನ್ಮಾರ್ಕ್, ಸ್ವೀಡನ್ ಗಳಲ್ಲಿ ಹೈಗ್ಗೆ ಎಂಬ ತತ್ವವಿದೆ. ಸಣ್ಣ ಸಂತೋಷಗಳಲ್ಲಿ ತೃಪ್ತಿ ಕಾಣು. ಬೆಚ್ಚನೆಯ ಮನೆ, ಆಪ್ತರ ಸಂಗ, ಬಿಸಿ ಕಾಫಿ , ಮಾನಸಿಕ ಆರೋಗ್ಯಕ್ಕೆ ಇಷ್ಟು ಸಾಕು ಎನ್ನುತ್ತಾರೆ.

ಕೀನ್ಯಾ, ಇಥಿಯೋಪಿಯಾ ದೇಶಗಳಲ್ಲಿ ನಿತ್ಯ ನಡಿಗೆ, ಕಷ್ಟದ ದೈಹಿಕ ದುಡಿಮೆ, ಸಮುದಾಯದ ಒಗ್ಗಟ್ಟು ಪಾಲಿಸುತ್ತಾರೆ. ಇಲ್ಲಿನ ಜನರ ದೈಹಿಕ ಸಹನಶಕ್ತಿ ಜಗತ್ತಿಗೇ ಮಾದರಿ!

**ಒಟ್ಟಿನಲ್ಲಿ ಹೇಳುವುದಾದರೆ, ಎಲ್ಲ ದೇಶಗಳ ಸಾರವೂ ಒಂದೇ:** ಮಿತ ಆಹಾರ, ನಿತ್ಯ ಚಲನೆ, ನೆಮ್ಮದಿಯ ಮನಸ್ಸು, ಪ್ರಕೃತಿಯೊಡನೆ ಸಂಪರ್ಕ ಇವೇ ನಾಲ್ಕು ಸ್ತಂಭಗಳನ್ನಾಧರಿಸಿ, ಆರೋಗ್ಯದ ಮಹಲನ್ನು ಕಟ್ಟಬೇಕು ಎಂಬುದಾಗಿದೆ.

ಹಾಗಾದರೆ ಈ ಚಲನೆ, ಉಸಿರಾಟ, ಮನಶ್ಶಾಂತಿಯನ್ನು ಒಟ್ಟಿಗೆ ಒದಗಿಸುವ ವಿದ್ಯೆಗಳು ಯಾವುದಾದರೂ ಇವೆಯೇ ಎಂದಾಗ, ಜಗತ್ತಿನ ಮೂರು ಮಹಾನ್ ಸಂಸ್ಕೃತಿಗಳು ಈ ಪ್ರಶ್ನೆಗೆ ತಮ್ಮದೇ ಉತ್ತರ ಕಂಡಿವೆ ಯೋಗ, ಕಿ ಗಾಂಗ್, ಮತ್ತು ಟೈ ಚಿ.

**ನಾಗರಿಕತೆಗಳು ಮೂರಾದರೂ, ಸಂದೇಶ ಒಂದೇ!:** ಭೂಮಿಯ ಮೂರು ಮೂಲೆಗಳಲ್ಲಿ, ಮೂರು ಭಿನ್ನ



ಭಾಷೆಗಳಲ್ಲಿ, ಮೂರು ಭಿನ್ನ ಸಂಸ್ಕೃತಿಗಳಲ್ಲಿ ಹುಟ್ಟಿದ ಈ ವಿದ್ಯೆಗಳು ಒಂದೇ ಸತ್ಯವನ್ನು ಸಾರುತ್ತವೆ ನಿನ್ನ ದೇಹವೇ ನಿನ್ನ ದೇವಾಲಯ, ಉಸಿರೇ ನಿನ್ನಯ ಸದ್ಗುರು!

**ಭಾರತದ ಕೊಡುಗೆ ಯೋಗ:** ಸಾವಿರಾರು ವರ್ಷಗಳ ಹಿಂದೆ, ಹಿಮಾಲಯದ ತಪ್ಪಲಿನಲ್ಲಿ ಕುಳಿತ ಋಷಿಮುನಿಗಳು ಒಂದು ರಹಸ್ಯ ಕಂಡುಹಿಡಿದರು ದೇಹ ಮತ್ತು ಮನಸ್ಸು ಬೇರೆ ಬೇರೆಯಲ್ಲ, ಒಂದೇ ನಾಣ್ಯದ ಎರಡು ಮುಖಗಳು ಎಂದು. ಆ ಅರಿವಿನಿಂದ ಹುಟ್ಟಿದ್ದೇ ಯೋಗ.

**ಯೋಗ ಎಂಬ ಶಬ್ದವೇ ಸಂಯೋಗ** ಜೀವಾತ್ಮ ಮತ್ತು ಪರಮಾತ್ಮನ ಮಿಲನ. ಪತಂಜಲಿ ಮಹರ್ಷಿಗಳು ತಮ್ಮ ಯೋಗಸೂತ್ರದಲ್ಲಿ ಇದನ್ನು ಎಂಟು ಅಂಗಗಳಲ್ಲಿ ವಿವರಿಸಿದರು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ. ಕೇವಲ ದೇಹ ಬಾಗಿಸುವಂಥ ವ್ಯಾಯಾಮ ಮಾತ್ರವೇ ಯೋಗವಲ್ಲ! ಈ ಎಂಟೂ ಅಂಗಗಳು ನಮ್ಮ ಆರೋಗ್ಯಪೂರ್ಣ ಜೀವನ ನಡೆಸಲು ಬೇಕಾದ ಒಂದು ಸಂಪೂರ್ಣ ತತ್ವಶಾಸ್ತ್ರ.

ಸೂರ್ಯನಮಸ್ಕಾರದ ಹನ್ನೆರಡು ಹಂತಗಳಲ್ಲಿ ಇಡೀ ಶರೀರ ಜಾಗೃತವಾಗುತ್ತದೆ. ಪ್ರಾಣಾಯಾಮದ ಒಂದೊಂದು ಉಸಿರಿನಲ್ಲಿ ಮನಸ್ಸು ನಿರ್ಮಲವಾಗುತ್ತದೆ. ಶವಾಸನದ ಮೌನದಲ್ಲಿ ಆತ್ಮ ವಿಶ್ರಾಂತಿ ಪಡೆಯುತ್ತದೆ.

**ಚೀನಾದ ಕೊಡುಗೆ ಕಿ ಗಾಂಗ್:** ಚೀನಾದ ಪ್ರಾಚೀನ ತತ್ವಜ್ಞಾನದಲ್ಲಿ ಕಿ (ಕು) ಎಂದರೆ ಜೀವಶಕ್ತಿ ಪ್ರತಿ ಜೀವಿಯಲ್ಲೂ ಹರಿಯುವ ಅದೃಶ್ಯ ಶಕ್ತಿಪ್ರವಾಹ. ಗಾಂಗ್ ಎಂದರೆ ಅಭ್ಯಾಸ, ಸಾಧನೆ. ಅಂದರೆ ಕಿ ಗಾಂಗ್ ಎಂದರೆ ಜೀವಶಕ್ತಿಯನ್ನು ಸಾಧನೆಯಿಂದ ಜಾಗೃತಗೊಳಿಸುವ ವಿದ್ಯೆ.

ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ಚೀನಾದ ವೈದ್ಯಕೀಯ ಪರಂಪರೆಯಲ್ಲಿ ಹುಟ್ಟಿದ ಈ ವಿದ್ಯೆ, ದೇಹದ ಒಳಗಿನ ಮೆರಿಡಿಯನ್ ಮಾರ್ಗಗಳಲ್ಲಿ ಶಕ್ತಿ ಸಲೀಸಾಗಿ ಹರಿಯಲು ಅನುವು ಮಾಡಿಕೊಡುತ್ತದೆ. ನಿಧಾನ ಉಸಿರಾಟ, ಮೃದು ಚಲನೆ, ಏಕಾಗ್ರಚಿತ್ತ ಮನಸ್ಸು ಇವು ಕಿ ಗಾಂಗ್‌ನ ಮೂರು ಆಧಾರ ಸ್ತಂಭಗಳು.

ಮರದಂತೆ ಬಿಗಿಯಾಗಿ ನಿಂತು, ಗಾಳಿಯಂತೆ ಉಸಿರಾಡಿ, ನೀರಿನಂತೆ ಮನಸ್ಸನ್ನು ಹರಿಯಬಿಡು ಇದು ಕಿ ಗಾಂಗ್‌ನ ತಿರುಳು.

**ಜಪಾನಿನ ಕೊಡುಗೆ ಟೈ ಚಿ:** ಟೈ ಚಿ ಮೂಲತಃ ಚೀನಾದ್ದೇ ಆದರೆ ಜಪಾನ್ ಮತ್ತು ಇಡೀ ಏಷ್ಯಾ ಖಂಡ ಅದನ್ನು ತನ್ನದಾಗಿಸಿಕೊಂಡು ಬೆಳೆಸಿತು. ಟೈ ಚಿ ಚುವಾನ್ ಎಂದರೆ ಮಹಾಶಕ್ತಿಯ ಮುಷ್ಟಿಯುದ್ಧ ಆದರೆ ಇದು ಯುದ್ಧಕ್ಕಿಂತಲೂ ಮಿಗಿಲಾಗಿ ಶಾಂತಿಯ ವಿದ್ಯೆ.

ಟೈ ಚಿಯ ಚಲನೆಗಳು ನದಿಯ ಹರಿವಿನಂತೆ ನಿರಂತರ, ನಿಧಾನ, ನಿರಾಯಾಸ. ಒಂದು ಭಂಗಿ ಮತ್ತೊಂದರೊಳಗೆ ಹರಿದು ಹೋಗುತ್ತದೆ. ನೋಡುವವರಿಗೆ ನೃತ್ಯದಂತೆ ಕಾಣುತ್ತದೆ, ಮಾಡುವವರಿಗೆ ಧ್ಯಾನದಂತೆ ಅನುಭವಕ್ಕೆ ಬರುತ್ತದೆ.

ವಿಶೇಷತಃ ವಯಸ್ಸಾದವರಿಗೆ ಟೈ ಚಿ ವರದಾನ ಸಮತೋಲನ ಸುಧಾರಿಸುತ್ತದೆ, ಬೀಳುವ ಅಪಾಯ ಕಡಿಮೆಯಾಗುತ್ತದೆ, ಮಂಡಿನೋವು ಶಮನವಾಗುತ್ತದೆ.

ಈ ಮೂರೂ ಪದ್ದತಿಗಳಲ್ಲೂ ಬಹಳಷ್ಟು ಸಾಮ್ಯತೆ ಇದೆ. ಭಾರತದಲ್ಲಿ 5000 ವರ್ಷಗಳಿಗೂ ಮುಂಚೆ ಜನ್ಯವಾದ ಯೋಗಪದ್ದತಿಯ ಕೇಂದ್ರ ತತ್ವ ಪ್ರಾಣ ಮತ್ತು ಇದರ ವಿಶೇಷತೆ ಆಸನ ಮತ್ತು ಧ್ಯಾನ! ಅದೇ ಕಿ ಗಾಂಗ್ ಪದ್ದತಿ 4000 ವರ್ಷಕ್ಕೂ ಹಿಂದಿನಿಂದ ಪ್ರಚಲಿತದಲ್ಲಿದೆ. ಇದರ ಕೇಂದ್ರ ತತ್ವ , ಕಿ , ಮತ್ತು ಇದರ ವಿಶೇಷತೆ ಶಕ್ತಿ ಜಾಗೃತಿ! ಇನ್ನು ಚೀನಾದ ಟೈಚಿ ವಿದ್ಯೆಗೆ 700 ವರ್ಷಗಳಿಗೂ ಹಿಂದಿನ ಇತಿಹಾಸವಿದೆ. ಇದರ ಕೇಂದ್ರ ತತ್ವ, ಯಿಂಗ್-ಯಾನ್ ಮತ್ತು ಇದರ ವಿಶೇಷತೆ ಚಲನಾ ಧ್ಯಾನ.

**ವಿಜ್ಞಾನ ಏನು ಹೇಳುತ್ತದೆ:** ಇಂದಿನ ಆಧುನಿಕ ವಿಜ್ಞಾನ ಈ ಮೂರೂ ವಿದ್ಯೆಗಳ ಪ್ರಯೋಜನಗಳನ್ನು ದೃಢಪಡಿಸಿದೆ:

ರಕ್ತದೊತ್ತಡ ನಿಯಂತ್ರಣ, ಮಧುಮೇಹ ನಿರ್ವಹಣೆ, ಮಾನಸಿಕ ಖಿನ್ನತೆ ನಿವಾರಣೆ, ನಿದ್ರಾಹೀನತೆ ಗುಣಮುಖ, ರೋಗನಿರೋಧಕ ಶಕ್ತಿ ವೃದ್ಧಿ ಇವೆಲ್ಲವೂ ವೈಜ್ಞಾನಿಕವಾಗಿ ಸಾಬೀತಾಗಿವೆ.ಈ ಪದ್ದತಿಗಳನ್ನು ನಿತ್ಯ ನಮ್ಮ ದಿನಚರಿಯಲ್ಲಿ ಅಳವಡಿಸಿಕೊಂಡರೆ, ಔಷಧಿ ಇಲ್ಲದೆ, ಖರ್ಚಿಲ್ಲದೆ, ಅಡ್ಡಪರಿಣಾಮವಿಲ್ಲದೆ ಬಹಳಷ್ಟು ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

**ಆರೋಗ್ಯಕ್ಕೊಂದು ಸಂದೇಶ:** ವಿಪರ್ಯಾಸವೆಂದರೆ, ನಾವುಗಳು ಅಪ್ಪಿತಪ್ಪಿಯೂ ನಮ್ಮ ಮೊಬೈಲ್ಗಳನ್ನ ಚಾರ್ಜ್ ಮಾಡಲು ಮರೆಯುವುದಿಲ್ಲ. ಆದರೆ ನಮ್ಮ ದೇಹವನ್ನು, ಮನಸ್ಸನ್ನು ಚಾರ್ಜ್ ಮಾಡಲು ಮರೆಯುತ್ತೇವೆ. ಯೋಗ, ಕಿ ಗಾಂಗ್, ಟೈ ಚಿ ಇವು ನಮ್ಮ ಪೂರ್ವಜರು ಕಂಡುಹಿಡಿದ ಪುಗಸಟ್ಟೆ ಚಾರ್ಜರ್‌ಗಳು.

ಮೂರು ನಾಗರಿಕತೆಗಳು ಸಾವಿರಾರು ವರ್ಷಗಳ ಹಿಂದೆಯೇ ಒಂದು ರಹಸ್ಯ ತಿಳಿದಿದ್ದವು ಆರೋಗ್ಯ ಎಂದರೆ ರೋಗವಿಲ್ಲದಿರುವುದು ಮಾತ್ರವಲ್ಲ, ದೇಹ-ಮನಸ್ಸು-ಆತ್ಮ ಮೂರೂ ಒಂದಾಗಿ ಮೇಳೈಸಿ ಮಿಡಿಯುವ ಸಂಪೂರ್ಣ ರಾಗ !

ಪ್ರತಿದಿನ ಬೆಳಿಗ್ಗೆ ಕೇವಲ ಇಪ್ಪತ್ತರಿಂದ ಮೂವತ್ತು ನಿಮಿಷ ಯೋಗವಾದರೂ ಸರಿ, ಕಿ ಗಾಂಗ್ ಆದರೂ ಸರಿ, ಟೈ ಚಿ ಆದರೂ ಸರಿ ಮಾಡುವುದನ್ನ ಪದ್ದತಿ ಮಾಡಿಕೊಳ್ಳಿ. ನಿಮ್ಮ ದೇಹ ನಿಮಗೆ ಧನ್ಯವಾದ ಹೇಳುತ್ತದೆ, ನಿಮ್ಮ ಮನಸ್ಸು ನಿಮಗೆ ಕೃತಜ್ಞತೆ ಅರ್ಪಿಸುತ್ತದೆ.

ಉಸಿರಿರುವಷ್ಟು ಕಾಲ ಆರೋಗ್ಯವಾಗಿರಿ ಉಸಿರಿನ ಗತಿಯಿಂದಲೇ ಆರೋಗ್ಯ ಕಾಪಾಡಿಕೊಳ್ಳಿ. ವಂದನೆಗಳು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,